ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ


ಸಂಪುಟ 27 ಸಂಚಿಕೆ 4-6 ಫೆಬ್ರವರಿ 06, 2005 ಬೆಲೆ ರೂ. 3.00

ಸಿಪಿಐ(ಎಂ) ನ 18ನೇ ರಾಜ್ಯ ಸಮ್ಮೇಳನ





ಸಮರಧೀರ ಹೋರಾಟಗಳು ವಿಸ್ತರಿಸಲು ಸಜ್ಜು



ಕೋಮುವಾದಿಗಳ ಕೋಟೆಯಲ್ಲಿ ಮೊಳಗಿದ ಕೆಂಪು ಧ್ವನಿ

ವಿಶಿಷ್ಟ ಕಲಾಪಗಳು, ವೈವಿಧ್ಯಮಯ ಕಾರ್ಯಕ್ರಮಗಳು

ಗಣತಂತ್ರದ ಕ್ರೋಢೀಕರಣಕ್ಕಾಗಿ ಜನತಾ ಆಂದೋಲನ

- ಬೆನ್‌ಹಿನ್‌ನ ಬೆನ್ನು ಬಿನ್ನ ಬಿಜೆಪಿ
- ಬಾಬಾಬುಡನ್ ಗಿರಿ ಕರಸೇವೆಯ ಕುತಂತ್ರ
- ಆದರ್ಶ ನೇತಾರ, ಸರಳ ಜೀವಿ ನೃಪೇನ್ ಚಕ್ರವರ್ತಿ

'ಸೂರ್ಯಶಿಕಾರಿ' ಈಗ ಯಕ್ಷಗಾನದಲ್ಲಿ



ಆದರ್ಶ ಕಮ್ಯೂನಿಸ್ಟ್ ನೇತಾರ, ಸರಳ ಜೀವಿ

ನೃಪೇನ್ ಚಕ್ರವರ್ತಿ



ದೇಶ ಕಂಡ ಅಪರೂಪದ ವಿಭಿನ್ನ ವ್ಯಕ್ತಿತ್ವದ ನಾಯಕ ನೃಪೇನ್. ವಿದ್ಯಾರ್ಥಿ ದೆಸೆಯಲ್ಲೇ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದಲ್ಲಿ ಧುಮುಕಿದ ಮಹಾನ್ ದೇಶಪ್ರೇಮಿ ಜೀವನದುದ್ದಕ್ಕೂ ದುಡಿವವರ್ಗದ ವಿಮೋಚನೆಗಾಗಿ ಶ್ರಮಿಸಿದರು. ಈ ಶತಾಯುಷಿ ಬದುಕಿನತ್ತ ಒಂದು ನೋಟ.

ತ್ಯಾಗಮಯಿಯಾದ ಜೀವಾನುಭವ ಹೊಂದಿದ ಭಾರತ ಕಮ್ಯೂನಿಸ್ಟ್ ಚಳುವಳಿಯ ಅಗ್ರ ಪಂಕ್ತಿಯ ಮುಖಂಡರಲ್ಲಿ ಒಬ್ಬರಾದ ನೃಪೇನ್ ಚಕ್ರವರ್ತಿಯವರ ನಿಧನದಿಂದ ಕಮ್ಯೂನಿಸ್ಟ್ ಚಳುವಳಿಗೆ ಅಪಾರ ನಷ್ಟವಾಗಿದೆ. ಪೂರ್ಣ ಆಯುಷ್ಯವನ್ನು ಸಾರ್ವಜನಿಕ ಜೀವನಕ್ಕೆ ಹಾಗೂ ಕ್ರಾಂತಿಕಾರಿ ಚಳುವಳಿಗಾಗಿ ಮುಡುಪಾಗಿಟ್ಟ ತ್ಯಾಗಮಯಿ ಜೀವನದ ಶಿಖರವೇ ನೃಪೇನ್ ಚಕ್ರವರ್ತಿ. ಜೀವನದ ಕೊನೆಯ ಕಾಲದಲ್ಲಿ ಪಕ್ಷದೊಡನೆ ಕೆಲವು ಅಭಿಪ್ರಾಯ ವ್ಯತ್ಯಾಸಗಳನ್ನು ಹೊಂದಿದ್ದರೂ ಅದನ್ನು ತಿದ್ದಿಕೊಂಡು ಒಬ್ಬ ಕಮ್ಯೂನಿಸ್ಟ್ ಸದಸ್ಯನಾಗಿ ಸಾವನ್ನಪ್ಪಬೇಕೆಂಬ ಆಗ್ರಹ ಅವರಿಗಿತ್ತು. ಕೆಲವು ಅಭಿಪ್ರಾಯ ವ್ಯತ್ಯಾಸಗಳ ಕಾರಣ 1995 ರಲ್ಲಿ ಸಿಪಿಐ(ಎಂ) ನಿಂದ ಇವರನ್ನು ಹೊರಗಿಡಲಾಗಿತ್ತು. ಇವರು ನಿಧನರಾಗುವ ಎರಡು ದಿನಗಳ ಮೊದಲು ಪಕ್ಷದ ಸದಸ್ಯತ್ವವನ್ನು ಪುನಃ ಪಡೆದುಕೊಂಡಿದ್ದರು. ಈ ರೀತಿ ತನ್ನ ಜೀವನಾಭಿಲಾಷೆ ಪೂರ್ಣವಾಗಿದೆ ಎಂದು ಹೇಳಿಯೇ ನಿಧನರಾದರು.

ಶತಾಯುಷಿ ಜೀವನ ಮುಕ್ಕಾಲು ಪಾಲನ್ನು ಕೆಳಮಟ್ಟದ ಜನ ವಿಭಾಗಗಳ ಒಳಿತಿಗಾಗಿ ಜನರ ಚಳುವಳಿಯ ಬೆಳವಣಿಗೆಗಾಗಿ ಮೀಸಲಿಟ್ಟಿದ್ದರು. ನೃಪೇನ್ ಚಕ್ರವರ್ತಿಯವರ ಜನನ ಬಂಗಾಳದಲ್ಲಾಗಿದ್ದರೂ ಅವರು ತಮ್ಮ ಕೆಲಸದ ಶೈಲಿಯಿಂದ ತ್ರಿಪುರ ಜನತೆಯ ಜೀವನಾಡಿಯ ಒಂದು ಭಾಗವಾಗಿದ್ದರು.

ರಾಷ್ಟ್ರೀಯ ಚಳುವಳಿಯಲ್ಲಿ

1905 ರಲ್ಲಿ ಈಗ ಬಾಂಗ್ಲಾ ದೇಶದಲ್ಲಿರುವ ಅಧಿದಾಗಾ ಜಿಲ್ಲೆಯ ಬಿಕ್ರಂಪುರ್ ಗ್ರಾಮದಲ್ಲಿ ರಾಜಕುಮಾರ್ ಚಕ್ರವರ್ತಿ ಹಾಗೂ ಉತ್ತಮ ಸುಂದರಿ ಇವರ ಒಂಭತ್ತು ಮಕ್ಕಳಲ್ಲಿ ಎಂಟನೆಯವರಾಗಿ ಜನಿಸಿ ಇವರು ಓದಿನಲ್ಲಿ ಬಹಳ ಮುಂದಿದ್ದರು. ಅತಿ ಹೆಚ್ಚಿನ ಅಂಕಗಳನ್ನು ಪಡೆದು ವಿದ್ಯಾಭ್ಯಾಸ ಪೂರೈಸಿದ್ದ ಇವರು ಡಾಕಾ ವಿಶ್ವವಿದ್ಯಾನಿಲಯದಲ್ಲಿ ಉನ್ನತ ಶ್ರೇಣಿಯಲ್ಲಿ ಬಿ.ಎ. ಪದವಿ ಪಡೆದು ನಂತರ ಉನ್ನತ ವಿದ್ಯಾಭ್ಯಾಸಕ್ಕಾಗಿ ಕಲ್ಕತ್ತಾ ವಿಶ್ವ ವಿದ್ಯಾಲಯ ಸೇರಿ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದ ನಂತರ ಕಾನೂನು ಪದವಿ ಶಿಕ್ಷಣ ಸೇರಿದರು. ಆದರೆ ಪೂರ್ಣಗೊಳಿಸಲಿಲ್ಲ. ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ರಾಜಕೀಯ ಜೀವನ ಪ್ರಾರಂಭಿಸಿದ ನೃಪೇನ್ ಚಕ್ರವರ್ತಿಯವರು ಮಹಾತ್ಮಾ ಗಾಂಧಿಯವರು ಪ್ರಾರಂಭಿಸಿದ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದ್ದರು.

ಗಾಂಧೀಜಿಯವರ ದಂಡೀಯಾತ್ರೆಗೆ ಸಮನಾಗಿ ಬಂಗಾಳದಲ್ಲಿ ನಡೆದ ಉಪ್ಪಿನ ಜಾಥಾದಲ್ಲಿ ನೃಪೇನ್ ಚಕ್ರವರ್ತಿ ಭಾಗವಹಿಸಿದ್ದರು. 1930 ರಲ್ಲಿ ಡಾಕಾದಲ್ಲಿ ನಡೆದ ಭಂಗ ಚಳುವಳಿಯಲ್ಲಿ ಭಾಗವಹಿಸಿ ಬಂಧನಕ್ಕೆ ಒಳಗಾಗಿ 3 ತಿಂಗಳು ಡಂಡಂ ಜೈಲಿನಲ್ಲಿ ಸೆರೆವಾಸ ಅನುಭವಿಸಿದ್ದರು. ಸೆರೆವಾಸದಲ್ಲಿರುವಾಗ ಡಾ.ಪ್ರಫುಲ್ಲಾ ಘೋಶ್, ಡಾ.ಸುರೇಶ್, ಬ್ಯಾನರ್ಜಿ ಜೊತೆ ಸಂಬಂಧ ಬೆಳೆಸಿದ ನೃಪೇನ್ ಚಕ್ರವರ್ತಿ, ಇವರು ನಡೆಸುತ್ತಿದ್ದ ಅಭಯಾಶ್ರಮದಲ್ಲಿ ಕೆಲಸ ಮಾಡಿದರು. ಆದರೆ ಈ ಕೆಲಸ ಹೆಚ್ಚು ದಿನ ಮುಂದುವರೆಸಲು ಸಾಧ್ಯವಾಗಲಿಲ್ಲ.

ಕಾಂಗ್ರೆಸ್ ಅಸಹಕಾರ ಚಳುವಳಿಯನ್ನು ಹಿಂತೆಗೆದುಕೊಂಡ ಕಾರಣದಿಂದ ನಿರಾಶರಾದ ದೇಶದ ಯುವಕರ ಪಟ್ಟಿಯಲ್ಲಿ ನೃಪೇನ್ ಚಕ್ರವರ್ತಿ ಕೂಡಾ ಒಬ್ಬರಾಗಿದ್ದರು. ಹೊಸ ದಾರಿಯನ್ನು ಕಂಡು ಕೊಂಡ ಇವರು ಕೊನೆಗೆ ಅಹಮದಾಬಾದ್‌ನಲ್ಲಿ ಮಿಲ್ ಕೆಲಸಗಾರರನ್ನು ಸಂಘಟಿಸುವ ಜೊತೆಯಲ್ಲಿ ಬಂಗಾಳದಲ್ಲಿ ಬೆಂಗಾಳ್ ಲೇಬರ್ ಅಸೋಷಿಯನ್ ಸ್ಥಾಪಿಸಿದ್ದರು. ಅದಕ್ಕಾಗಿ ಸ್ವಲ್ಪಕಾಲ ಸೆಣಬು ಕಾರ್ಖಾನೆಯಲ್ಲಿ ಕಾರ್ಮಿಕನಾಗಿ ಸಹ ಕೆಲಸಕ್ಕೆ ಸೇರಿದ್ದರು. ಬೆಂಗಾಳ್ ಲೇಬರ್ ಅಸೋಷಿಯನ್ ಕಾರ್ಯಕರ್ತನಾಗಿ ಸೆಣಬು ಕಾರ್ಖಾನೆ ಕಾರ್ಮಿಕರನ್ನು ಸಂಘಟಿಸುವ ಜೊತೆಯಲ್ಲಿ ಕಾರ್ಪೊರೇಷನ್ ಕಾರ್ಮಿಕರನ್ನು, ಛತ್ರಿ ನಿರ್ಮಿಸುವ ಕಾರ್ಖಾನೆಯ ಕಾರ್ಮಿಕರನ್ನು ಸಂಘಟಿಸಿದರು.

ಕಮ್ಯುನಿಸ್ಟನಾಗಿ

ಕಾಂಗ್ರೆಸ್ ಒಳಗಿರುವ ಎಡ ಚಿಂತಕರು ಕಾಂಗ್ರೆಸ್‌ನಿಂದ ಹೊರಬಂದು ಕಾಂಗ್ರೆಸ್ ಸೋಷಲಿಸ್ಟ್ ಪಾರ್ಟಿ ರೂಪೀಕರಿಸುವಲ್ಲಿ ಇವರು ಬಂಗಾಳದಲ್ಲಿ ಮುಖ್ಯಪಾತ್ರ ವಹಿಸಿದ್ದರು. ದಿವಂಗತ ಪ್ರಮುಖ ಕಮ್ಯೂನಿಸ್ಟ್ ನೇತಾರ ಹಿರೇನ್ ಮುಖರ್ಜಿ ಹಾಗೂ ನೃಪೇನ್ ಚಕ್ರವರ್ತಿ ಇವರು ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಬಂಗಾಳ ಘಟಕದ ಕಾರ್ಯದರ್ಶಿಗಳಾಗಿದ್ದರು. 1930 ರ ಕಾಲಘಟ್ಟದಲ್ಲಿ ಇದ್ದಂತಹ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಣೆ ಮಾಡಿ ಸ್ವತಃ ಅಭ್ಯಾಸ ನಡೆಸಿ ಕ್ರಮೇಣ ನೃಪೇನ್ ಚಕ್ರವರ್ತಿಯವರು ಮಾರ್ಕ್ಸ್‌ವಾದದ ತತ್ವಗಳಿಗೆ ಆಕರ್ಷಿತರಾದರು. 1934 ರಲ್ಲಿ ನೃಪೇನ್ ಚಕ್ರವರ್ತಿ ಕಮ್ಯೂನಿಸ್ಟ್ ಪಕ್ಷದ ಸದಸ್ಯರಾದರು. ಪತ್ರಿಕಾ ರಂಗದ ಕೆಲಸದಲ್ಲಿಯೂ ಇವರಿಗೆ ಬಹಳ ಆಸಕ್ತಿಯಿತ್ತು. ಕಮ್ಯೂನಿಸ್ಟ್ ಪಕ್ಷದ ಸದಸ್ಯರಾಗಿದ್ದ ಸಮಯದಲ್ಲಿಯೇ ಬಂಗಾಳದ ಪ್ರಸಿದ್ದ ಆನಂದ್ ಬಜಾರ್ ಪತ್ರಿಕೆಯಲ್ಲಿ ಉಪಸಂಪಾದಕರಾಗಿಯೂ ಸಹಾ ಕೆಲಸ ಮಾಡಿರುತ್ತಾರೆ.

1936 ರಲ್ಲಿ ಪಕ್ಷದ ಕೇಂದ್ರ ಸಮಿತಿ ನೃಪೇನ್ ಚಕ್ರವರ್ತಿಯವರನ್ನು ಬಂಗಾಳ ಪ್ರಾದೇಶಿಕ ಸಮಿತಿಗೆ ನೇಮಿಸಿತು. 1938 ರಲ್ಲಿ ಫ್ರೆಂಚ್ ಅಧೀನದಲ್ಲಿರುವ ಪ್ರದೇಶವಾದ ಚಂದನ್ ನಗರದಲ್ಲಿ ನಡೆದ ಕಮ್ಯೂನಿಸ್ಟ್ ಪಕ್ಷದ ಎರಡನೇ ಬಂಗಾಳ ಪ್ರಾದೇಶಿಕ ಭೂಗತ ಸಮ್ಮೇಳನದಲ್ಲಿ ನೃಪೇನ್ ಚಕ್ರವರ್ತಿಯವರನ್ನು ಪಕ್ಷದ ರಾಜ್ಯ ಕಾರ್ಯದರ್ಶಿಯಾಗಿ ಆರಿಸಲಾಯಿತು. ಆ ಸಮ್ಮೇಳನದಲ್ಲಿ 47 ಮಂದಿ ಸದಸ್ಯರು ಭಾಗವಹಿಸಿದ್ದರು. ಮುಜಾಫರ್ ಅಹಮದ್, ಅಬ್ದುಲ್ ಹಲೀಂ, ಅಂಬಾನಿ ಸೇನ ಸೋಮನಾಥ್ ಲಹರಿ, ರಣನ್ ಸೇನ್, ಪಂಚಗೋಪಾಲ್ ಬಹದ್ದೂರಿ, ಸರೋಜ್ ಮುಖರ್ಜಿ ಇವರು ರಾಜ್ಯಸಮಿತಿ ಸದಸ್ಯರಾಗಿ ಆಯ್ಕೆಯಾಗಿದ್ದರು.

1939 ರಲ್ಲಿ ಪಕ್ಷವನ್ನು ನಿಷೇಧ ಮಾಡಿದಾಗ ನೃಪೇನ್ ಚಕ್ರವರ್ತಿ ಸಹಾ ಭೂಗತರಾಗ ಬೇಕಾಯಿತು. ಭೂಗತರಾಗಿ ಕೆಲಸ ಮಾಡುತ್ತಿದ್ದಾಗ 1940 ರಲ್ಲಿ ಉತ್ತರ ಕಲ್ಕತ್ತಾದಲ್ಲಿ ಇವರನ್ನು ಪೊಲೀಸರು ಬಂಧಿಸಿದರು. ಕೆಲವು ದಿನ ಇವರನ್ನು ಹಿಜ್ಲಾಲ ಶಿಬಿರ ಜೈಲಿನಲ್ಲಿ ಇಡಲಾಯಿತು. 1941 ರಲ್ಲಿ ಪಂಚಗೋಪಾಲ್ ಬಹದ್ದೂರಿ ಹಾಗೂ ಹಲವು ಸಂಗಾತಿಗಳ ಜೊತೆ ಇವರು ಶಿಬಿರದ ಜೈಲಿನಿಂದ ಸಾಹಸಮಯ ರೀತಿಯಲ್ಲಿ ಪರಾರಿಯಾದರು. 1942 ರಲ್ಲಿ ಪಕ್ಷದ ಮೇಲಿದ್ದ ನಿಷೇಧ ರದ್ದಾಯಿತು. ಆದರೆ ಸೆರೆಮನೆಯಿಂದ ತಪ್ಪಿಸಿಕೊಂಡ ಕಾರಣಕ್ಕಾಗಿ ಇವರ ಮೇಲಿದ್ದ ಮೊಕದ್ದಮೆ ಮುಂದುವರೆಯಿತು. ಆ ಕಾರಣ ಪುನಃ ಭೂಗತರಾಗಬೇಕಾಯಿತು. 1943 ರಲ್ಲಿ ಮುಂಬೈಯಲ್ಲಿ ಸೇರಿದ್ದ ಪಕ್ಷದ ಮೊದಲನೇ ಅಖಿಲ ಭಾರತ ಸಮ್ಮೇಳನ ನಂತರ ಭೂಗತ ಜೀವನ ಕೊನೆಗೊಳಿಸಿದರು. ಪಕ್ಷದ ಕಲ್ಕತ್ತಾ ಜಿಲ್ಲಾ ಸಮಿತಿಯ ಜವಾಬ್ದಾರಿಯನ್ನು ನೃಪೇನ್ ಚಕ್ರವರ್ತಿಗೆ ವಹಿಸಲಾಗಿತ್ತು. ಈ ಸಮಯದಲ್ಲಿಯೇ ಪಾರ್ಟಿ ಕಮ್ಯೂನ್ ಜೀವನ ಆರಂಭಿಸಿದರು.

ಇವರು ನಡೆಸುತ್ತಿದ್ದ ಕಮ್ಯೂನ್‌ನಲ್ಲಿ 20 ಮಂದಿ ಸಂಗಾತಿಗಳಿದ್ದರು. ಬ್ರಿಟೀಷ್ ಸೈನ್ಯದಲ್ಲಿ ಕೆಲಸ ಮಾಡುತ್ತಿದ್ದಂತಹ ಹಲವು ಪಕ್ಷದ ಹಿತೈಷಿಗಳು ಈ ಕಮ್ಯೂನ್‌ನಲ್ಲಿ ಸೇರಿದ್ದರು. 1945 ರಲ್ಲಿ ಪಕ್ಷದ ಬಂಗಾಲ ಘಟಕದ ಪತ್ರಿಕೆಯಾದ "ಸ್ವಾದೀನತಾ" ಪ್ರಾರಂಭವಾದಾಗ ನೃಪೇನ್ ಚಕ್ರವರ್ತಿ ಇದರ ಸಂಪಾದಕೀಯ ಮಂಡಳಿ ಸದಸ್ಯರಾಗಿದ್ದರು. ಸೋಮನಾಥ್ ಲಹರಿ ಸಂಪಾದಕರಾಗಿದ್ದರೂ ಪತ್ರಿಕೆಯ ಎಲ್ಲಾ ಕೆಲಸವನ್ನು ನೃಪೇನ್ ಚಕ್ರವರ್ತಿ ನಿರ್ವಹಿಸುತ್ತಿದ್ದರು. ಬಂಗಾಳದ ಹಲವು ಪ್ರಮುಖ ಪತ್ರಕರ್ತರಿಗೆ ನೃಪೇನ್ ಚಕ್ರವರ್ತಿಯವರ ಪತ್ರಿಕಾ ಗರಡಿಯಲ್ಲಿ ಶಿಕ್ಷಣ ದೊರೆತಿದೆ. 1948 ರಲ್ಲಿ ಪಕ್ಷವನ್ನು ಪುನಃ ನಿಷೇಧಿಸಿದಾಗ ನೃಪೇನ್ ಚಕ್ರವರ್ತಿ ಪುನಃ ಭೂಗತರಾದರು.

ಹೊಸ ಅಧ್ಯಾಯ

1950 ರಲ್ಲಿ ಪ್ರಾರಂಭದಲ್ಲಿ ನೃಪೇನ್ ಚಕ್ರವರ್ತಿ ತ್ರಿಪುರಕ್ಕೆ ಹೋದಾಗ ಅವರ ರಾಜಕೀಯ ಜೀವನದ ಹೊಸ ಅಧ್ಯಾಯ ಪ್ರಾರಂಭವಾಯಿತು. 1947ರಲ್ಲಿ

ಪುಟ 4 ನೋಡಿ

ನೃಪೇನ್ ಚಕ್ರವರ್ತಿಯವರ ಕರ್ನಾಟಕದ ಭೇಟಿ

1978 ರಲ್ಲಿ ಪ್ರಸಿದ್ದ ಚಿಕ್ಕಮಗಳೂರು ಲೋಕಸಭಾ ಚುನಾವಣೆಯಲ್ಲಿ ಇಂದಿರಾಗಾಂಧಿಯವರು ಸ್ಪರ್ಧಿಸಿದ್ದಾಗ ಅವರ ವಿರುದ್ಧ ಪ್ರಚಾರಕ್ಕೆ ಕಾಂ.ನೃಪೇನ್ ಚಕ್ರವರ್ತಿ ಬೆಂಗಳೂರಿಗೆ ಬಂದಾಗ ಅಂದು ದೆಹಲಿಯಿಂದ ಬರಬೇಕಾದ ವಿಮಾನ ತಡವಾಗಿ ಬೆಂಗಳೂರಿಗೆ ಬಂತು. ನೃಪೇನ್ ಚಕ್ರವರ್ತಿಯವರು ಬರುವ ವಿಷಯ ತಿಳಿದು ಪಕ್ಷದ ಕಾರ್ಯಕರ್ತರು ಕೆಂಬಾವುಟ ಹಿಡಿದು ಸ್ವಾಗತ ನೀಡಲು ವಿಧಾನ ನಿಲ್ದಾಣಕ್ಕೆ ಹೋದಾಗ ಕಾರ್ಯಕರ್ತರನ್ನು ಉದ್ದೇಶಿಸಿ ವಿಮಾನ ನಿಲ್ದಾಣದ ಹೊರ ಆವರಣದ ಗೋಡೆ ಮೇಲೆ ಹತ್ತಿ ನಿಂತು ಮಾತನಾಡಿದ್ದರು. ಗೋಡೆ ಹತ್ತಲು ಸಹಾಯ ನೀಡಬೇಕಾಯಿತು. ನಂತರ ಚಿಕ್ಕಮಗಳೂರಿಗೆ ರಾಜ್ಯ ಸರ್ಕಾರದ ಅತಿಥಿಯಾಗಿ ಕಾರಿನಲ್ಲಿ ಪ್ರಯಾಣಿಸಿದ್ದ ನೃಪೇನ್ ಚಕ್ರವರ್ತಿಯವರು ಹಾಸನ ದಾಟಿದ ನಂತರ ಮಧ್ಯರಾತ್ರಿ ಸಮಯದಲ್ಲಿ ಊಟಕ್ಕಾಗಿ ರಸ್ತೆ ಬದಿಯ ಸಣ್ಣ ಹೋಟೇಲಿನ ಬಳಿ ಕಾರ್ ನಿಲ್ಲಿಸಿದ್ದರು. ಆ ಸಮಯ ದಲ್ಲಿ ಹೋಟೆಲ್ ಮುಚ್ಚುವ ಸಮಯವಾಗಿತ್ತು ಮಲೆಯಾಳಿ ಮುಸ್ಲಿಂನಾದ ಮಾಲೀಕನ ಬಳಿ ಈ ರೀತಿ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿಯವರಿಗೆ ಊಟ ಬೇಕಾಗಿದೆ ಎಂದಾಗ ಅವರು ಸಂತೋಷದಿಂದ ಮುಚ್ಚಿರುವ ಹೋಟೆಲನ್ನು ತೆರೆದು ಬಿಸಿಬಿಸಿಯಾಗಿ ಪರೋಟ ಹಾಗೂ ಎಗ್ ಮಸಾಲ ತಯಾರಿ ಕೊಟ್ಟಿದ್ದರು. ಊಟ ಮಾಡುವ ಸಮಯ ದಲ್ಲಿ ಜೊತೆಗೆ ಬೆಂಗಳೂರಿನಿಂದ ಬೆಂಗಾವಲಿಗೆ ಬಂದ ಪೊಲೀಸರನ್ನು ಹಾಗೂ ಚಾಲಕನನ್ನು ತಮ್ಮ ಜೊತೆಯಲ್ಲಿಯೇ ಊಟಕ್ಕೆ ಕೂರಲು ಹೇಳಿದರು. ಆದರೆ ಪೊಲೀಸರು ಮುಖ್ಯಮಂತ್ರಿ ಎದುರು ಕುಳಿತು ಊಟ ಮಾಡಲು ಬಹಳ ಮುಜುಗರಪಟ್ಟರು. ಬಹಳ ಒತ್ತಾಯದ ನಂತರ ಪೊಲೀಸರು ಬೇಗಬೇಗನೆ ಊಟ ಮುಗಿಸಿ ಹೊರಬಂದು "ಈ ರೀತಿಯ ಸರಳ ಮುಖ್ಯಮಂತ್ರಿಗಳು ನಮ್ಮ ದೇಶದಲ್ಲಿದ್ದಾರಾ" ಎಂದು ಆಶ್ಚರ್ಯ ಸೂಚಿಸಿದರು.

• • •

ಇಂತಹುದೇ ಇನ್ನೊಂದು ಪ್ರಸಂಗ ಚಿಕ್ಕಮಗಳೂರಿನಲ್ಲಿ ನಡೆಯಿತು. ಅಂದಿನ ಬಹಿರಂಗ ಸಭೆಯಲ್ಲಿ ಕಾಂ. ನೃಪೇನ್ ಚಕ್ರವರ್ತಿ ಮಾತನಾಡುವವರಿದ್ದರು. (ಇಂದಿರಾ ಸೋಲಿಸಲು). ಸಭೆ ಆರಂಭಕ್ಕೆ ಮೊದಲು ವೇದಿಕೆ ಮೇಲಿಂದ ತ್ರಿಪುರಾ ಮುಖ್ಯಮಂತ್ರಿಗಳು ಮಾತನಾಡಲು ಆಗಮಿಸುತ್ತಾರೆ ಎಂದು ಪ್ರಕಟಿಸಲಾಗುತ್ತಿತ್ತು. ನಿಗದಿತ ಸಮಯಕ್ಕೆ ಸರಿಯಾಗಿ ತಲುಪಿದ್ದ ನೃಪೇನ್ ಚಹ ಕುಡಿಯಲೆಂದು ಒಂದು ಸಣ್ಣ ಹೋಟೆಲ್ ಮುಂದೆ ನಿಂತಿದ್ದರು. ಚಹಾ ಅಂಗಡಿಯವನಿಗೆ, ಅಲ್ಲಿದ್ದವರಿಗೆ ಇವರೇ ನೃಪೇನ್ ಎಂದು ಗೊತ್ತಿಲ್ಲ. ಆ ನಂತರ ವೇದಿಕೆಗೆ ಅವರನ್ನು ಆಹ್ವಾನಿಸಿದಾಗ ಚಹಾ ಅಂಗಡಿಯವ ಮತ್ತು ಅಲ್ಲಿದ್ದವರಿಗೆ ಅತ್ಯಾಶ್ಚರ್ಯ. ಎಂತಹ ಸರಳ ವ್ಯಕ್ತಿ, ಸಾಮಾನ್ಯರಲ್ಲಿಯೇ ಸಾಮಾನ್ಯರಂತೆ ಎಂದು ಉದ್ಗಾರ ತೆಗೆದರು. ಹೌದು ನೃಪೇನ್ ಹಾಗೆಯೇ? ತೀರಾ ಕಡಿಮೆ ಬೆಲೆಯ (ರೂ. 2.25 ಪೈಸೆಗೆ ಒಂದು ಮೀಟರ್) ಉಡುಪು ಧರಿಸಿ ಸುಲಲಿತ ವ್ಯವಹಾರ ನಡೆಸುತ್ತಿದ್ದ ನೃಪೇನ್ ದೇಶದಲ್ಲೆಲ್ಲಾ ಅಚ್ಚುಮೆಚ್ಚು.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಜನವರಿ 31,2005 ರಿಂದ**
  ಗ್ರಾಮ ಪಂಚಾಯತ್ ನೌಕರರ ಸಂಘ ಅನಿರ್ದಿಷ್ಟ ಕಾಲ ಧರಣಿ
- **ಫೆಬ್ರವರಿ 5-6, 2005**
  'ಟೀಚರ್ ಪತ್ರಿಕೆ' ವಾರ್ಷಿಕೋತ್ಸವ, ರಾಯಚೂರು
- **ಫೆಬ್ರವರಿ 15,16,17,2005**
  ಭಾರತ ವಿದ್ಯಾರ್ಥಿ ಫೆಡರೇಷನ್(SFI) ರಾಜ್ಯ ಸಮ್ಮೇಳನ, ಸೆನೆಟ್ ಹಾಲ್ ಸೆಂಟ್ರಲ್ ಕಾಲೇಜ್, ಬೆಂಗಳೂರು
- **ಫೆಬ್ರವರಿ 18-24, 2005**
  ವಿಮಾ ನೌಕರರ ಅಖಿಲ ಭಾರತ ಸಮ್ಮೇಳನ (AIIEA)
  ಅಂಬೇಡ್ಕರ್ ಭವನ, ಬೆಂಗಳೂರು
- **ಫೆಬ್ರವರಿ 19,20-2005**
  ಕರ್ನಾಟಕ ರಾಜ್ಯ ಔಷಧ ಮತ್ತು ಮಾರಾಟ ಪ್ರತಿನಿಧಿಗಳ (KSM ಮತ್ತು SRA) 18ನೇ ರಾಜ್ಯ ಸಮ್ಮೇಳನ, ರಾಯಚೂರು

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಬೆನ್ ಹಿನ್ ಬೆನ್ನಿಗೆ ಬಿದ್ದ ಬಿಜೆಪಿ

ನಮ್ಮ ದೇಶದಲ್ಲಿ ಬೂದಿ ಬಾಬಗಳ ಅಮೆರಿಕನ್ ಆವೃತ್ತಿ ಈ ಬೆನ್ ಹಿನ್. ಧರ್ಮದ ಅವಹೇಳನ ಮಾಡಲಾಗುತ್ತದೆ ಎಂದೇ ಖ್ಯಾತಿ ತೆಗೆದ ಸಂಘ ಪರಿವಾರ ನಂತರ ಮಾಡಿದ್ದು ವಿಧ್ವಂಸಕತೆಯ ವಿರೂಪಗಳನ್ನೇ

ಅಮೆರಿಕಾದ ಪಾದ್ರಿ ಕ್ರಿಸ್ತನ ಜೊತೆ ನೇರವಾಗಿ ಮಾತನಾಡಿದ ದೇವಮಾನವನೆಂದೇ ಹೇಳಿಕೊಂಡ ಬೆನ್‌ಹಿನ್ ಬೆಂಗಳೂರಿಗೆ ಬಂದದ್ದು ಆಯ್ತು, ಅಮೆರಿಕಾಕ್ಕೆ ಹಾರಿ ಹೋದದ್ದು ಆಯ್ತು. ಬರುವಾಗ, ಬಂದಾಗ ಟನ್ ಗಟ್ಟಲೇ ಸುದ್ದಿ ಸೃಷ್ಟಿಸಿದ ಪತ್ರಿಕೆಗಳು ಹೋದ ನಂತರವೂ ಅಲ್ಲಿ ಓಡಾಡಿ ಬಿಸಾಡಿದ ಪ್ಲಾಸ್ಟಿಕ್ ಲೋಟ ಹುಡುಕಿ ಕಂತೆ ಪುರಾಣ ಹೊಸೆಯುತ್ತಲೇ ಇವೆ. ಸಂಘ ಪರಿವಾರದ ಕಿರಿಚಾಟ, ಎಗರಾಟ, ದೊಂಬಿ ದುಂಡಾವರ್ತನೆಗಳಿಗೆ ಕಿರೀಟಪ್ರಾಯವಾಗಿ ಒಂದು ಪುರೋಹಿತರ ದಂಡು ಕಟ್ಟಿಕೊಂಡು ಬೆನ್‌ಹಿನ್ ಬಂದುಹೋದ ಜಕ್ಕೂರು ಜಾಗದಲ್ಲಿ 'ವಿಹಿಂಪ' ಯಜ್ಞ ಮಾಡಿಸಿ, ವಿಕೃತ ಸುಖ ಅನುಭವಿಸಿದ್ದು!

ದೇವಮಾನವರ ದಂಡು

ಬೆನ್ ಹಿನ್ ಬರುತ್ತಾನೆ ಎಂಬ ಪ್ರಚಾರದ ಕಟೌಟುಗಳು ನಗರದ ಪ್ರಮುಖ ಜಾಗದಲ್ಲಿ ಕಾಣಿಸಿಕೊಂಡವಾದರೂ ಪ್ರಚಾರದ ಉಬ್ಬರ ಏರಿದ್ದು, ಮನೆಮನೆಗೂ ಮಾತಾಗಿದ್ದು ಆರ್‌ಎಸ್‌ಎಸ್ ಖಾವೀಪಡೆ ಈ ಸಂದರ್ಭವನ್ನು ಬಳಸಿಕೊಳ್ಳಲು ತೊಡಗಿದಾಗಲೇ. ಅಲ್ಲಿಯವರೆಗೂ ಎಷ್ಟೋ ಜನ ಬರುತ್ತಾರೆ ಹೋಗುತ್ತಾರೆ, ಒಂದು ದಿನ ಅಪ್ಪಿಕೋ ಅಮ್ಮನ ಆಶೀರ್ವಾದ, ಇನ್ನೊಂದು ದಿನ 'ಸಾಯಿ-ಬಾಬ' ಮಗದೊಂದಿನ ಇನ್ನೊಬ್ಬರು... ಹೀಗೆ ಹತ್ತರಲ್ಲಿ ಇನ್ನೊಂದು ಆಗಿಹೋಗಬಹುದಾದ ವಿದ್ಯಮಾನಕ್ಕೆ ಕೋಮುವಾದದ - ಅನ್ಯಮತ ದ್ವೇಷದ ಕಿಚ್ಚು ಹಚ್ಚಿದಾಗಲೇ. ಸಂಘ ಪರಿವಾರದ ದಂಡು ಆ ಸಭೆಗೆ ಜನಹೋಗದಂತೆ ಭಯ ಹುಟ್ಟಿಸಲು ಬೆಂಗಳೂರು ಬಂದ್ ಮಾಡಿದರೂ, ಹೊರ ಊರಿನಿಂದ ಬರುವ ವಾಹನಗಳಿಗೆ ಅಡ್ಡಿಯೊಡ್ಡಿದರೂ ಆ ಒಂದು ದಿನವೇ ಮೂರು ಲಕ್ಷ ಜನ ಸೇರಿಬಿಟ್ಟಿದ್ದಾರೆ. ಭಾವೋದ್ರಿಕ್ತರಾಗಿ ಕುಣಿದಿದ್ದಾರೆ, ಅತ್ತಿದ್ದಾರೆ, ಮೂರ್ಛೆ ಹೋಗಿದ್ದಾರೆ.... ಬೆನ್‌ಹಿನ್‌ನ ಆಶೀರ್ವಾದ, ಪ್ರಾರ್ಥನೆಗಳಿಂದ ಯಾರು ಫಲ ಪಡೆದವರೇ, ಯಾವ ರೋಗ ವಾಸಿಯಾಯಿತೋ ಹೇಳಬಲ್ಲವರು ಕೆಲವರಿದ್ದರೂ ಕಾಣಬಲ್ಲದ್ದು ಹುಡುಕಿಹೊರಡ ಬೇಕಷ್ಟೆ. ಆದರೆ ಜಮಾಯಿಸಿದ್ದ ಜನ ಸಮ್ಮೋಹನಕ್ಕೆ ಒಳಗಾಗಿದ್ದರು. ಹುಚ್ಚರಂತೆ ಕುರುಡು ಶ್ರದ್ಧೆಯಿಂದ ನಂಬಿ ನೆರೆದಿದ್ದರು.

ಇದರಲ್ಲಿ ಅನುಮಾನವೇ ಇಲ್ಲ! ಆತನೊಬ್ಬ ಧರ್ಮಪ್ರಚಾರಿಸುವ ಪ್ರಚಾರಕ ಪಾದ್ರಿ ಇರಬಹುದು? ಆದರೆ ಎಲ್ಲಾ ರೋಗಗಳನ್ನು ಪ್ರಾರ್ಥನೆಯಿಂದ, ತನ್ನ ಕೈಬೆರಳು ತುದಿಯಿಂದ ಸ್ಪರ್ಶಿಸಿ ರೋಗ ವಾಸಿಮಾಡಬಲ್ಲ ದೇವಮಾನವನಂತೂ ಖಂಡಿತ ಅಲ್ಲ.



ದ್ವೇಷದ ಕಿಚ್ಚು - ಬಲಿಯಾದ ವಾಹನಗಳು

ದೇವಮಾನವ ಕಲ್ಪನೆಯೇ ಅಸಂಗತ, ಅಸಂಬದ್ಧ ಅವೈಜ್ಞಾನಿಕ. ಈತ ಅಂಧ ಶ್ರದ್ಧೆ, ಮೌಢ್ಯತೆ, ಬೆಳೆಸುವ, ಜನರ ಅಸಹಾಯಕತೆ, ಮುಗ್ಧತೆ ಬಳಸುವ ಡೋಂಗಿ ದೇವಮಾನವ! ನಮ್ಮಲ್ಲಿಯ ಸತ್ಯ ಸಾಯಿಬಾಬ ನಂತಹ ಬುರುಡೆ ಬಾಬಾಗಳ ಸಂತತಿಯ ಅಮೆರಿಕನ್ ಆವೃತ್ತಿ ಅಷ್ಟೇ.

ಅವಹೇಳನ

ಆದರೆ ಇಂತಹದ್ದಕ್ಕಾಗಿ ಕಾದಿದ್ದ ಆರ್‌ಎಸ್‌ಎಸ್ ಪರಿವಾರ ಆತ ಹಿಂದೂ ಧರ್ಮವನ್ನು ನಾಶಗೊಳಿಸಲೆಂದೇ ಬರುತ್ತಿದ್ದಾನೆಂದೂ, ಮತಾಂತರ ಗೊಳಿಸುತ್ತಾನೆಂದು, ಆತ ಡೋಂಗಿ ಎಂದೂ ಆತನನ್ನು ಬಂಧಿಸಬೇಕೆಂದು ಕಾರ್ಯಕ್ರಮಕ್ಕೆ ಅವಕಾಶ ಕೊಡಬಾರದೆಂದು ತಕರಾರರೆತ್ತಿದ್ದಲ್ಲದೇ, ಈ ಸಭೆಯ ವ್ಯವಸ್ಥಾಪಕರು ಹಾಕಿದ್ದ ಕರಪತ್ರವನ್ನು ಉಲ್ಲೇಖಿಸಿ ಅನ್ಯಧರ್ಮಿಯರ ನಂಬಿಕೆ, ಆಚರಣೆಗಳನ್ನು ಅವಹೇಳನ ಮಾಡಲಾಗಿದೆ ಎಂದು ಪ್ರತಿಭಟಿಸಿ, ಪ್ರಚಾರಿಸುತ್ತಾ, ಕ್ರಿಶ್ಚಿಯನ್ ಧರ್ಮವನ್ನು ಅವಹೇಳನ ಮಾಡಿದರು. ರಾಜ್ಯದ ಕಾಂಗ್ರೆಸ್‌ನವರಿಂದ ಹೊರಟು, ಅದು ಸೋನಿಯಾ ಗಾಂಧಿಯೂ ಇವರ ಅಪಪ್ರಚಾರದಲ್ಲಿ ಕಾಣಿಸಿಕೊಂಡದ್ದಾಯ್ತು.

ವಿಧ್ವಂಸಕತನಕ್ಕೆ ನೆಪ

ನಿಜ, ಯಾವುದೇ ಧರ್ಮ, ಅವರ ನಂಬಿಕೆ - ಆಚರಣೆಗಳನ್ನು ಹೀಗೆಳೆಯುವುದು, ಅವಹೇಳನ ಮಾಡುವುದು ತಪ್ಪು. ಖಂಡನೀಯ.... ಆದರೆ ಅವರ ಧರ್ಮದ ಬಗ್ಗೆ ಪ್ರಚಾರಿಸಿಕೂಡದು ಎಂಬುದು ಸರಿಯಲ್ಲ. ಅದಕ್ಕೆ ನಮ್ಮ ಸಂವಿಧಾನದಲ್ಲಿ ಅವಕಾಶವಿದೆ. ಅಂತಹವರು ಇತರೆ ಧರ್ಮಗಳನ್ನು ಟೀಕಿಸಬಹುದು - ವಿಮರ್ಶಿಸಬಹುದು. ಆದರೆ ಅವಹೇಳನ ಸಲ್ಲ. ಹಾಗೆಯೇ ಕಂದಾಚಾರ, ಮೂಢನಂಬಿಕೆ, ಅಜ್ಞಾನ ಬೆಳೆಸುವುದಕ್ಕೆ ಸ್ಪಷ್ಟ ವಿರೋಧವಿದೆ. ವೈಜ್ಞಾನಿಕ ತಿಳುವಳಿಕೆ ಪ್ರಚಾರಿಸಲು, ಬೆಳೆಸಬಹುದೇ ಹೊರತು ಅವೈಜ್ಞಾನಿಕತೆ - ಇದು ಸಂವಿಧಾನದಲ್ಲಿ ಸ್ಪಷ್ಟವಿದೆ ಕೂಡ. ಈ ಕಾರಣಗಳಿಂದ ಈ ದೇವಮಾನವನೂ, ಇತರರಂತೆ ಯಾವ ಧರ್ಮಕ್ಕೆ ಸೇರಿದ್ದರೂ



ಖಂಡನಾರ್ಹ. ಆದರೆ ಸಂಘ ಪರಿವಾರ ಬುರುಡೆ ಬಾಬಾಗಳಿಗೆ ಯಥೇಚ್ಛ ಮಣೆ ಹಾಕಿ ಮೆರೆಸುವ, ಅಜ್ಞಾನ, ಅಂಧಶ್ರದ್ಧೆ, ಮೌಢ್ಯಗಳೇ ಅದರ ಬಂಡವಾಳವಾಗಿದ್ದು ಅದನ್ನೇ ಬೆಳೆಸಲು ಧಾರ್ಮಿಕತೆ ಸೋಗಿನಲ್ಲಿ ಕಾರ್ಯನಿರತವಾಗಿರುವಾಗ ಇನ್ನೊಬ್ಬರಿಗೆ ನೀತಿ ಪಾಠ ಹೇಳಲು ಹೊರಟಿದ್ದೇ ವಿಚಿತ್ರ. ಇಂತಹ ಪರ ಮತ ಅಸಹಿಷ್ಣುತೆ, ಮತಾಂಧತೆಯ ಫ್ಯಾಸಿಸ್ಟ್, ವೈರಸ್ ಪೀಡಿತ ಸಂಘ ಪರಿವಾರ, ಬಿಜೆಪಿ-ಹಿಂದು ಜಾಗರಣ ವೇದಿಕೆಗಳು ಬೆಂಗಳೂರಿನ ಬಂದ್ ನೆಪದಲ್ಲಿ ವರ್ತಿಸಿದ ರೀತಿ ಅತ್ಯುಗ್ರ ಖಂಡನಾರ್ಹ. ಅಂದು ಬೆಂಗಳೂರಿನಲ್ಲಿನ ಸಾರಿಗೆ ಸಂಸ್ಥೆಯ 360 ಕ್ಕೂ ಹೆಚ್ಚು ಬಸ್‌ಗಳನ್ನು ಒಡೆದು, ಹಲವಕ್ಕೆ ಬೆಂಕಿ ಹಚ್ಚಿ ನಾಶಗೊಳಿಸಿ, ಒಂದೂವರೆ ಕೋಟಿಗೂ ಅತ್ಯಧಿಕ ಹಾನಿ ಮಾಡಿದ್ದು ಬೇಜವಾಬ್ದಾರಿತನದ, ಗೂಂಡಾವರ್ತನೆಯ ವಿಧ್ವಂಸಕತೆಗೆ ನಿಚ್ಚಳ ನಿರ್ದಶನ.

ವಿಧಾನಸಭೆಯಲ್ಲಾದ ಮುಖಭಂಗ

ರಾಜ್ಯದಲ್ಲಿ ಸಾವಿರ ಸಂಕಷ್ಟಗಳಿದ್ದರೂ ಇಂತಹದ್ದಕ್ಕೆ ಕಾಯುವ ಬಿಜೆಪಿಯು ತನ್ನ ವಿರೋಧ ಪಕ್ಷದ ಸ್ಥಾನವನ್ನು ಹರಾಜಿಗಿಟ್ಟ ವಿಧಾನಸಭೆಯಲ್ಲಿ ಬೆನ್ ಹಿನ್ ವಿರುದ್ಧ ಗೊತ್ತುವಳಿ ತರಲು ಯತ್ನಿಸಿ ಮುಖಭಂಗಕ್ಕೆ ಈಡಾಯಿತು. ಅದರ ಮಿತ್ರ ಪಕ್ಷದವರೇ ಬೆಂಬಲಿಸದೇ ತರಾಟೆಗೆ ತಗೊಂಡಿದ್ದು ಸ್ವಾಗತಾರ್ಹ ಪ್ರಸಂಗ. ಇದರಿಂದ ಯಡಿಯೂರಪ್ಪನವರ ಮುಖಭಂಗವಾದರೂ ಪಾಠ ಕಲಿಯುವ ಜಾಯಮಾನದವರೇನಲ್ಲ.

ಇದು ಸಂಘ ಪರಿವಾರದ ಆಟಾಟೋಪವಾದರೆ, ಅಧಿಕಾರಸ್ತ, ರಾಜಕಾರಣಿಗಳು, ಮುಖಂಡರುಗಳು, ಮುಖ್ಯಮಂತ್ರಿ ಮುಂತಾದ ಕರ್ನಾಟಕ ಸರ್ಕಾರದ ಸಚಿವರು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಬಾರದಿತ್ತು. ವಿಶೇಷವಾಗಿ ಸರ್ಕಾರವನ್ನು ಪ್ರತಿನಿಧಿಸುವವರು. ಧರಂಸಿಂಗ್‌ರವರ ಕಾಂಗ್ರೆಸ್‌ಪಕ್ಷದ 'ಸೆಕ್ಯುಲರಿಸಂ'ನ ವ್ಯಾಖ್ಯಾನದ ವಿರೂಪತನವೂ ವಿರೋಧಾರ್ಹ.

ಎಸ್‌ಟಿಎಫ್ ವಿಸರ್ಜಿಸಿ

ಪಶ್ಚಿಮ ಘಟ್ಟವನ್ನು ಅಡಗುತಾಣವನ್ನಾಗಿಸಿಕೊಂಡಿರುವ ಮಾವೋವಾದಿ ನಕ್ಸಲೀಯರ ದಮನಕ್ಕೆ ವಿಶೇಷ ಕಾರ್ಯಪಡೆ (ಎಸ್.ಟಿ.ಎಫ್) ಯನ್ನು ತೊಡಗಿಸುವುದಾಗಿ ಮುಖ್ಯಮಂತ್ರಿ ಧರಂಸಿಂಗ್ ವಿಧಾನಸಭೆಯಲ್ಲಿ ಹೇಳಿಕೆ ನೀಡಿದ್ದಾರೆ. ಹಿಂದೆ ಈ ಪ್ರಸ್ತಾವ ಬಂದಿದ್ದಾಗ ಅಂತಹ ಸಾಧ್ಯತೆಗಳನ್ನು ನಿರಾಕರಿಸಿದ್ದರು. ಈಗಿನ ನಿರ್ಧಾರ ಪ್ರಕಟಿಸುವಲ್ಲಿ ಒಂದೆಡೆ ಬಿಜೆಪಿ-ಬಜರಂಗದಳ ಮತ್ತು ಆ ಪ್ರದೇಶದ ಕಾಂಗ್ರೆಸ್‌ನ ಕೆಲವು ಶಾಸಕರ ಒತ್ತಡವಿದೆ. ಬಿಜೆಪಿ-ಸರಕಾರವಂತೂ ಸಶಸ್ತ್ರ ಪಡೆಗಳನ್ನು ನುಗ್ಗಿಸಿ ಕೊಲ್ಲುವುದನ್ನು ಬಿಟ್ಟು ಬೇರೇನೂ ಇಲ್ಲವೇ ಇಲ್ಲ ಎಂದೇ ಚೀರಾಡುತ್ತಿದ್ದರು. ಆದರೆ ಅದೇ ಸಂದರ್ಭದಲ್ಲಿ ಮುಖ್ಯಮಂತ್ರಿಯಾದಿಯಾಗಿ ಇದು ಸಾಮಾಜಿಕ, ಆರ್ಥಿಕ ಸಮಸ್ಯೆಯಿಂದ ಉದ್ಭವಿಸಿದ್ದು, ಅದನ್ನು ಅಭಿವೃದ್ಧಿಯ ಹಲವು ಕಾರ್ಯಕ್ರಮ ಹಾಕಿಕೊಳ್ಳುವ ಮೂಲಕ ನಕ್ಸಲೀಯ ಸಮಸ್ಯೆಗೆ ಪರಿಹಾರ ಹುಡುಕಬೇಕು ಎಂದು ಪುನರುಚ್ಚಸಿರಿದ್ದರು. ಈ ಬಗ್ಗೆ ಪಶ್ಚಿಮ ಘಟ್ಟದ ಪ್ರದೇಶಗಳಲ್ಲಿ ಜನತೆಯ ಸಮಸ್ಯೆಗಳು ಮತ್ತು ಪರಿಹಾರಾತ್ಮಕ ಮಾರ್ಗಗಳ ಬಗ್ಗೆ ಅಧ್ಯಯನ ಕೈಗೊಂಡು ವರದಿ ಸಲ್ಲಿಸಲು ಅಭಿವೃದ್ಧಿ ಆಯುಕ್ತ ಚಿರಂಜೀವಿ ಸಿಂಗರ ನಿಯೋಗವನ್ನು ಕಳುಹಿಸಲಾಗಿತ್ತು, ಅಂತಹ ವರದಿಯೊಂದು ಸರ್ಕಾರದ ಮುಂದಿದೆ. ಇದರೊಟ್ಟಿಗೆ ಸರ್ವಪಕ್ಷಗಳ ಸಭೆಯಲ್ಲಿ ಚರ್ಚಿಸಲು ಪ್ರಯತ್ನಿಸಲಾಯಿತಾದರೂ, ಬಾಬಾಬುಡನ್ ಗಿರಿಯಲ್ಲಿ ದತ್ತಜಯಂತಿ ಕುರಿತಾಗಿ ಉದ್ಭವಿಸಿದ್ದ ಕ್ಷೇಷದಿಂದಾಗಿ ಮುಂದೂಡಲಾಗಿತ್ತು. ಮತ್ತೆ ಅಂತಹ ಸಭೆ ಸೇರಲಿಲ್ಲ, ಆದರೀಗ ಇಂತಹ ನಿರ್ಧಾರವನ್ನು ಪ್ರಕಟಿಸಲಾಗಿದೆ.

ಕುಖ್ಯಾತ ದಂತಚೋರ, ನರಹಂತಕ ವೀರಪ್ಪನ್ ಬೇಟೆಗೆ ನೇಮಿಸಿದ ಈ ಕಾರ್ಯಪಡೆಯನ್ನು, ವೀರಪ್ಪನ್ ಹಾಗೂ ಆತನ ತಂಡವನ್ನು ಹತ್ಯೆ ಮಾಡಿದ ಬಳಿಕ, ನಿಗದಿತ ಉದ್ದೇಶ ಮುಗಿದ ಬಳಿಕ ಅದನ್ನು ವಿಸರ್ಜಿಸಬೇಕಿತ್ತು. ಅಂತಹ ದೊಡ್ಡಪಡೆಯನ್ನು ಈಗ ಸಣ್ಣ ಪ್ರಮಾಣದಲ್ಲಿ ಬೆಳೆಯುತ್ತಿರುವ ನಕ್ಸಲೀಯ ಗುಂಪಿನ ವಿರುದ್ಧ ಕಾರ್ಯಾಚರಣೆಗೆ ಬಳಸುವುದು ಸರಿಯಲ್ಲ. ಆಂಧ್ರದ ಸನ್ನಿವೇಶಕ್ಕೂ, ಇಲ್ಲಿಯ ಸನ್ನಿವೇಶ, ಶಕ್ತಿಗೂ ಚಟುವಟಿಕೆಗಳಿಗೂ ಗಮನಾರ್ಹ ವ್ಯತ್ಯಾಸಗಳಿವೆ.

ಮೊದಲನೆಯದಾಗಿ ಪಶ್ಚಿಮಘಟ್ಟದಲ್ಲಿನ ಜನತೆಯ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ನೀಡುವ, ಎತ್ತಿರುವ ಬೇಡಿಕೆಗಳನ್ನು ಪರಿಶೀಲಿಸಿ ಇತ್ಯರ್ಥಪಡಿಸುವ ಕೆಲಸ ಮಾಡಬೇಕು. ಜನತೆಯಲ್ಲಿ ವಿಶ್ವಾಸ ಮೂಡಬೇಕು. ಎರಡನೆಯದಾಗಿ ಮಾವೋವಾದಿ ನಕ್ಸಲೀಯರು ಹಿಡಿದಿರುವ ಹಾದಿ ಹೋರಾಟದ ತಂತ್ರಗಳನ್ನು ರಾಜಕೀಯವಾಗಿ - ಸೈದ್ಧಾಂತಿಕವಾಗಿ ಎದುರಿಸಬೇಕಲ್ಲದೆ, ಅವರು ಎಸಗಿದ ಅಪರಾಧಗಳ ಪ್ರಮಾಣಕ್ಕನುಗುಣವಾಗಿ ಕಾನೂನಾತ್ಮಕ ಕ್ರಮ ವಹಿಸಬೇಕಲ್ಲದೇ, ಗುಂಡುಹಾರಿಸಿ ಕೊಂದು ಬಿಡುವ ಕ್ರಮ ಸರಿಯಲ್ಲ. ಸರ್ಕಾರ ಈ ಗುಂಪಿನೊಂದಿಗೆ ಮಾತನಾಡುವುದಿದ್ದರೆ ಶಸ್ತ್ರತ್ಯಜಿಸಿ ಬಂದರೆ ಮಾತ್ರ ಮಾತುಕತೆ ಎಂದು ಸ್ಪಷ್ಟಪಡಿಸಬೇಕು. ಇದನ್ನೆಲ್ಲಾ ಬಿಟ್ಟು ಸರ್ಕಾರ ಈ ಕಾರ್ಯಪಡೆಯನ್ನು ತೊಡಗಿಸುವುದು ಸರಿಯಲ್ಲ. ಈ ಮೂಲಕ ಎಸ್.ಟಿ.ಎಫ್‌ನ್ನು ಖಾಯಂ ಆಗಿ ಉಳಿಸಿಕೊಳ್ಳಲು ಸರ್ಕಾರ ಯತ್ನಿಸುತ್ತಿರುವುದು ಕಂಡುಬರುತ್ತದೆ. ಜಾಗತೀಕರಣ, ವಿಶ್ವಬ್ಯಾಂಕ್ ನಿರ್ದೇಶನಗಳು ಆರ್ಥಿಕ ನೀತಿ ಹಾಗೂ ಅತ್ಯಂತ ಪ್ರತಿಗಾಮಿ ಕೋಮುವಾದದ ವಿರುದ್ಧ ಜನತೆಯ ಪ್ರಬಲ ಪ್ರಜಾಸತ್ತಾತ್ಮಕ ಪ್ರತಿಭಟನೆಗಳು ಮೂಡಿ ಬರುತ್ತಿರುವ, ಬರಲಿರುವ ಈ ಮುಂದಿನ ದಿನಗಳಲ್ಲಿ ಇಂತಹ ಪಡೆಗಳ ಅಸ್ತಿತ್ವವೇ ಅತ್ಯಂತ ಅನಾಹುತ ಕಾರಿಯಾಗಲಿವೆ. ಆದ್ದರಿಂದ ಈ ಪಡೆಗಳನ್ನು ವಿಸರ್ಜಿಸಲೇಬೇಕು. ಹಾಗೆಯೇ ಜನತೆಯು ಪ್ರಜಾಸತ್ತಾತ್ಮಕ, ಸಾಮೂಹಿಕ ಚಳುವಳಿಗೆ ವಿರೋಧವಾದ ಎಡ ದುಸ್ಸಾಹಸವಾದೀ ನಕ್ಸಲೀಯರ ಕಣ್ಣೋಟ, ಕೃತ್ಯಗಳ ಬಗ್ಗೆ ಎಚ್ಚರದಿಂದಿರಬೇಕು.

ಬಾಬಾಬುಡನ್ ಗಿರಿ : ಕರಸೇವೆಗೆ ಕರೆಯನ್ನಿತ್ತಿದ್ದಾರೆ!

ಬಾಬಾಬುಡನ್ ಗಿರಿಯಲ್ಲಿ ದತ್ತ ಜಯಂತಿ ಸಂದರ್ಭದಲ್ಲಿ ತೀವ್ರ ಮುಖಭಂಗಕ್ಕೆ ಈಡಾಗಿದ್ದ 'ಖಾವಿ ಪಡೆ' ಅದರ ಸೇಡು ತೀರಿಸಿಕೊಳ್ಳಲು ನಿರ್ಧರಿಸಿದಂತಿದೆ. ಕಳೆದ ಜನವರಿ 19 ರಂದು ಚಿಕ್ಕಮಗಳೂರಿನಲ್ಲಿ ಬಿಜೆಪಿಯ ಅನಂತಕುಮಾರ್, ಯಡಿಯೂರಪ್ಪ ಮುಂತಾದ ಎಲ್ಲಾ ನಾಯಕರು, ಶಾಸಕರು ಒಳಗೊಂಡು ಚಿಕ್ಕಮಗಳೂರಿನಲ್ಲಿ ಪಾದಯಾತ್ರೆ ನಡೆಸಿದ್ದಾರೆ. ಅವರ ಹುನ್ನಾರಗಳಿಗೆ ಅವಕಾಶ ನೀಡದ ಸರ್ಕಾರದ ವಿರುದ್ಧ ಕಿಡಿಕಾರಿ ಮಾತನಾಡಿದ್ದಾರೆ. ಅವರ ವಿಕೃತಿಗಳನ್ನು, ಉದ್ದೇಶಗಳನ್ನು ವಿರೋಧಿಸಿದವರನ್ನು, ಬುದ್ಧಿಜೀವಿಗಳನ್ನು (ಗೌರಿ ಲಂಕೇಶ್, ಕಾರ್ನಾಡ...) ಚಿಕ್ಕಮಗಳೂರಿಗೆ ಕಾಲಿಡಲು ಬಿಡುವುದಿಲ್ಲ ಎಂದು ಗುತ್ತಿಗೆ ಹಿಡಿದವರಂತೆ ಮಾತನಾಡಿದ್ದಾರೆ.

ಇವೆಲ್ಲಕ್ಕೂ ಮಿಗಿಲಾದ ವಿಶೇಷ ಸಂಗತಿಯೆಂದರೆ ಬಾಬಾಬುಡನ್ ಗಿರಿಯನ್ನು ಅಯೋಧ್ಯೆಯನ್ನಾಗಿಸುವುದು. ಅವರದ್ದೇ ಸ್ಪಷ್ಟ ಮಾತುಗಳಲ್ಲಿ ಹೇಳಬೇಕೆಂದರೆ 'ಇದು ದಕ್ಷಿಣದ ಅಯೋಧ್ಯಾ. ಅಯೋಧ್ಯಾದಲ್ಲಿ ಮಾಡಿದಂತಹ ಕರಸೇವೆ ಇಲ್ಲಿ ಮಾಡಬೇಕು'. ಇದು ಅನಂತ ಕುಮಾರ್‌ನ ನಿರ್ದೇಶನ. ಬಾಬಾಬುಡನ್ ಗಿರಿಯಲ್ಲಿ ಕೇವಲ ಪೂಜೆಗಾಗಿ ಕೇಳುವುದಲ್ಲ, ಅಲ್ಲಿನ ಸೂಫಿ ಸಂತರ ದರ್ಗಾ-ಪೀಠವನ್ನು ಅಯೋಧ್ಯೆಯ ಬಾಬ್ರಿ ಮಸೀದಿಯನ್ನು 'ಕರ ಸೇವಕರು' ನಾಶಗೊಳಿಸಿದಂತೆ ಇಲ್ಲಿಯೂ ಅಂತಹದ್ದನ್ನು ಮಾಡುವ ಒಳಇಂಗಿತವೀಗ ಬಹಿರಂಗ!

ಇನ್ನು ಇದೇ ಅಜೆಂಡಾ ಹಿಡಿದು ಸಂಘ ಪರಿವಾರ ಅತ್ಯಂತ ಹತಾಶೆಯಿಂದ ಆಕ್ರಮಣಕಾರಿಯಾಗಿ ವರ್ತಿಸಲಿದೆ ಎಂಬುದನ್ನು ಘೋಷಿಸಿದ್ದಾರೆ. ಈ ಸವಾಲನ್ನು ಸರ್ಕಾರ, ವಿವಿಧ ಧರ್ಮನಿರಪೇಕ್ಷಿತ ಪಕ್ಷಗಳು, ಶಕ್ತಿಗಳು, ಜನಸಮುದಾಯದ ಸಂಘಟನೆಗಳು, ಬುದ್ಧಿಜೀವಿಗಳು - ವ್ಯಕ್ತಿಗಳು ಕೈಗೆತ್ತಿಕೊಳ್ಳಬೇಕಿದೆ. ಮುಂಬರುವ ಅಪಾಯವನ್ನು ಎದುರಿಸಬೇಕಿದೆ.

ನರಕವೀ ಮಾರುಕಟ್ಟೆ

ಸಿಪಿಐ(ಎಂ) ಪಕ್ಷದಿಂದ ದಾಂಡೇಲಿ ನಗರಸಭೆಯ ನಿರ್ಲಕ್ಷವನ್ನು ಖಂಡಿಸಿ ಧರಣಿ

ಕೈಗಾರಿಕೆಗಳ ನಗರವೆಂದ ಹೆಸರುವಾಸಿಯಾದ ದಾಂಡೇಲಿಯಲ್ಲಿ ಜಾಗತೀಕರಣದ ಪರಿಣಾಮ ದೇಶದೆಲ್ಲೆಡೆ ಆದಂತೆ ಇಲ್ಲಿಯೂ ಕೂಡ 2-3 ಕಂಪನಿಗಳು ಮುಚ್ಚಿ ಜನರ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಕಾರ್ಮಿಕರು ಊರು ಬಿಟ್ಟು ಬೇರೆ ಬೇರೆ ಕಡೆ ಕೆಲಸಕ್ಕಾಗಿ ವಲಸೆ ಹೋಗುತ್ತಿದ್ದುದರಿಂದ ಸಹಜವಾಗಿ ದಾಂಡೇಲಿಯ ಜನಸಂಖ್ಯೆ ಕಡಿಮೆಯಾಗುತ್ತಿದೆ.

ಹಿಂದೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಆಡಳಿತ ನಗರಸಭೆಯಲ್ಲಿದ್ದಾಗ ಆದ ಅಭಿವೃದ್ಧಿ ಕೆಲಸಗಳು ಈಗ ನಡೆದೇ ಇಲ್ಲವೆಂದು ಕೆಲವು ಜನ ಇನ್ನೂ ನೆನಪಿಸಿಕೊಳ್ಳುತ್ತಲೇ ಇರುತ್ತಾರೆ. ಈಗ ನಡೆಯುತ್ತಿರುವುದೇ ಬೇರೆ. ಮೀಸಲಾತಿ ಪ್ರಕಾರ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳ ಆಯ್ಕೆ ಅದು ಕೂಡ ವರುಷಕ್ಕೊಮ್ಮೆ ಆಯ್ಕೆ ನಡೆಯುವದೂ ಕೂಡ ನಡೆಯುತ್ತಿಲ್ಲ. ಆ ವಿಷಯವೇ ಬೇರೆ. ಹಲವು ಅಭಿವೃದ್ಧಿ ಕೆಲಸಗಳು ನಡೆದರೂ ಅಂದಿನ ಕಮ್ಯೂನಿಸ್ಟ್ ವಿರೋಧಿ ಕಾಂಗ್ರೆಸ್ ಸರಕಾರದ ನೀತಿಯಿಂದಾಗಿ, ಕ್ರೂರ ದಬ್ಬಾಳಿಕೆಯ ಪರಿಣಾಮವಾಗಿ ಕಮ್ಯೂನಿಸ್ಟ್ ಆಡಳಿತ ಅಂತ್ಯವಾಯಿತು. ಕೊನೆಗೆ ಜನತಾ ಪಕ್ಷ-ದಳ ಆಡಳಿತ ಈಗ ಕಾಂಗ್ರೆಸ್ ಪಕ್ಷದ ಆಡಳಿತ ಪಕ್ಷ ಬೇರೆ ಬೇರೆ ಆದರೂ ಇಲ್ಲಿಂದ ಸತತವಾಗಿ ವಿಧಾನಸಭೆಗೆ ಆರಿಸಿ ಹೋದ ಶ್ರೀಮಾನ್ ಆರ್.ವಿ.ದೇಶಪಾಂಡೆಯವರು ಮಂತ್ರಿಗಳಾಗಿ ಆರು ಸಲ ಆರಿಸಿಬಂದಿದ್ದಾರೆ. ದಾಂಡೇಲಿಯ ಅಭಿವೃದ್ಧಿ ಮಾತ್ರ ನಗಣ್ಯ.

ಅಭಿವೃದ್ಧಿಯ ಹೆಸರಿನಲ್ಲಿ ಹಳೆ ಲೈನ್ ಬದಲಿಸಿ ಹೊಸದಾಗಿ ನೀರಿನ ಪೈಪ್ ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ಅಳವಡಿಸಲಾಗುತ್ತಿದೆ. ನಗರಸಭೆಗೆ ಒಂದು ಒಳ್ಳೆಯ ಆಡಳಿತ ಕಛೇರಿ ಇದ್ದರೂ ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ಮತ್ತೊಂದು ನಗರಸಭೆಯ ಕಟ್ಟಡವನ್ನು ಕಟ್ಟಿ ಉದ್ಘಾಟನೆಗಾಗಿ ಕಾಯುತ್ತಿದೆ. ಮುಂದೆ ಜನರಿಗೆ ತಲೆಯ ಮೇಲೆ ಹೊರಲಾರದಷ್ಟು ತೆರಿಗೆ ವಿಧಿಸಿದಾಗ ಜನರು ಕಂಗಾಲಾಗಬಹುದು. ನೋಡೋಣ. ಮುಂದೇನು?

ಈಗ ಜನರಿಗೆ ದಿನನಿತ್ಯ ಉಪಯೋಗಕ್ಕೆ ಬರುವುದು ತರಕಾರಿ, ಮೀನು-ಮಾಂಸದ ಮಾರ್ಕೇಟ್, ಒಂದಿಷ್ಟು ಸುಧಾರಣೆಯಿಲ್ಲದೇ ಹಾಳು ಕೊಂಪೆಯಾಗಿ ಪರಿವರ್ತನೆಯಾಗುತ್ತಿದೆ. ಮೀನು-ಮಟ್ಟನ್ ಮಾರ್ಕೆಟ್‌ನಿಂದ ಹೊರಬಿದ್ದ ತ್ಯಾಜ್ಯ ನೀರು ಹರಿದು ಹೋಗಲು ಸರಿಯಾದ ಗಟಾರಗಳಿಲ್ಲ. ಕುರಿ ವಧಾಲಯಕ್ಕೆ ಬೇರೆ ಜಾಗವಿಲ್ಲ. ಎಲ್ಲರೂ ಒಂದೇ ಕಡೆ ಕೂತು ತರಕಾರಿ ಮಾರಲು ವ್ಯವಸ್ಥೆಯಿಲ್ಲ. ಮಳೆಗಾಲ ಶುರುವಾಯಿ ತೆಂದರೆ ಎಲ್ಲವೂ ನರಕ ಸದೃಶ. ಮಾರ್ಕೆಟ್ ವ್ಯಾಪಾರಿಗಳು ಮತ್ತು ಖರೀದಿಸುವವರ ಪಾಡು ಹೇಳತೀರದು. ಎಲ್ಲವೂ ಜಾರುಗುಂಡಿಯ ಸರ್ಕಸ್.

ಪಕ್ಷದ ಸದಸ್ಯರನ್ನು ಜನ ಕೇಳುತ್ತಿದ್ದರು 'ನೋಡಿ ಸರ್ ನಮ್ಮ ಪರಿಸ್ಥಿತಿ' ಜನ ಕೇಳುತ್ತಾರೆ. 'ಇದೇನು ಜಾರುಗುಂಡಿ ನಿಮ್ಮ ಪಕ್ಷದಿಂದ ಏನಾದರೂ ಒತ್ತಾಯ ಮಾಡಿ' ನಾವೂ ಕೂಡ ಪಕ್ಷದ ಶಾಖೆಯ ವತಿಯಿಂದ ಎರಡು ದಿನದ ಧರಣಿ ಮಾಡಿ ಬಿಡೋಣ. ಮನವಿಗಳಿಗೆ ಯಾರೂ ಸಹಕರಿಸುವುದಿಲ್ಲವೆನ್ನುವುದು ಪಕ್ಷದ ಸದಸ್ಯರಿಗೆ ಗೊತ್ತಿತ್ತು. ಉತ್ತರಕನ್ನಡ ಜಿಲ್ಲಾಧಿಕಾರಿಗಳಿಗೂ ಮತ್ತು ನಗರಸಭೆಯ ಆಯುಕ್ತರಿಗೆ ಸಾಂಕೇತಿಕ ಮನವಿ ನೀಡಿದರೂ ಅವರು ನಮ್ಮನ್ನು ಕರೆದು ಮಾತನಾಡಿಸುವ ಗೋಜಿಗೆ ಹೋಗಲಿಲ್ಲ. ಸಹಜವಾಗಿ ನಾವು 15 ಮತ್ತು 16 ಜನವರಿಯಂದು ಎರಡು ದಿನದ ಧರಣಿ ಕಾರ್ಯಕ್ರಮಕ್ಕೆ ಇಳಿದೇಬಿಟ್ಟೆವು.

ಧರಣಿ ಸಮಯದಲ್ಲಿ ಪಕ್ಷದ ಕಾರ್ಯಕರ್ತರಲ್ಲದೇ ಇತರೆ ಜನ ಕೂಡ ಬಳಿ ಬಂದು ಕೂತು ತಮ್ಮ ಸಹಮತವನ್ನು ತೋರಿದರು. ಸಿಐಟಿಯು ಪದಾಧಿಕಾರಿಗಳಾದ ಹರೀಶ ನಾಯ್ಕ ಎಸ್.ವಿ.ಸಾವಂತ ಮುಂತಾದವರು ಬಂದಿದ್ದರು. ಡಿವೈಎಫ್ಐ ಮತ್ತು ಎಸ್.ಎಫ್ಐನ ಸದಸ್ಯರಾದ ಡಿ.ಸ್ಯಾಮಸನ್, ಸಲ್ಮಾನ್‌ರಾಜ್, ಲಕ್ಷ್ಮಣಸಿಂಗ್, ರವಿ, ಪಾರ್ವತಿದ ರತ್ನದೀಪಾ, ಶೀಲಾ, ಶ್ವೇತಾ ಮುಂತಾದವರು ಧರಣಿ ಯಶಸ್ಸಿಗೆ ತುಂಬಾ ಸಹಾಯ ಮಾಡಿದರು.



ಎರಡು ದಿನಗಳ ಧರಣಿ

ಧರಣಿ ಕಾರ್ಯಕ್ರಮವನನು ಉದ್ಘಾಟಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯಸಮಿತಿ ಸದಸ್ಯ ಟಿ.ಎಸ್.ನಾಯ್ಕ ಮತನಾಡಿ ಹದಗೆಟ್ಟಿರುವ ಮಾರ್ಕೆಟ್ ವ್ಯವಸ್ಥೆಯನ್ನು ಸರಿಪಡಿಸಲು ನಗರಸಭೆ ಕ್ರಮ ಕೈಗೊಳ್ಳಬೇಕು. ಆರು ಸಲ ಇಲ್ಲಿಂದ ಆರಿಸಿಹೋದ ಶ್ರೀಮಾನ್ ದೇಶಪಾಂಡೆಯವರು ಮಾರ್ಕೆಟ್ ಅಭಿವೃದ್ಧಿ ಮಾಡುವ ಮಾತನಾಡುತ್ತಾರೆಯೇ ವಿನಃ ಯಾವುದೇ ಅಭಿವೃದ್ಧಿ ಕೆಲಸ ಮಾಡಿಲ್ಲ. ಬೇಗನೆ ಸರಿಯಾದ ಕೆಲಸವನ್ನು ಕೈಗೊಳ್ಳಬೇಕೆಂದು ಹೇಳಿದರು.

ದಾಂಡೇಲಿ ಸಿಪಿಐ(ಎಂ) ಕಾರ್ಯದರ್ಶಿ ಜಿ.ಆರ್.ನಾಯಕ ಇವರು ಮಾತನಾಡಿ ಧರಣಿ ವಿಷಯ ತಿಳಿಸಿ ಹೆಚ್ಚಿನ ನಾಗರೀಕರು ಇದರಲ್ಲಿ ಭಾಗವಹಿಸಬೇಕೆಂದು ವಿನಂತಿಸಿದರು.

ಮುಕ್ತಾಯ ಸಮಾರಂಭದಲ್ಲಿ ಮಾತನಾಡಿದ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ಎಚ್.ಬಿ. ನಾಯಕ ಇವರು ಸಾಂಕೇತಿಕವಾದ ಈ ಧರಣಿ ಕಾರ್ಯಕ್ರಮಕ್ಕೆ ನಗರಸಭೆ ಸ್ಪಂದಿಸದೇ ಇದ್ದಲ್ಲಿ ನಾಗರೀಕರೊಂದಿಗೆ ಸೇರಿ ಮುಂದಿನ ಹೋರಾಟ ಕಾರ್ಯಕ್ರಮಗಳನ್ನು ರೂಪಿಸಲಾಗುವುದೆಂದು ಹೇಳಿದರು.

ಜಿಲ್ಲಾ ಸಮಿತಿ ಸದಸ್ಯ ಎಮ್.ಬಿ.ನಾಯಕ ಮಾತನಾಡಿ ಪಕ್ಷದ ಧರಣಿ ಕಾರ್ಯಕ್ರಮ ಯಾವುದೋ ರಾಜಕೀಯಕ್ಕಾಗಲ್ಲ. ನಗರದ ವ್ಯವಸ್ಥೆಯ ಸುಧಾರಿಸಲು ನಗರಸಭೆಯ ಗಮನ ಸೆಳೆಯಲು ಮಾತ್ರ. ಬೇಗನೆ ಮಾರ್ಕೆಟ್ ವ್ಯವಸ್ಥೆಯನ್ನು ಸರಿಪಡಿಸದಿದ್ದಲ್ಲಿ ರಾಜಕೀಯ ಹೋರಾಟವೂ ಅನಿವಾರ್ಯವೆಂದರು.

ಧರಣಿ ಕಾರ್ಯಕ್ರಮದಲ್ಲಿ ಪಕ್ಷದ ಸದಸ್ಯರಾದ ಡಿ.ಎಸ್.ಕಲ್ಲುಟ್ಕರ್, ಬಿ.ಎಲ್.ನಾಯ್ಕ್ ಮತ್ತು ಜಿಲ್ಲಾಸಮಿತಿ ಸದಸ್ಯ ಮಂಜುನಾಥ ಪುಲ್ಕರ್ ಮುಂತಾದವರೂ ಕೂಡ ಇದ್ದರು.

ಧರಣಿ ಕಾರ್ಯಕ್ರಮದ ವೆಚ್ಚವನ್ನು ಭರಿಸಲು ಮಾರ್ಕೆಟ್ ಸುತ್ತಲಿನ ವ್ಯಾಪಾರಸ್ತರು, ಜನಸಾಮಾನ್ಯರ ಬಳಿ ಡಬ್ಬಹಿಡಿದು ಹೋದಾಗ ತಮ್ಮೆಲ್ಲಾ ಸಹಾಯ ನೀಡಿ ಮುಂದಿನ ಹೋರಾಟಗಳಿಗೆ ಸ್ಪಂದಿಸುವುದಾಗಿ ಭರವಸೆ ನೀಡಿದರು.

ಈಗ ಇಷ್ಟಾಗಿದೆ. ಆಡಳಿತ ಇನ್ನು ಸ್ಪಂದಿಸಿಲ್ಲ ಸ್ಪಂದಿಸಬಹುದೆಂಬ ನಿರೀಕ್ಷೆ ಇದೆ. ಇಲ್ಲವಾದರೆ ಇನ್ನೊಂದು ಹಂತದ ಹೋರಾಟ ಗ್ಯಾರಂಟಿ

ನೃಪೇನ್ ಚಕ್ರವರ್ತಿ

ಪುಟ 2 ರಿಂದ

ದೇಶಕ್ಕೆ ಸ್ವಾತಂತ್ರ್ಯ ಬಂದಾಗಲೂ ತ್ರಿಪುರಾದಲ್ಲಿ ರಾಜ ವಂಶದವರ ಆಡಳಿತ ಮುಂದುವರೆಯುತ್ತಿತ್ತು. ಜನತಾ ಪ್ರಜಾಪ್ರಭುತ್ವ ಆಡಳಿತ ಬೇಕು ಎಂಬ ಜನರ ಕೂಗು ಅಷ್ಟು ಬಲವಾಗಿರಲಿಲ್ಲ. ಕಾರಣ ಅಲ್ಲಿರುವ ಹಲವು ಜನವಿಭಾಗಗಳ ನಡುವೆ ಇದ್ದಂತಹ ಅನೈಕ್ಯತೆಯೇ ಆಗಿತ್ತು. ಜನಸಂಖ್ಯೆಯಲ್ಲಿ ಬಹುಭಾಗ ಬುಡಕಟ್ಟು ಗುಡ್ಡಗಾಡು, ಆದಿವಾಸಿ ಜನರಾಗಿದ್ದರು. ರಾಷ್ಟ್ರ ವಿಭಜನೆಯಾದಾಗ ಪೂರ್ವ ಬಂಗಾಳದಿಂದ ಹಲವಾರು ಜನರು ವಲಸಿಗೊಂಡು ತ್ರಿಪುರಾಕ್ಕೆ ಬಂದು ಅಲ್ಲಿ ಅಲ್ಪಸಂಖ್ಯಾತರಾಗಿ ಜೀವಿಸುತ್ತಿದ್ದರು. ಬುಡಕಟ್ಟು ಗುಡ್ಡಗಾಡು ಜನರಲ್ಲಿ ಹಲವು ಪಂಗಡಗಳಿದ್ದವು. ಇವರ ನಡುವೆ ಒಳಜಗಳಗಳು, ಅಲ್ಪಸಂಖ್ಯಾತರ ವಿರುದ್ಧ ಜಗಳಗಳು ತ್ರಿಪುರಾದಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದ್ದ ಕಾಲಘಟ್ಟವಾಗಿತ್ತು. 1948 ರಲ್ಲಿ ಕಮ್ಯೂನಿಸ್ಟ್ ಪಕ್ಷದ ಘಟಕ ತ್ರಿಪುರಾದಲ್ಲಿ ಪ್ರಾರಂಭಗೊಂಡರೂ ಅದಕ್ಕೆ ತ್ರಿಪುರಾದ ಮಣ್ಣಿನಲ್ಲಿ ಸರಿಯಾಗಿ ಬೇರೂರಲು ಸಾಧ್ಯವಾಗಿರಲಿಲ್ಲ. ತ್ರಿಪುರಾ ಪಕ್ಷದ ಸಮಿತಿಯಲ್ಲಿ ಗುಡ್ಡಗಾಡು ಜನರ ಮುಖಂಡನಾಗಿ ದಶರಥ್ ದೇಬ್, ಬಂಗಾಳಿಗಳ ಮುಖಂಡನಾಗಿ ಬಿರೇನ್ ದತ್ತಾ ಇದ್ದರು. ಆದಿವಾಸಿಗಳ ಸಂಘಟನೆಯಾದ ಗಣಮುಕ್ತಿ ಪರಿಷತ್‌ನ ಮುಖಂಡರಾಗಿದ್ದರು ದಶರಥ್ ದೇಬ್. ಕಮ್ಯೂನಿಸ್ಟ್ ಪಕ್ಷ ರೂಪುಗೊಂಡಾಗ ಗುಡ್ಡಗಾಡು ಜನರು, ಆದಿವಾಸಿಗಳು ಹಾಗೂ ಇತರೆ ಜನವಿಭಾಗ ಐಕ್ಯರಾಗಿ ಸೇರಲು ಆರಂಭವಾಗಿ ಪಕ್ಷದ ಕೆಲಸಗಳು ಚುರುಕುಗೊಂಡವು. ನೃಪೇನ್ ಚಕ್ರವರ್ತಿ ತ್ರಿಪುರಾಗೆ ಬಂದಾಗ ಎಲ್ಲರೂ ಒಟ್ಟಿಗೆ ಸೇರಿ ಕೆಲಸ ಮಾಡುವ ಕ್ರಮ ಹೆಚ್ಚಾಯಿತು. ಇದರ ಮುಖ್ಯ ಜವಾಬ್ದಾರಿಯನ್ನು ನೃಪೇನ್ ಚಕ್ರವರ್ತಿ ವಹಿಸಿದ್ದರು.

ತ್ರಿಪುರಾದ ಬೆಟ್ಟಗುಡ್ಡಗಳಲ್ಲಿ ಅರಣ್ಯದಲ್ಲಿ ವಾಸಿಸುವ ಆದಿವಾಸಿಗಳನ್ನು ಸಂಘಟಿಸಿ ಪ್ರಜಾಪ್ರಭುತ್ವ ಹೋರಾಟಕ್ಕೆ ಅಣಿನೆರೆಸುವಲ್ಲಿ ತ್ಯಾಗಮಯವಾದ ಕೆಲಸ ನೃಪೇನ್ ಚಕ್ರವರ್ತಿಯವರಿಂದ ನಡೆಯಿತು. ಕಮ್ಯೂನಿಸ್ಟ್ ಪಕ್ಷ ಹಾಗೂ ಇತರೆ ಸಂಘಟನೆಗಳು ನಡೆಸಿದ್ದ ಹೋರಾಟದ ಫಲವಾಗಿ ತ್ರಿಪುರಾದಲ್ಲಿ ರಾಜವಂಶದವರ ಆಡಳಿತ ಕೊನೆಗೊಂಡಿತು. 1952 ರಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಕ್ಷ ಹಾಗೂ ಗಣಮುಕ್ತಿ ಪರಿಷತ್ತಿನ ಮೈತ್ರಿಕೂಟ 2 ಲೋಕಸಭಾ ಸ್ಥಾನ ಹಾಗೂ ವಿಧಾನಸಭೆಯ 30 ಸ್ಥಾನಗಳಲ್ಲಿ 21 ಸ್ಥಾನ ಪಡೆಯಲು ಸಾಧ್ಯವಾಯಿತು. ರಾಜಕುಟುಂಬದ ಹಲವು ಅಭ್ಯರ್ಥಿಗಳನ್ನು ಸೋಲಿಸಿ ಈ ಜಯ ಪಡೆಯಲಾಯಿತು.

1952 ರಲ್ಲಿ ಚುನಾವಣೆ ನಡೆಯುವಾಗ ಕಮ್ಯೂನಿಸ್ಟ್ ಪಕ್ಷದ ಹಲವು ಮುಖಂಡರು ಭೂಗತರಾಗಿದ್ದರು ಹಾಗೂ ಜೈಲಿನಲ್ಲಿದ್ದರು. 1957 ರಲ್ಲಿ ಮೊಟ್ಟಮೊದಲ ಬಾರಿಗೆ ವಿಧಾನಸಭೆಗೆ ನೃಪೇನ್ ಚಕ್ರವರ್ತಿ ಅತ್ಯಧಿಕ ಬಹುಮತದಿಂದ ಆಯ್ಕೆಗೊಂಡು ನಂತರ 6 ಸಲ ವಿಧಾನಸಭೆಗೆ ಚುನಾಯಿತರಾಗಿರುತ್ತಾರೆ. ಪ್ರತಿಪಕ್ಷದ ಮುಖಂಡರಾಗಿದ್ದಾಗ 1962, 1965, 1970 ರಲ್ಲಿ ಇವರನ್ನು ತ್ರಿಪುರಾದ ಕಾಂಗ್ರೆಸ್ ಸರ್ಕಾರ ಬಂಧಿಸಿ ಜೈಲಿಗೆ ಕಳುಹಿಸಿತ್ತು. ತನ್ನ ಜೀವನದಲ್ಲಿ ಒಟ್ಟು 18 ವರ್ಷಗಳ ಕಾಲ ನೃಪೇನ್ ಚಕ್ರವರ್ತಿ ಜೈಲು ವಾಸ ಅನುಭವಿಸಿರುತ್ತಾರೆ, 5 ವರ್ಷ ಭೂಗತರಾಗಿದ್ದು ಪಕ್ಷದ ಕೆಲಸ ನೆರವೇರಿಸಿರುತ್ತಾರೆ.

1964 ರಲ್ಲಿ ಕಮ್ಯೂನಿಸ್ಟ್ ಪಕ್ಷ ವಿಭಜನೆಗೊಂಡಾಗ ನೃಪೇನ್ ಚಕ್ರವರ್ತಿ ತ್ರಿಪುರಾದ ಪಕ್ಷವನ್ನು ಒಂದಾಗಿಸಿ ಸಿಪಿಐ(ಎಂ) ಅಡಿಯಲ್ಲಿ ಅಣಿನೆರೆಸಿದರು. ನೃಪೇನ್ ಚಕ್ರವರ್ತಿ 1967 ರಿಂದ 1977 ರವರೆಗೆ ತ್ರಿಪುರಾದ ಪಕ್ಷದ ಕಾರ್ಯದರ್ಶಿಯಾಗಿದ್ದರು.

1977 ರಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಸೋತಾಗ ತ್ರಿಪುರಾದಲ್ಲಿ ಆಡಳಿತ ನಡೆಸುತ್ತಿದ್ದ ಕಾಂಗ್ರೆಸ್‌ನ ದೊಡ್ಡ ವಿಭಾಗ ಕಾಂಗ್ರೆಸ್‌ನಿಂದ ಜನತಾ ಪಕ್ಷಕ್ಕೆ ಹಾಗೂ ಸೋಷಲಿಸ್ಟ್ ಕಾಂಗ್ರೆಸ್‌ನ ಪಕ್ಷಕ್ಕೆ ಸೇರಿತ್ತು. ಆಗ ಬಹುಮತ ಕಳೆದುಕೊಂಡ ಕಾಂಗ್ರೆಸ್ ಸರ್ಕಾರ ರಾಜಿನಾಮೆ ನೀಡಿತು. ಸಿಪಿಐ(ಎಂ) ಜೊತೆಯಲ್ಲಿ ಸೇರಿ ಕೆಲವರು ಸರ್ಕಾರ ನಡೆಸಿದರು. ಈ ಸರ್ಕಾರಕ್ಕೆ ಹೆಚ್ಚಿನ ಕಾಲ ಮುಂದುವರೆಯಲು ಮಾತ್ರ ಸಾಧ್ಯವಾಗಲಿಲ್ಲ. 1978 ರಲ್ಲಿ ತ್ರಿಪುರಾದಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ ಅಧಿಕಾರಕ್ಕೆ ಬಂದ ಎಡರಂಗದ ಸರ್ಕಾರದಲ್ಲಿ ನೃಪೇನ್ ಚಕ್ರವರ್ತಿ ಮುಖ್ಯಮಂತ್ರಿಯಾಗಿದ್ದರು.

1978 ರ ಜನವರಿಯಲ್ಲಿ ನಡೆದ ತ್ರಿಪುರಾ ಚುನಾವಣೆಯಲ್ಲಿ ಸಿಪಿಐ(ಎಂ) ಬಹುಮತದಿಂದ ಗೆದ್ದಿತು. ಆಗ ನೃಪೇನ್ ಚಕ್ರವರ್ತಿ ಮುಖ್ಯಮಂತ್ರಿಯಾದರು. ತ್ರಿಪುರಾ ಜನತೆಯ ಜೀವನವನ್ನು ಒಟ್ಟಾರೆಯಾಗಿ ಬದಲಾಯಿಸಲು ಈ ಸರ್ಕಾರಕ್ಕೆ ಸಾಧ್ಯವಾಯಿತು. ಆದಿವಾಸಿಗಳ ಹಕ್ಕನ್ನು ಕಾಪಾಡುವಲ್ಲಿ ಅವರಿಗೆ ರಕ್ಷಣೆ ನೀಡುವಲ್ಲಿ ಅವರ ಸಂಸ್ಕೃತಿಯನ್ನು ಕಾಪಾಡುವಲ್ಲಿ ಆದಿವಾಸಿಗಳಿಗೆ ಸ್ವಯಂ ಆಡಳಿತ ರಚಿಸುವಲ್ಲಿ ಈ ಸರ್ಕಾರ ಸಫಲವಾಯಿತು. 1988 ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪುನಃ ಬಲಪ್ರಯೋಗದಿಂದ ಅಧಿಕಾರ ಹಿಡಿಯಿತು. ಆಗ ಪಕ್ಷದ ಮೇಲೆ ತೀವ್ರ ದಮನ ನಡೆಯಿತು. ಈ ದಮನವನ್ನು ಹಿಮ್ಮೆಟ್ಟಿಸುವಲ್ಲಿ ನೃಪೇನ್ ಚಕ್ರವರ್ತಿಯವರು ತಮ್ಮ ರಾಜಕೀಯ ಹಾಗೂ ಸಂಘಟನಾ ಸಾಮರ್ಥ್ಯದ ಮೂಲಕ ಪಕ್ಷದ ಸದಸ್ಯರಲ್ಲಿ ಆತ್ಮಸ್ಥೈರ್ಯ ತುಂಬಿಸಿದರು. ಇದರಿಂದ ಇವರ ಆರೋಗ್ಯದ ಮೇಲೆ ತೀವ್ರ ಪರಿಣಾಮವಾಯಿತು. ನಂತರ 1999 ರಲ್ಲಿ ನಡೆದ ಚುನಾವಣೆಯಲ್ಲಿ ಪುನಃ ಸಿಪಿಐ(ಎಂ) ನೇತೃತ್ವದ ಎಡರಂಗ ಬಹಳ ಬಹುಮತದಿಂದ ಅಧಿಕಾರಕ್ಕೆ ಬಂದು ಈ ಸರ್ಕಾರ ಈಗಲೂ ಮುಂದುವರೆಯುತ್ತಿದೆ. 1972 ರಲ್ಲಿ ಮದುರೈಯಲ್ಲಿ ನಡೆದ ಪಕ್ಷದ 9ನೇ ಅಖಿಲ ಭಾರತ ಸಮ್ಮೇಳನದಲ್ಲಿ ಇವರು ಅತ್ಯುನ್ನತ ಸಮಿತಿಯಾದ ಕೇಂದ್ರ ಸಮಿತಿಗೆ ಆಯ್ಕೆಯಾದರು. 1985 ರಲ್ಲಿ ಪಾಲಿಟ್ ಬ್ಯೂರೋ ಸದಸ್ಯರಾದರು.

ನೃಪೇನ್ ಚಕ್ರವರ್ತಿಯವರು ಅನಾರೋಗ್ಯದಿಂದ ಆಸ್ಪತ್ರೆಯಲ್ಲಿದ್ದಾಗ ಅವರ ಶುಶ್ರೂಷೆಗೆ ಪಕ್ಷದ ಪೂರ್ಣಕಾಲದ ಕಾರ್ಯಕರ್ತರನ್ನು ನೇಮಿಸಲಾಗಿತ್ತು. ತ್ರಿಪುರಾದ ಇಂದಿನ ಮುಖ್ಯಮಂತ್ರಿ ಮಾಣಿಕ್ ಸರ್ಕಾರ ಸೇರಿದ್ದಂತೆ ಪಕ್ಷದ ಎಲ್ಲಾ ಮಂತ್ರಿಗಳು ದಿನನಿತ್ಯ ಅವರನ್ನು ಆಸ್ಪತ್ರೆಯಲ್ಲಿ ಭೇಟಿ ಮಾಡಿ ಅವರ ಆರೋಗ್ಯದ ಕಾಳಜಿ ವಹಿಸಿದ್ದರು.

ಜೀವನಪರ್ಯಂತ ಬಹಳ ಸರಳ ಜೀವನ ನಡೆಸಿದ ನೃಪೇನ್ ಚಕ್ರವರ್ತಿ ಅವಿವಾಹಿತರಾಗಿದ್ದರು. ಅವರು ತಮ್ಮ ಸ್ವಂತ ಆಸ್ತಿ ಎಂದರೆ ಪಕ್ಷ ಮಾತ್ರ ಎನ್ನುತ್ತಿದ್ದರು. ಅಗರ್ತಲಾ ಎಂ.ಎಲ್.ಎ ಹಾಸ್ಟೇಲ್‌ನ ಒಂದು ಕೊಠಡಿಯೇ ಇವರ ವಾಸಸ್ಥಳವಾಗಿತ್ತು. ಇವರು ಮುಖ್ಯಮಂತ್ರಿ ನಿವಾಸ ತೆರವು ಮಾಡುವಾಗ ಕೇವಲ ಪುಸ್ತಕ ಹಾಗೂ ಬಟ್ಟೆ ಇದ್ದ ಎರಡು ತಗಡಿನ ಪೆಟ್ಟಿಗೆಗಳನ್ನು ಮಾತ್ರ ತೆಗೆದುಕೊಂಡು ಬಂದಿದ್ದರು. ಮಾರ್ಕ್ಸ್‌ವಾದದಲ್ಲಿ ಬಹಳ ಪ್ರಾವೀಣ್ಯತೆ ಇದ್ದಂತಹ ನೃಪೇನ್ ಚಕ್ರವರ್ತಿ ಇತರೆ ಹಲವು ವಿಷಯಗಳಲ್ಲೂ ಪಾಂಡಿತ್ಯ ಸಾಧಿಸಿದ್ದರು. ಕಲೆ ಹಾಗೂ ಸಾಹಿತ್ಯದಲ್ಲಿ ಇವರಿಗೆ ಹೆಚ್ಚಿನ ಆಸಕ್ತಿ ಇತ್ತು. ರವೀಂದ್ರ ಸಂಗೀತಾದ ಆಸ್ವಾದಕರಾಗಿದ್ದರು. ಇವರು ಮಾರ್ಕ್ಸ್‌ವಾದ, ಲೆನಿನ್‌ವಾದಗಳ ಬಗ್ಗೆ ಹಲವಾರು ಪುಸ್ತಕಗಳನ್ನು ರಚಿಸಿದ್ದಾರೆ.


ಸಂಗ್ರಹ - **ಇ.ಕೆ.ಎನ್.ರಾಜನ್ - ಮೇಲ್ಕಿಯೋರ್.ಆರ್.ಡಿ**

ಗಣತಂತ್ರದ ಕ್ರೋಢೀಕರಣಕ್ಕಾಗಿ ಜನತಾ ಆಂದೋಲನ

ನಮಗೆ ನಾವೇ ಸಂವಿಧಾನವನ್ನು ಕೊಡಮಾಡಿದಂತೆ, ಭಾರತೀಯ ಜನತೆ ಸೃಷ್ಟಿಸಿಕೊಟ್ಟಿರುವ ಪ್ರಸಕ್ತ ಅವಕಾಶವನ್ನು ಬಳಸಿ ನಮ್ಮ ಈ ಗಣತಂತ್ರದ ಕ್ರೋಢೀಕರಣವನ್ನು ತುರ್ತಾಗಿ, ವ್ಯವಸ್ಥಿತವಾಗಿ ಕೈಗೆತ್ತಿಕೊಳ್ಳಬೇಕಾಗಿದೆ. ಇದು ಸಾಧ್ಯವಾಗುವಂತೆ ಜನತಾ ಆಂದೋಲನಗಳನ್ನು ಕಟ್ಟಲೇಬೇಕು. ಈ ಅವಕಾಶವನ್ನು ವ್ಯರ್ಥಗೊಳಿಸುವುದೆಂದರೆ ನಮ್ಮ ಜವಾಬ್ದಾರಿಯನ್ನು ಕೈಬಿಟ್ಟಂತೆಯೇ ಆಗುತ್ತದೆ.

ನಾವೀಗ ಭಾರತೀಯ ಗಣತಂತ್ರದ 55ನೇ ವಾರ್ಷಿಕೋತ್ಸವವನ್ನು ಆಚರಿಸಿದ್ದೇವೆ. ಈ ಗಣತಂತ್ರದ ಸುವರ್ಣಮಹೋತ್ಸವವನ್ನು ಆಚರಿಸಿದಾಗ ಇದ್ದ ವಾತಾವರಣಕ್ಕಿಂತ ಈಗ ಸಂಪೂರ್ಣ ಭಿನ್ನವಾಗಿದೆ.

ಐದು ವರ್ಷಗಳ ಹಿಂದೆ, 2000ನೇ ಇಸ್ವಿಯಲ್ಲಿ ಮಾನವಕುಲ ಮೂರನೇ ಸಹಸ್ರಮಾನಕ್ಕೆ ಕಾಲಿಡುತ್ತಿದ್ದಾಗ ಭಾರತದಲ್ಲಿ ನಾವು ಈ ಗಣತಂತ್ರವನ್ನು ಅದನ್ನು ಬುಡಮೇಲು ಮಾಡುವ ಪ್ರಯತ್ನದಲ್ಲಿದ್ದ ಕೋಮುವಾದಿಗಳಿಂದ ರಕ್ಷಿಸುವ ಒಂದು ಗಂಭೀರ ಸಮರ ನಡೆಸುತ್ತಿದ್ದೆವು. ನಿಜವಾಗಿಯೂ ಭಾರತದ ಗಣತಂತ್ರ 'ಮುತ್ತಿಗೆ'ಗೊಳಗಾಗಿತ್ತು. ಗಣತಂತ್ರದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಅವರ ಪರಿಕಲ್ಪನೆಯ ಒಂದು ಫ್ಯಾಸಿಸ್ಟ್ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ಆರ್‌ಎಸ್‌ಎಸ್/ ಬಿಜೆಪಿಯ ಘೋಷಿತ ಪ್ರಯತ್ನಗಳು ಅವರ ಕೈಗಳಲ್ಲಿ ಅಧಿಕಾರದ ಲಗಾಮು ಬಂದಾಗ ಒಂದು ವಿಪತ್ಕಾರೀ ಸ್ವರೂಪವನ್ನೇ ಪಡೆದವು - ನಾವಾಗ ಈ ವಿಪತ್ತಿನ ವಿವಿಧ ಆಯಾಮಗಳನ್ನು ಈ ಪತ್ರಿಕೆಯಲ್ಲಿ ಮತ್ತೆ-ಮತ್ತೆ ಬಿಡಿಸಿಟ್ಟಿದ್ದೆವು. ಆದ್ದರಿಂದಲೇ ಬಿಜೆಪಿ ನೇತೃತ್ವದ ಎನ್‌ಡಿಎ 2004 ರ ಸಾರ್ವತ್ರಿಕ ಚುನಾವಣೆಗಳಲ್ಲಿ ಮತ್ತೆ ಅಧಿಕಾರಕ್ಕೆ ಮರಳದಂತೆ ನೋಡಿಕೊಳ್ಳುವುದು ಅನಿವಾರ್ಯವಾಯಿತು.


ಗಣತಂತ್ರದ ಚಿಹ್ನೆ

ಈಗ ಭಾರತದ ಜನತೆ ಆ ಕೆಲಸ ಮಾಡಿ ನಮ್ಮ ಈ ಗಣತಂತ್ರವನ್ನು ರಕ್ಷಿಸಿ ಕ್ರೋಢೀಕರಿಸುವತ್ತ ಸಾಗಲು ಒಂದು ಅವಕಾಶವನ್ನು ನಿರ್ಮಿಸಿಕೊಟ್ಟಿದ್ದಾರೆ. ಇದು ಅತ್ಯಂತ ಅನಿವಾರ್ಯ. ಏಕೆಂದರೆ 2004 ರ ತೀರ್ಪು ಕೋಮುವಾದೀ ಸವಾಲನ್ನು ನಿರ್ಮೂಲ ಮಾಡಿದೆ ಎಂದು ಭಾವಿಸುವುದು ಮೂರ್ಖತನವಾಗುತ್ತದೆ. ಒಂದು ಕಾಳಗವನ್ನು ಗೆದ್ದಿದ್ದೇವಷ್ಟೆ. ಯುದ್ಧ ಇನ್ನೂ ಸಾಗಿದೆ. ಕಳೆದ ಕೆಲವು ತಿಂಗಳಲ್ಲಿ ಇದನ್ನು ಸಾಕಷ್ಟು ಪ್ರಮಾಣದಲ್ಲಿ ಕಂಡಿದ್ದೇವೆ. ಆರ್‌ಎಸ್‌ಎಸ್ / ಬಿಜೆಪಿ 'ಮೂಲಕ್ಕೆ ಮರಳುವ' ತಮ್ಮ ಆಶಯವನ್ನು ಅಂದರೆ ಕೋಮುವಾದೀ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಆಶಯವನ್ನು ಬಹಿರಂಗವಾಗಿಯೇ ಸಾರಿವೆ. ಆದರೆ ಕೋಮುವಾದಿ ಶಕ್ತಿಗಳು ನಿರೀಕ್ಷಿಸಿದ ರೀತಿಯಲ್ಲಿ ಜನಗಳು ಸ್ಪಂದಿಸಿಲ್ಲವೆಂಬುದು ಸ್ವಾಗತಾರ್ಹ. ಅದು ಶಂಕರಾಚಾರ್ಯರ ಪ್ರಶ್ನೆಯಾಗಿರಬಹುದು, ತಿರಂಗಾ ಯಾತ್ರಾ, ಅಫ್ಜಲ್ ಖಾನ್ ಗೋರಿ ಧ್ವಂಸ, ಸಾವರ್ಕರ್ ಇತ್ಯಾದಿ ಯಾವುದೇ ಪ್ರಶ್ನೆಯಾಗಿರಬಹುದು. ಆದರೂ ಇಂತಹ ಪ್ರಯತ್ನಗಳು ಇನ್ನಷ್ಟು ತೀವ್ರಗೊಳ್ಳುವುದು ಖಂಡಿತ. ಆದ್ದರಿಂದ ನಮ್ಮ ಗಣತಂತ್ರವನ್ನು ಕ್ರೋಢೀಕರಿಸುವ ಕೆಲಸವನ್ನು ತುರ್ತಾಗಿ ನಡೆಸುವುದು ಅನಿವಾರ್ಯವಾಗಿದೆ. ಏಕೆಂದರೆ ಈ ಕ್ರೋಢೀಕರಣ ಎಷ್ಟು ಪ್ರಮಾಣದಲ್ಲಿ ನಡೆಯುತ್ತದೋ ಅಷ್ಟೇ ಪ್ರಮಾಣದಲ್ಲಿ ಕೋಮುವಾದಿ ಧಾಳಿ ಹಿಂದೆ ಸರಿಯುತ್ತದೆ.

ನಾಲ್ಕು ಸ್ತಂಭಗಳು

ಭಾರತದ ಗಣತಂತ್ರ ನಾಲ್ಕು ಸ್ತಂಭಗಳ ಮೇಲೆ ನಿಂತಿದೆ. - ಜಾತ್ಯಾತೀತ ಪ್ರಜಾಪ್ರಭುತ್ವ ಒಕ್ಕೂಟ ತತ್ವ, ಸಾಮಾಜಿಕ ನ್ಯಾಯ ಮತ್ತು ಸ್ವಾವಲಂಬನೆ, ಸಂವಿಧಾನದಲ್ಲಿ ಪ್ರತಿಷ್ಠಾಪಿಸಿದ ಈ ಪ್ರತಿಯೊಂದು ಸ್ತಂಭವನ್ನು ಬಲಪಡಿಸಲು ಈಗ ದೊರೆತಿರುವ ಅವಕಾಶವನ್ನು ಬಳಸಿಕೊಳ್ಳಬೇಕು.

ಭಾರತದ ಆಳುವ ವರ್ಗಗಳಿಗೆ ಜಾತ್ಯತೀತತೆಯೆಂದರೆ ಸರ್ಕಾರ ಎಲ್ಲಾ ಧರ್ಮಗಳನ್ನು ಸಮಾನ ರೀತಿಯಲ್ಲಿ ಕಾಣಬೇಕು ಎಂಬುದಷ್ಟೇ - ಆದರೆ ಇಷ್ಟೇ ಸಾಲದು, ಏಕೆಂದರೆ ಭಾರತದ ಸಂದರ್ಭದಲ್ಲಿ ಇವುಗಳಲ್ಲಿ ಕೆಲವು ಇತರರಿಗಿಂತ ಹೆಚ್ಚು ಸಮಾನವಾಗಿವೆ. ಅಲ್ಲದೆ ಒಂದು ಪಂಗಡದವರು ಬಹುಸಂಖ್ಯೆಯಲ್ಲಿದ್ದು ಹಲವಾರು ಸಣ್ಣ ಅಲ್ಪಸಂಖ್ಯಾತರಾಗಿರುವಾಗ ಸಮಾನ ವರ್ತನೆಯೆಂಬುದು ಕ್ರಮೇಣ ಬಹುಸಂಖ್ಯಾತರಿಗೆ ಹೆಚ್ಚಿನ ಆದ್ಯತೆ ಕೊಡುವತ್ತ ವಾಲುತ್ತದೆ. ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗೆ ಪ್ರಭುತ್ವ ವಿಶೇಷ ಪ್ರಯತ್ನ ಮಾಡಬೇಕಾಗುತ್ತದೆ. ಇದನ್ನೂ ಒಂದು ನಿರ್ದಿಷ್ಟ ಸರ್ಕಾರದ ಮರ್ಜಿಗೆ ಬಿಡಲಾಗದು - ಅದನ್ನು ಸಂಸ್ಥಗತಗೊಳಿಸಬೇಕು.

ಆದ್ದರಿಂದಲೇ ಜಾತ್ಯತೀತತೆಯೆಂದರೆ ಧರ್ಮವನ್ನು ಪ್ರಭುತ್ವ ಮತ್ತು ರಾಜಕೀಯದಿಂದ ಪ್ರತ್ಯೇಕಿಸುವುದು ಎಂಬ ನಿರ್ವಹಣೆಗೆ ಕಟ್ಟುನಿಟ್ಟಾಗಿ ಬದ್ಧವಾಗಬೇಕಾದ ಅಗತ್ಯವಿದೆ. ಅದೇ ವೇಳೆಗೆ ಪ್ರಭುತ್ವವೂ ಪ್ರತಿಯೊಬ್ಬ ನಾಗರಿಕನೂ/ಳೂ ತನ್ನ ಧರ್ಮವನ್ನು ಪ್ರಚಾರ ಮಾಡುವ ಅಥವಾ ಆಜ್ಞೇಯತವಾದಿ ಅಥವಾ ನಾಸ್ತಿಕವಾಗಿರುವ ಹಕ್ಕಿನ ಗ್ಯಾರಂಟಿ ಆಶ್ವಾಸನೆಗೆ ಬದ್ಧವಾಗಿರಬೇಕು.

ಸಮಾನ ಅವಕಾಶಗಳು

ಹೀಗೆ ಸಂವಿಧಾನದಲ್ಲಿದ್ದಂತೆ ವಿಶೇಷವಾಗಿ ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳ ಭರವಸೆ ಭಾರತ ಸಂದರ್ಭದಲ್ಲಿ ಜಾತ್ಯತೀತತೆ ಮತ್ತು ಪ್ರಜಾಪ್ರಭುತ್ವ ಹೀಗೆ ಸಮಗ್ರವಾಗಿ ಬೆಸೆದುಕೊಂಡಿದೆ ಎಂಬುದನ್ನು ತೋರಿಸುತ್ತದೆ. ಆದ್ದರಿಂದಲೇ **ಜಾತ್ಯತೀತತೆಯ ಮೇಲೆ ಕೋಮುವಾದಿ ಧಾಳಿ, ಅದೇ ವೇಳೆಗೆ ಪ್ರಜಾಪ್ರಭುತ್ವದ ಮೇಲೆ ಒಂದು ಫ್ಯಾಸಿಸ್ಟ್ ಧಾಳಿಯು ಆಗಿರುತ್ತದೆ.** ಭಾರತದ ವೈವಿಧ್ಯತೆ ಕೇವಲ ಧರ್ಮದಲ್ಲಿ ಮಾತ್ರವಲ್ಲ, ಅದರಾಚೆಗೂ ಭಾಷೆ, ಜನಾಂಗ, ಪರಂಪರೆಗಳು, ಪದ್ಧತಿಗಳು, ಸಂಸ್ಕೃತಿ ಇತ್ಯಾದಿಗಳಲ್ಲೂ ವೈವಿಧ್ಯತೆಯಿರುವುದರಿಂದ ಇಂತಹ ಹಕ್ಕುಗಳ ಭರವಸೆಯನ್ನು ಕೇವಲ ಧರ್ಮಕ್ಕಷ್ಟೇ ಸೀಮಿತಗೊಳಿಸಲು ಸಾಧ್ಯವಿಲ್ಲ. ಅದನ್ನು ಎಲ್ಲಾ ಅಲ್ಪಸಂಖ್ಯಾತರನ್ನು ರಕ್ಷಿಸುವ ಹಾಗೂ ಅವರಿಗೆ ಸಾರ್ವತ್ರಿಕವಾಗಿ ಸಮಾನ ಅವಕಾಶಗಳನ್ನು ಕಲ್ಪಿಸುವಂತೆ ವಿಸ್ತರಿಸುವುದು ಅಗತ್ಯ.

ಇದು ಭಾರತದ ವೈವಿಧ್ಯತೆಯ ಎಲ್ಲಾ ಅಂಶಗಳಮಟ್ಟಿಗೂ ನಿಜವಾಗಿದ್ದರೂ ದಲಿತರಂತಹ ಶತಮಾನಗಳಿಂದ ಸಾಮಾಜಿಕವಾಗಿ ದಮನಕ್ಕೊಳಗಾದ ವಿಭಾಗಗಳಿಗೆ ಆದ್ಯತೆ ನೀಡಿ ಸಮಾನ ಅವಕಾಶ ಒದಗಿಸುವುದು ಪ್ರಜಾಪ್ರಭುತ್ವದ ಒಂದು ಮಹತ್ವದ ಕರ್ತವ್ಯವಾಗುತ್ತದೆ. ಹೀಗೆ ಸಾಮಾಜಿಕ ನ್ಯಾಯದ ಪ್ರಶ್ನೆ ಪ್ರಜಾಪ್ರಭುತ್ವದ, ಆ ಮೂಲಕ ಜಾತ್ಯತೀತ ಪ್ರಜಾಪ್ರಭುತ್ವದ ಅವಿಭಾಜ್ಯ ಅಂಗವಾಗಿರುತ್ತದೆ.

ಯುಪಿಎ ಸರ್ಕಾರ ಅಧಿಕಾರ ವಹಿಸಿಕೊಂಡು ಅದರ ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಮೀಸಲಾತಿಯನ್ನು ಖಾಸಗೀ ವಲಯಕ್ಕೂ ವಿಸ್ತರಿಸುವ ಆಶಯವನ್ನು ಘೋಷಿಸುವುದರೊಂದಿಗೆ ಈ ಮಹತ್ವದ ಆಧಾರಸ್ತಂಭದ ಕ್ರೋಢೀಕರಣಕ್ಕೂ ಅವಕಾಶವಿದೆ. ಆದರೆ, ಈಗಾಗಲೇ ಇರುವ ಅವಕಾಶಗಳ ಜಾರಿಗೂ ಬಹಳಷ್ಟು ಕೆಲಸವಾಗಬೇಕಿದೆ. ಇದನ್ನು ಪ್ರಾಮಾಣಿಕತೆಯಿಂದ ಜರೂರಾಗಿ ಕೈಗೆತ್ತಿಕೊಳ್ಳಬೇಕು. ವಿಶೇಷವಾಗಿ ಉದಾರೀಕರಣದ ನೀತಿಗಳು ಸಾರ್ವಜನಿಕ ವಲಯದಲ್ಲಿ, ಸರ್ಕಾರಿ ವಲಯದಲ್ಲಿ ಉದ್ಯೋಕವಕಾಶಗಳನ್ನು ಸಂಕುಚಿತಗೊಳಿಸಿರುವಾಗ ಮತ್ತು ಕಾರ್ಷಿಕ ಬಿಕ್ಕಟ್ಟಿಗೆ ಬಹುಪಾಲು ಈ ವಿಭಾಗದ ಜನಗಳೇ ಬಲಿಯಾಗುತ್ತಿರುವುದರಿಂದ ಇದು ಇನ್ನಷ್ಟು ಅಗತ್ಯ.

ಆರ್ಥಿಕ ಸ್ವಾವಲಂಬನೆ

ಇಂತಹ ಸಂದರ್ಭದಲ್ಲಿ ಆರ್ಥಿಕ ಸ್ವಾವಲಂಬನೆ ಜಾಗತೀಕರಣದ ಸುಲಿಗೆಕೋರ ಧಾಳಿಗಳಿಗೆ ಎದುರಾಗಿ ಭಾರತದ


ರಾಷ್ಟ್ರಪತಿ ಕಲಾಂ, ಪ್ರಧಾನಿ ಮನಮೋಹನ್ ಸಿಂಗ್ ಹಾಗೂ ಭೂತಾನ್ ದೊರೆ

ಸಾಮರ್ಥ್ಯವನ್ನು ಬಲಪಡಿಸಿಕೊಳ್ಳಲು ಮಾತ್ರವಲ್ಲ, ಭಾರತದ ಐಕ್ಯತೆ ಮತ್ತು ಸಮಗ್ರತೆಯ ಮೇಲೂ ಅದು ನೇರ ಪ್ರಭಾವ ಹೊಂದಿದೆ. ನಮ್ಮಂತಹ ವಿಶಾಲ ದೇಶದಲ್ಲಿ ವಿವಿಧ ಪ್ರದೇಶಗಳ ಒಂದು ಸಮತೋಲನದ ಆರ್ಥಿಕ ಅಭಿವೃದ್ಧಿ ಪ್ರಭುತ್ವದ ಮಧ್ಯಪ್ರವೇಶದಿಂದ ಮಾತ್ರವೇ, ಉದ್ದಿಮೆಗಳನ್ನು ಮತ್ತು ಆರ್ಥಿಕ ಚಟುವಟಿಕೆಗಳನ್ನು ನಿರ್ದಿಷ್ಟ ಪ್ರದೇಶಗಳಲ್ಲಿ ಸ್ಥಾಪಿಸುವುದರಿಂದ ಮಾತ್ರವೇ ಸಾಧ್ಯ. ಈ ಹಿಂದೆ ಸ್ವಲ್ಪ ಮಟ್ಟಿಗೆ ಇದನ್ನು ಮಾಡಲಾಗಿತ್ತು, ಈಗಿನ ಎಲ್ಲವನ್ನು 'ಮಾರುಕಟ್ಟೆ'ಗೆ ಬಿಡುವ ವ್ಯವಸ್ಥೆಯಿಂದಾಗಿ ಈಗಾಗಲೇ ಅಭಿವೃದ್ಧಿಹೊಂದಿರುವ ಪ್ರದೇಶಗಳಲ್ಲೇ ಇನ್ನಷ್ಟು ಸಮೃದ್ಧಿ, ಅದು ಕೂಡಾ ಕಡಿಮೆ ಅಭಿವೃದ್ಧಿ ಹೊಂದಿದ ಪ್ರದೇಶಗಳನ್ನು ಬಲಿಗೊಟ್ಟು, ಎಂಬಂತಹ ಪ್ರವೃತ್ತಿ ಕಾಣುತ್ತಿದೆ. ಈ ಪ್ರದೇಶಗಳು ನಿಜವಾಗಿ ಇನ್ನಷ್ಟು ಹಿಂದುಳಿಯುವ ಪರಿಸ್ಥಿತಿ ಉಂಟಾಗುತ್ತಿದೆ.

ಇದರಿಂದ ಪ್ರಾದೇಶಿಕ ಸಂಕುಚಿತವಾದಕ್ಕೆ ಆಹಾರ ಒದಗಿಸುವ, ಅದರ ಫಲವಾಗಿ ಪ್ರತ್ಯೇಕ ಸಣ್ಣ ರಾಜ್ಯಗಳ ಬೇಡಿಕೆಗಳೇಳುವ ಅಪಾಯವಿದೆ. ಇದು ವಿಚ್ಛಿದ್ರಕಾರಿ ಪ್ರವೃತ್ತಿಗಳಿಗೆ ಎಡೆ ಮಾಡಿಕೊಡುತ್ತದೆ. ಈಗಾಗಲೇ ಇದನ್ನು ದೇಶದ ಹಲವೆಡೆ ನೋಡುತ್ತಿದ್ದೇವೆ. ಆದ್ದರಿಂದ ಭಾರತೀಯ ಗಣತಂತ್ರವನ್ನು ಕ್ರೋಢೀಕರಿಸುವಲ್ಲಿ ಈ ಅಂಶದ ಬಗ್ಗೆಯೂ ತಕ್ಷಣ ಗಮನ ನೀಡಬೇಕಾದ ಅಗತ್ಯವಿದೆ.

ಸಣ್ಣ ರಾಜ್ಯಗಳ ಬೇಡಿಕೆ, ಈಗಿರುವ ರಾಜ್ಯಗಳ ವಿಭಜನೆಯ ಬೇಡಿಕೆಗಳಲ್ಲಿ ರಾಜ್ಯಗಳ ಮರು ಸಂಘಟನೆಯಲ್ಲಿ ಭಾಷಾವಾರು ಆಧಾರವನ್ನೇ ಕೈಬಿಡುವ ಅಪಾಯವಿದೆ. ತೀವ್ರ ಹೋರಾಟಗಳು ಮತ್ತು ದೀರ್ಘ ಚರ್ಚೆಗಳ ನಂತರವೇ ಸ್ವತಂತ್ರ ಭಾರತದಲ್ಲಿ ಈ ಆಧಾರದಲ್ಲಿ ಮರು ಸಂಘಟನೆ ನಡೆದಿತ್ತು. ಈಗ ಇದನ್ನು ಕೈಬಿಟ್ಟರೆ ಹಲವು ಆಯಾಮಗಳು ಮೇಲೆದ್ದು ಬರುತ್ತವೆ - ಹಿಂದುಳಿಕೆ, ಬುಡಕಟ್ಟು ಸ್ವರೂಪ, ಧಾರ್ಮಿಕ,ಜಾತಿಯವಾದ, ಇತ್ಯಾದಿ, ಇತ್ಯಾದಿ. ಇವು ನಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಅಪಾಯಕಾರಿ.

ಬ್ರಿಟಿಷ್ ವಸಾಹತುಶಾಹೀ ಭಾರತದಲ್ಲಿದ್ದ 550 ಕ್ಕೂ ಹೆಚ್ಚು ರಾಜ-ಮಹಾರಾಜರುಗಳ ಸಂಸ್ಥಾನಗಳ ವಿಲೀನದೊಂದಿಗೆ ಭಾರತೀಯ ಗಣತಂತ್ರದ ಕ್ರೋಢೀಕರಣ ನಡೆಯಿತು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ವಿಭಿನ್ನ ಭಾಷಾವಾರು ರಾಜ್ಯಗಳ ಹಕ್ಕುಗಳ ಭರವಸೆಯನ್ನು ಸಂವಿಧಾನದಲ್ಲಿ ಪ್ರತಿಷ್ಠಾಪಿಸಿದ ಒಕ್ಕೂಟ ರಚನೆಯ ಮೂಲಕ ಕೊಡಮಾಡಲಾಗಿದೆ. ಸಂವಿಧಾನ ನಮ್ಮ ದೇಶ 'ಭಾರತೀಯ ರಾಜ್ಯಗಳ ಸಂಘ' ಎಂದಿದೆ. ಆದ್ದರಿಂದ ಕೇಂದ್ರ-ರಾಜ್ಯ ಸಂಬಂಧಗಳನ್ನು ಹಿಂದಿನ ಶಿಫಾರಸುಗಳ ಆಧಾರದಲ್ಲಿ ಬಲಪಡಿಸಬೇಕಾಗಿದೆ. ಸಾಮಾನ್ಯ ಕನಿಷ್ಟ ಕಾರ್ಯಕ್ರಮ, ಈ ಅಂಶಗಳನ್ನು ಪರಿಶೀಲಿಸಲು ಒಂದು ಆಯೋಗ ರಚಿಸುವ ಭರವಸೆಯನ್ನು ಕೊಟ್ಟಿದೆ.

ಹೀಗೆ ನಮಗೆ ನಾವೇ ಸಂವಿಧಾನವನ್ನು ಕೊಡಮಾಡಿದಂತೆ, ಭಾರತೀಯ ಜನತೆ ಸೃಷ್ಟಿಸಿಕೊಟ್ಟಿರುವ ಪ್ರಸಕ್ತ ಅವಕಾಶವನ್ನು ಬಳಸಿ ನಮ್ಮ ಈ ಗಣತಂತ್ರದ ಕ್ರೋಢೀಕರಣವನ್ನು ತುರ್ತಾಗಿ, ವ್ಯವಸ್ಥಿತವಾಗಿ ಕೈಗೆತ್ತಿಕೊಳ್ಳಬೇಕಾಗಿದೆ. ಇದು ಸಾಧ್ಯವಾಗುವಂತೆ ಜನತಾ ಆಂದೋಲನಗಳನ್ನು ಕಟ್ಟಲೇಬೇಕು. ಈ ಅವಕಾಶವನ್ನು ವ್ಯರ್ಥಗೊಳಿಸುವುದೆಂದರೆ ನಮ್ಮ ಜವಾಬ್ದಾರಿಯನ್ನು ಕೈಬಿಟ್ಟಂತೆಯೇ ಆಗುತ್ತದೆ. ಇದು ಈಗಿನ ಸಂದರ್ಭದಲ್ಲಿ ಒಂದು ದೇಶಪ್ರೇಮಕ್ಕೆ ವಿರುದ್ಧವಾದ ಒಂದು ಗಂಭೀರ ಕೃತ್ಯವಾಗುತ್ತದೆ. ಹೀಗಾಗದಂತೆ ಭಾರತೀಯ ಜನತೆ ನೋಡಿಕೊಳ್ಳಬೇಕು.

ಬಹುನಿರೀಕ್ಷೆಯ ವಾತಾವರಣದಲ್ಲಿ ಉಡುಪಿಯಲ್ಲಿ 18ನೇ ಸಿಪಿಐ(ಎಂ) ರಾಜ್ಯ ಸಮ್ಮೇಳನ

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಹಾಗೂ ದೇಶದ ಅತಿ ದೊಡ್ಡ ರೈತ ಸಂಘಟನೆ ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ಕಾಂ। ಎಸ್.ರಾಮಚಂದ್ರನ್ ಪಿಳ್ಳೆ ಯವರು ಸಮ್ಮೇಳನದ ಕಲಾಪಗಳನ್ನು ಉದ್ಘಾಟಿಸಿ ಕೇಂದ್ರ ಸಮಿತಿಯ ಪರವಾಗಿ ಪ್ರತಿನಿಧಿಗಳನ್ನು ಹಾಗೂ ವೀಕ್ಷಕರನ್ನು ಅಭಿನಂದಿಸುತ್ತಾ, ಈ ರಾಜ್ಯ ಸಮ್ಮೇಳನದ ಹಿನ್ನೆಲೆಯನ್ನು ವಿವರಿಸಿದರು. ಈ ಸಂದರ್ಭದಲ್ಲಿ ಪ್ರಮುಖ ಅಂತರರಾಷ್ಟ್ರೀಯ ಹಾಗೂ ರಾಷ್ಟ್ರೀಯ ಬೆಳವಣಿಗೆಗಳನ್ನು ಪರಿಶೀಲಿಸುತ್ತಾ ಪ್ರಸ್ತುತ ಪ್ರಶ್ನೆಗಳು ಹಾಗೂ ಕರ್ತವ್ಯಗಳನ್ನು ವಿವರಿಸಿದರು. ಈಗಿನ ಸನ್ನಿವೇಶದಲ್ಲಿ ಜಾಗತೀಕರಣದ ವಿರುದ್ಧ ಜಾತ್ಯಾತೀತತೆಗಾಗಿ ಹಾಗೂ ಸಾಮ್ರಾಜ್ಯಶಾಹಿಯ ಪ್ರಭಾವ ವಿಸ್ತರಣೆಯ ವಿರುದ್ಧ ಹೋರಾಟಗಳನ್ನು ಹರಿಯಬಿಡಬೇಕಾಗಿದೆ. ಈ ನಿಟ್ಟಿನಲ್ಲಿ ನಿಮ್ಮ ಅನುಭವಗಳನ್ನು ವಿಶ್ಲೇಷಿಸಿ ಈ ಕರ್ತವ್ಯಗಳನ್ನು ರೂಪಿಸಿಕೊಂಡು ರಾಜ್ಯದಲ್ಲಿ ಪಕ್ಷವನ್ನು ಒಂದು ಬಲಿಷ್ಟ ಶಕ್ತಿಯಾಗಿ ಕಟ್ಟಲು ಮುಂದಾಗಿ ಎಂದು ಕರೆ ನೀಡಿದರು.

ಸಿಪಿಐ(ಎಂ)ನ 18ನೇ ರಾಜ್ಯ ಸಮ್ಮೇಳನ ಉಡುಪಿಯ ಪುರಭವನದಲ್ಲಿ ಜನವರಿ 21ರಂದು ರಾಜ್ಯದ ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ಎಡಶಕ್ತಿಗಳನ್ನು ಬಲಿಷ್ಟಗೊಳಿಸುವ ಆಶಯದೊಂದಿಗೆ ಆರಂಭವಾಯಿತು. ಹಿರಿಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಶ್ರೀ ವಿ.ಜೆ.ಕೆ. ನಾಯರ್ ಕೆಂಬಾವುಟವನ್ನು ಹಾರಿಸಿ ಈ ಸಮ್ಮೇಳನಕ್ಕೆ ಚಾಲನೆ ನೀಡಿದರು. ಹುತಾತ್ಮರಿಗೆ ಕೆಂಪು ನಮನ ನೀಡಿದ ನಂತರ ಕ್ರಾಂತಿಗೀತೆಗಳೊಂದಿಗೆ ಉದ್ಘಾಟನಾ ಸಮಾರಂಭಕ್ಕೆ ಸ್ವಾಗತ ಸಮಿತಿಯ ಅಧ್ಯಕ್ಷ ಹಾಗೂ ಉಡುಪಿ ಜಿಲ್ಲೆಯ ಹಿರಿಯ ಕಾರ್ಮಿಕ ಮುಖಂಡ ಕಾಂ। ಡೇವಿಡ್ ಕರ್ಕಡವರು 'ಉಡುಪಿ ಜಿಲ್ಲೆಯ ಕೇಂದ್ರವಾಗಿರುವ ಉಡುಪಿ ನಗರವು ಕರ್ನಾಟಕದ ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಆರ್ಥಿಕ ಚಟುವಟಿಕೆಗಳ ಕೇಂದ್ರ ಬಿಂದುವೂ ಆಗಿದ್ದು ರಾಜ್ಯದಲ್ಲೇ ಮಹತ್ವಗಳಿಸಿದೆ. ಪಶ್ಚಿಮಕ್ಕೆ ಭೋರ್ಗರೆಯುವ ಕಡಲು, ಪೂರ್ವದಲ್ಲಿ ದಟ್ಟ ಅರಣ್ಯದಿಂದ ಕೂಡಿರುವ ಸಹ್ಯಾದ್ರಿ ಕಣ್ಣು ಹಾಯಿಸುವಷ್ಟು ದೂರಕ್ಕೂ ಹಚ್ಚ ಹಸುರಿನಿಂದ ಕಂಗೊಳಿಸುವ ಉಡುಪಿ ಜಿಲ್ಲೆ, ನಿಸರ್ಗ ಸೌಂದರ್ಯದ ನೆಲೆಬೀಡು. ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಉಗಮಿಸಿ ಕಡಲು ಸೇರುವ ಹತ್ತಾರು ಹೊಳೆಗಳು, ಕಿರು ಬಂದರುಗಳು, ನೂರಾರು ಕುದುರುಗಳು, ತೆಂಗು, ಕಂಗು, ಬಾಳೆ, ಮಾವು, ಹಲಸು ಮುಂತಾದ ವೈವಿಧ್ಯಮಯ ವೃಕ್ಷಗಳಿಂದ ತುಂಬಿರುವ ಸಸ್ಯ ಶಾಮಲೆ, ಸುಂದರವಾದ ಜಿಲ್ಲೆಯ ಮುಖ್ಯ ಪಟ್ಟಣದಲ್ಲಿ ನಡೆಯುತ್ತಿರುವ ಈ ಸಮ್ಮೇಳನಕ್ಕೆ ಸ್ವಾಗತ ಕೋರಿದರು. ಹಲವು ದಶಕಗಳಿಂದಲೂ ಕೋಮು ಸೌಹಾರ್ದಕ್ಕೆ ಮತ್ತು ಮತೀಯ ಸಾಮರಸ್ಯಕ್ಕೆ ಹೆಸರಾಗಿದ್ದ ಈ ಜಿಲ್ಲೆಯಲ್ಲಿ ಇಂದು ಕೋಮುವಾದಿಗಳ ಅಟ್ಟಹಾಸ ಮೇರೆ ಮೀರುತ್ತಿದೆ. ಎಡಪಂಥೀಯ ಚಿಂತಕರು, ಸೆಕ್ಯುಲರ್‌ವಾದಿಗಳು ಮತ್ತು ವಿಚಾರಶೀಲ ಜನತೆ



ಧ್ವಜಾರೋಹಣ
ಹಿರಿಯ ಸಂಗಾತಿ
ವಿ.ಜೆ.ಕೆ.ನಾಯರ್ ರವರಿಂದ

ಈ ಕೋಮುವಾದಿ ಶಕ್ತಿಗಳ ಕೆಂಗಣ್ಣಿಗೆ ಗುರಿಯಾಗುತ್ತಿದ್ದಾರೆ. ಹಿಂದುಳಿದ ವರ್ಗ ಮತ್ತು ದುಡಿಯುವ ಜನರ ಕೋಮುಭಾವನೆಯನ್ನು ಕೆರಳಿಸಿ, ಅವರನ್ನು ಪುರೋಗಾಮಿ ಶಕ್ತಿಗಳ ವಿರುದ್ಧ ಛೂ ಬಿಡುವ ಕೆಲಸ ಇಲ್ಲಿ ವಿಶೇಷವಾಗಿ ನಡೆಯುತ್ತಿದೆ. ಜಿಲ್ಲೆಯಲ್ಲಿ ತೀವ್ರವಾಗಿರುವ ನಿರುದ್ಯೋಗ ಸಮಸ್ಯೆ, ಉದ್ಯೋಗಾವಕಾಶಗಳ ಕೊರತೆ, ರೈತರ ಸಮಸ್ಯೆಗಳು ಇತ್ಯಾದಿಗಳಿಂದ ಅವರ ಗಮನವನ್ನು ಬೇರೆಡೆ ಸೆಳೆಯಲು ಕೋಮುವಾದವನ್ನು ಅಸ್ತ್ರವಾಗಿ ಬಳಸಿಕೊಳ್ಳಲಾಗುತ್ತಿದೆ. ಎಲ್ಲಾ ಬಗೆಯ ಔದ್ಯೋಗೀಕರಣವನ್ನು ಪರಿಸರವಾದದ ಹೆಸರಿನಲ್ಲಿ ವಿರೋಧಿಸುವ ಒಂದು ಜನ ವಿಭಾಗವೂ ಪರೋಕ್ಷವಾಗಿ ಈ ಕೋಮುವಾದಿಗಳ ಆಟಗಳಿಗೆ ನೆರವಾಗುತ್ತಿದೆ. ಈ ಎಲ್ಲ ಸಮಸ್ಯೆಗಳೂ ನಮ್ಮ ದೇಶದ ಮತ್ತು ರಾಜ್ಯದ ಸಮಸ್ಯೆಗಳೇ ಆಗಿರುವ ಕಾರಣ ಈ ಸಮ್ಮೇಳನ ಇವುಗಳ ಕುರಿತು ಚರ್ಚಿಸಿ ಸೂಕ್ತ ನಿರ್ಧಾರವನ್ನು ಕೈಗೊಳ್ಳಲೆಂದು ಹಾರೈಸುತ್ತೇನೆ' ಎಂದರು.

- ಕೆ.ವಿ.

ಕೆಂಪು ಬಾವುಟ

ಕೆಂಪು ಬಾವುಟವು ರೈತನದೊ। ಈ
ರಕ್ತ ಬಾವುಟವು ಕೂಲಿಯದೋ।
ಬಡವರ ಉದರದಿ ಹಸಿವೆಯ ಸುಣ್ಣ
ಉರಿದೂ ಉರಿದೂ ಉರಿದೂ ಹುಣ್ಣ
ಹುಣ್ಣಿನ ನೆತ್ತರು ಧ್ವಜಕದು ಬಣ್ಣ!
ಕೆಂಪು ಬಾವುಟ .... ॥

ರೈತನಿಂದಲೇ ಜನದಲಿ ಅನ್ನ
ರೈತನ ಹೊಟ್ಟೆಯ ತುಂಬುವ ಮುನ್ನ
ಕೊಡಲಾಗದು ಯಾರಿಗು ಬೆಳೆಯನ್ನ!
ಕೆಂಪು ಬಾವುಟ............॥

ರೈತನಂತೆಯೇ ಬೆವರಲಿ ತೇಲಿ
ಕಾರಖಾನೆಯಲಿ ದುಡಿವನು ಕೂಲಿ
ಪ್ರಗತಿ ರಥಕೆ ಇವರಿಬ್ಬರು ಗಾಲಿ
ಕೆಂಪು ಬಾವುಟ............॥

ಹಾರಲಿ ಹಾರಾಡಲಿ ಈ ಧ್ವಜವು
ಧ್ವಜದ ಕೆಳಗೆ ರೈತರ ಭುಜಬಲವು
ಜಮೀನುದಾರಿಯ ಮರಣವು ನಿಜವು
ಕೆಂಪು ಬಾವುಟ............॥

ಹಾರಲಿ ಹಾರಾಡಲಿ
ಕೂಲಿಕಾರ ಒಕ್ಕಲಿಗರ ಬಲವು
ಮೀನುಗಾರ ಶ್ರಮಜೀವಿಯ ಕುಲವು
ಒಂದೆಡೆ ಸೇರಲು ಜನತೆಯ ಗೆಲುವು
ಕೆಂಪು ಬಾವುಟ............॥

ಮೂಡಣ ಪಡುವಣ ಬಡಗಣ ತೆಂಕಣ
ಐದು ಖಂಡಗಳ ಶ್ರಮಜೀವಿಯ ಗಣ
ಎತ್ತಿ ಹಿಡಿದ ಧ್ವಜ ವಿಶ್ವದ ತೋರಣ
ಕೆಂಪು ಬಾವುಟ............॥

ಧ್ವಜದಲಿ ಮೂಡಲು ಅನುಪಮ ಭಕ್ತಿ
ಹೊಳೆವುದು ಬೆಳೆವುದು ಜನತೆಯ ಶಕ್ತಿ
ಇದರೊಳಗೇನೇ ಮನುಜನ ಮುಕ್ತಿ
ಕೆಂಪು ಬಾವುಟ............॥




ಬಿಟ್ಟು ಬಿಡಲು ನಾವ್
ಸಂಶಯ ಭ್ರಾಂತಿ
ನಾಲ್ಕು ದಿಕ್ಕಿನಲಿ
ಹಬ್ಬಿತು ಕ್ರಾಂತಿ
ಸಮತಾವಾದದಿ ವಿಶ್ವದ
ಶಾಂತಿ
ಕೆಂಪು ಬಾವುಟ.....॥

ಕೆಂಪು ಧ್ವಜದಲೇ
ಜನತೆಯ ತ್ರಾಣಾ
ಧ್ವಜ ಬಿಡಲಾರೆವು
ಹೋದರು ಪ್ರಾಣಾ

- ದಿನಕರ ದೇಸಾಯಿ

'ಚೋಮನ ದುಡಿ'ಯ ಸದ್ದು ಎಲ್ಲೆಡೆ ಆವರಿಸಲಿ



ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿ.ಎನ್.ನಾಗರಾಜ್

'ಚೋಮನ ದುಡಿ'ಯ ಸದ್ದು ಇಡೀ ಕರ್ನಾಟಕ ಮತ್ತು ಭಾರತವನ್ನು ಆವರಿಸಿದ ಸದ್ದು. ಚೋಮನ ದುಡಿ ಸಾರಿದ 'ಭೂಮಿ ಬೇಕು' ಎಂಬ ಹಂಬಲ ಈ ಕರಾವಳಿ ಜಿಲ್ಲೆಯಲ್ಲಿ ಹುಟ್ಟಿದ್ದು ದೇಶದ ಕಮ್ಯುನಿಸ್ಟ್ ನಾಯಕ ಇ.ಎಂ.ಎಸ್. ನಂಬೂದರಿ ಪಾದ್ ಅವರು 'ಚೋಮನ ದುಡಿ'ಯ ಸದ್ದು ಇಡೀ ಭಾರತವನ್ನು ಆವರಿಸಿದ ಸದ್ದು ಎಂದು ಹೇಳಿದ್ದರಂತೆ. ಚೋಮನ ದುಡಿಯ ಸದ್ದು ಹುಟ್ಟಿದ ನಾಡಿನಲ್ಲಿ ದುಡಿಯುವ ಜನರ ಚಳುವಳಿಯ ಮುಂಚೂಣಿಯಲ್ಲಿರುವ ಸಿಪಿಐ(ಎಂ)ನ 18ನೇ ಕರ್ನಾಟಕ ರಾಜ್ಯ ಸಮ್ಮೇಳನ ನಡೆಯುತ್ತಿರುವುದು ಸೂಕ್ತವಾಗಿದೆ. ಹೀಗೆಂದವರು ಜಿ.ಎನ್‌ನಾಗರಾಜ್ ಸಿಪಿಐ(ಎಂ)ನ ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಅವರು ಉಡುಪಿಯ ಪುರಭವನದಲ್ಲಿ ನಡೆದ ಬಹಿರಂಗ ಉದ್ಘಾಟನಾ ಸಮಾರಂಭದ ಅಧ್ಯಕ್ಷ ಭಾಷಣ ಮಾಡುತ್ತಾ ಹೇಳಿದ ಮಾತಿದು.

ಕರಾವಳಿ ಕರ್ನಾಟಕದ ಆರ್ಥಿಕ-ಸಾಮಾಜಿಕಕ- ಸಾಂಸ್ಕೃತಿಕ ಇತಿಹಾಸ- ಪರಂಪರೆಯ ಸ್ಥೂಲ ಪರಿಚಯ ಮಾಡುತ್ತಾ, ವ್ಯಾಪಾರಕ್ಕಾಗಿ ಕೃಷಿ ಇಲ್ಲಿ ಹಲವು ಶತಮಾನಗಳ ಹಿಂದೆ ಆರಂಭವಾಗಿದ್ದು, ಈ ಪ್ರದೇಶದ ಜೀವನ ರೂಪಿಸುವ ಮಹತ್ವದ ಪಾತ್ರ ವಹಿಸಿದೆ. ಹಿಂದೆ ಅರಬ್ಬೀ ಮತ್ತು ಆಮೇಲೇ ಪೋರ್ಚುಗೀಸರು, ಇತರ ಯುರೋಪಿಯನ್ನರ ವ್ಯಾಪಾರದಲ್ಲಿ ಕೃಷಿ ಉತ್ಪನ್ನಗಳು ಪ್ರಮುಖ ಸರಕುಗಳಾಗಿದ್ದವು. ಕ್ರಮೇಣ ಈ ವ್ಯಾಪಾರ ಸರಕುಗಳ ಬೆಲೆಗಳ ವಿಷಯದಲ್ಲಿ ಘರ್ಷಣೆಗಳು ಆಗಿದ್ದವು. ಪೋರ್ಚುಗೀಸರು ಮತ್ತು ಉಲ್ಲಾಳದ ರಾಣಿ ಅಬ್ಬಕ್ಕರ ನಡುವೆ ನಡೆದ ಕಾಳಗ ಇಂತಹ ಘರ್ಷಣೆ. ಕ್ರಮೇಣ ಈ ಜಿಲ್ಲೆಯಲ್ಲಿ ಇದರಿಂದ ಬೆಳೆದ ಬಂಡವಾಳಶಾಹಿ ಸಂಬಂಧಗಳು ಆದ ಬಂಡವಾಳದ ಶೇಖರವೇ ಈ ಪ್ರದೇಶದ, ದೇಶದ ಪ್ರಮುಖ 6-7 ಬ್ಯಾಂಕ್‌ಗೆ ಕಾರಣ ಈ ಪ್ರದೇಶದಲ್ಲಿ ಬಂಡವಾಳಶಾಹಿ ಬೆಳವಣಿಗೆ ತೀವ್ರವಾಗಿ ಶಿಕ್ಷಣ, ಪ್ರಜಾಸತ್ತಾತ್ಮಕ ಪ್ರಜ್ಞೆ - ಸಂಸ್ಕೃತಿ ಬೆಳೆಯಿತು. ಜತೆಜತೆಗೆ ಈ ಬಂಡವಾಳಶಾಹಿ ವ್ಯವಸ್ಥೆ ಹುಟ್ಟಿಹಾಕಿದ ಕಾರ್ಮಿಕರು, ರೈತರು, ಕೃಷಿಕೂಲಿಗಳು ಶೋಷಣೆಯ ವಿರುದ್ಧ ಮಾಡಿದ ಹೋರಾಟವೂ ಈ ಪ್ರದೇಶದ ವಿಶಿಷ್ಟತೆಯಾಯಿತು.

ಕನ್ನಡ ಸಾಹಿತ್ಯದ ಹಲವು ದಿಗ್ಗಜಗಳನ್ನು ಕೊಟ್ಟ ಈ ನಾಡಿನಲ್ಲಿ, ಜಾತೀಯತೆ-ವಿರುದ್ಧ ಮಾನವೀಯತೆ ಮೆರೆದ ಹಲವು ಸಾಹಿತಿಗಳು ಈ ಕರಾವಳಿಯ ವಿಶಿಷ್ಟ ಸಂದರ್ಭದಲ್ಲಿ ಮೈತೆಳೆದದ್ದು, ಪಂಜೆ ಮಂಗೇಶರಾಯರ ಜಾತೀಯತೆ ಅಸ್ಪೃಶ್ಯತೆ ವಿರುದ್ಧ ಅವರುಗಳು ಕಾರಂತರ 'ಚೋಮನ ದುಡಿ', ದಿನಕರ ದೇಸಾಯಿಯವರ 'ಕೆಂಪು ಬಾವುಟವು ರೈತನದೋ, ರಕ್ತ ಬಾವುಟವು ಕೂಲಿಯದೋ' ಎಂಬ ಕೆಂಪು ಕವನಗಳು, ಆಮೇಲೆ ಗೋಪಾಲ ಕೃಷ್ಣ ಅಡಿಗರ 'ಕಟ್ಟುವೆವು ನಾವು' ನಂತಹ ಕವನಗಳು ಪ್ರಜಾಸತ್ತಾತ್ಮಕ ಪ್ರತಿಕ್ರಿಯೆಗೆ ಚಾಲನೆ ನೀಡಿದವು.

ಮಲಬಾರ್ ಜಿಲ್ಲೆಯ ಭಾಗವಾಗಿದ್ದ ಈ ಪ್ರದೇಶದಲ್ಲಿ ದುಡಿಯುವ ಜನರ ಹೋರಾಟ ದೊಡ್ಡದಾಗಿ ಬೆಳೆಯಿತು ಬೀಡಿ, ಗೇರುಬೀಜ ನೇಕಾರ - ಚಳುವಳಿ, ಗೇಣಿಕಾರ ರೈತರ ಚಳುವಳಿ - ಸ್ವತಂತ್ರ್ಯಪೂರ್ವ ದಶಕದಲ್ಲೇ ಆರಂಭವಾಗಿ ಬೆಳೆಯಿತು. ಸಮಾಜವಾದ - ಸಮಾತವಾದದ ಪರ ದುಡಿಯುವ ಜನರ ಐಕ್ಯತೆ ಘೋಷಣೆಗಳು ಬಹಳ ಹಿಂದೆಯೇ ಮೊಳಗಿದವು. ಕಮ್ಯುನಿಸ್ಟ್ ಚಳುವಳಿಯ ನೆಲೆಯಾಯಿತು ಇದು.

ಇಂತಹ ನಾಡಿನಲ್ಲಿ ಸಿಪಿಐ(ಎಂ) 18ನೇ ರಾಜ್ಯ ಸಮ್ಮೇಳನ ನಡೆಯುತ್ತಿರುವುದು ದುಡಿಯುವ ಜನರ ಮತ್ತು ಪ್ರಜಾಸತ್ತಾತ್ಮಕ ಚಳುವಳಿಯನ್ನು ವಿಸ್ತರಿಸಲು ನೆರವಾಗುವುದು ಎಂದು ಜಿ.ಎನ್.ನಾಗರಾಜ್ ಹಾರೈಸಿದರು.

- ಶರತ್

ಜಾಗತೀಕರಣ ಮತ್ತು ಕೋಮುವಾದದ ವಿರುದ್ಧ ದೊಡ್ಡ ಹೋರಾಟಗಳನ್ನು ಹರಿಯಬಿಡಬೇಕು

- ಕಾಂ. ಎಸ್.ರಾಮಚಂದ್ರನ್ ಪಿಳ್ಳೈ



ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಕಾಂ.ಎಸ್.ಆರ್.ಪಿ.ಯವರು ಇಂದಿನ ಸಂದರ್ಭವನ್ನು ವಿಶ್ಲೇಷಿಸಿ ರಾಜಕೀಯ ಕರ್ತವ್ಯಗಳನ್ನು ಬಿಡಿಸಿಟ್ಟರು. ಅದರ ವರದಿಯಿಲ್ಲಿದೆ

ಈಗಿನ ಸನ್ನಿವೇಶದಲ್ಲಿ ಜಾಗತೀಕರಣದ ವಿರುದ್ಧ ಜಾತ್ಯತೀತತೆಗಾಗಿ ಹಾಗೂ ಸಾಮ್ರಾಜ್ಯಶಾಹಿಯ ಪ್ರಭಾವದ ವಿಸ್ತರಣೆಯ ವಿರುದ್ಧ ದೊಡ್ಡ ಹೋರಾಟಗಳನ್ನು ಹರಿಯಬಿಡಬೇಕಾಗಿದೆ. ಈ ನಿಟ್ಟಿನಲ್ಲಿ ನಿಮ್ಮ ಅನುಭವಗಳನ್ನು ವಿಶ್ಲೇಷಿಸಿ ಈ ಕರ್ತವ್ಯಗಳನ್ನು ರೂಪಿಸಿಕೊಂಡು ರಾಜ್ಯದಲ್ಲಿ ಪಕ್ಷವನ್ನು ಒಂದು ಬಲಿಷ್ಠ ಶಕ್ತಿಯಾಗಿ ಕಟ್ಟಲು ಮುಂದಾಗಿ ಎಂದು ಶ್ರೀ ಎಸ್.ರಾಮಚಂದ್ರನ್ ಪಿಳ್ಳೈಯವರು 18ನೇ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ ಕರೆ ನೀಡಿದರು.

ಈ ಸಮ್ಮೇಳನ ಸಿಪಿಐ(ಎಂ)ನ 18ನೇ ಮಹಾಧಿವೇಶನಕ್ಕೆ ಪೂರ್ವ ಸಿದ್ಧತೆಯಾಗಿ ನಡೆಯುತ್ತಿದೆ. ಸಿಪಿಐ(ಎಂ) ಇತರ ರಾಜಕೀಯ ಪಕ್ಷಗಳಿಗಿಂತ ಭಿನ್ನವಾದ ಪಕ್ಷ. ದೇಶಾದ್ಯಂತ ಸುಮಾರು 60,000 ಶಾಖೆಗಳಲ್ಲಿ ಸುಮಾರು 9 ಲಕ್ಷ ಸದಸ್ಯರಿದ್ದಾರೆ. ಈ ಎಲ್ಲಾ ಶಾಖೆಗಳ ಸಮ್ಮೇಳನಗಳು ನಡೆದಿವೆ. ನಂತರ ಸ್ಥಳೀಯ, ತಾಲೂಕು, ಜಿಲ್ಲಾ ಮಟ್ಟಗಳಲ್ಲಿ, ಸಾವಿರಾರು ಸಮ್ಮೇಳನಗಳು ನಡೆದಿವೆ. ಜಿಲ್ಲಾ ಸಮ್ಮೇಳನಗಳ ನಂತರ ಸ್ಥಳೀಯ, ಈಗ ದೇಶಾದ್ಯಂತ ರಾಜ್ಯಸಮ್ಮೇಳನಗಳು ನಡೆಯುತ್ತಿದೆ. ಈ ಸಂದರ್ಭದಲ್ಲಿ ಕಳೆದ ಮಹಾಧಿವೇಶದ ನಂತರದ ಪ್ರಮುಖ ಅಂತರರಾಷ್ಟ್ರೀಯ ಹಾಗೂ ರಾಷ್ಟ್ರೀಯ ಬೆಳವಣಿಗೆಗಳ ಬಗ್ಗೆ ವಿವರವಾಗಿ ಮಾತನಾಡಿದರು.

ಅಮೇರಿಕನ್ ಸಾಮ್ರಾಜ್ಯಶಾಹಿ ತನ್ನ ಪ್ರಾಬಲ್ಯವನ್ನು ರಾಜಕೀಯವಾಗಿ, ಆರ್ಥಿಕವಾಗಿ, ಮಿಲಿಟರಿ ದೃಷ್ಟಿಯಿಂದ ಸ್ಥಾಪಿಸಲು ಹೆಣಗುತ್ತಿದೆ. ಭಯೋತ್ಪಾದನೆಯ ಮೇಲೆ ಯುದ್ಧ ಎಂಬುದನ್ನು ಒಂದು ನೆನಪಾಗಿ ಅದು ಬಳಸುತ್ತಿದೆ. ಇರಾಕಿನ ಮೇಲೆ ಯುದ್ಧ ಮಾಡಿದ್ದು ಸಾಮೂಹಿಕ ವಿನಾಶದ ಅಸ್ತ್ರಗಳಿಗಾಗಿ ಅಲ್ಲ, ಅಲ್ಲಿನ ತೈಲಸಂಪತ್ತಿನ ಮೇಲೆ ಹತೋಟಿ ಪಡೆಯಲು ಎಂಬುದು ಈಗ ಸ್ಪಷ್ಟವಾಗಿದೆ. ಇದು ಬಹುರಾಷ್ಟ್ರೀಯ ಕಂಪೆನಿಗಳ ಹಾಗೂ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳನ್ನು ಈಡೇರಿಸಲಿಕ್ಕಾಗಿ ಮಿಲಿಟರಿ ಕಾರ್ಯಾಚರಣೆ ನಡೆಸುತ್ತೇನೆ, ಯಾರನ್ನೂ ಮಿಲಿಟರಿ ಶಕ್ತಿಯಲ್ಲಿ ಸರಿಸಾಟಿಯಾಗಲು ಬಿಡುವುದಿಲ್ಲ ಎಂದು ಅದು ಬಹಿರಂಗವಾಗಿಯೇ ಹೇಳುತ್ತಿದೆ ಎಂದು ಅವರು ನೆನಪಿಸಿದರು.


ಆದರೆ ಈ ಪ್ರಯತ್ನಗಳಿಗೆ ಪ್ರತಿರೋಧಗಳೂ ಬೆಳೆಯುತ್ತಿವೆ. ಇರಾಕಿನಲ್ಲಿ ಸಶಸ್ತ್ರ ಪ್ರತಿರೋಧ ಕಾಣುತ್ತಿದೆ. ಅಫ್ಘಾನಿಸ್ತಾನದಲ್ಲೂ ಬೆಳೆಯುತ್ತಿದೆ. ಆರ್ಥಿಕ ರಂಗದಲ್ಲೂ ಜಾಗತೀಕರಣದ ವಿರುದ್ಧ ಎಲ್ಲೆಡೆ ಪ್ರತಿರೋಧಗಳು ಬೆಳೆಯುತ್ತಿವೆ. ಲ್ಯಾಟಿನ್ ಅಮೇರಿಕಾ ದೇಶಗಳಲ್ಲಿ ಇದು ರಾಜಕೀಯ ಸ್ವರೂಪವನ್ನು ಪಡೆದಿದೆ. ಬ್ರೆಝಿಲ್‌ನಲ್ಲಿ, ಮೂರು ಬಾರಿ ಅಮೇರಿಕನ್ ಬುಡಮೇಲು ಪ್ರಯತ್ನಗಳನ್ನು ವಿಫಲಗೊಳಿಸಿ ವೆನೆಜುವೆಲಾದಲ್ಲಿ, ಪರಗ್ವೇಯಲ್ಲಿ ಜಾಗತೀಕರಣದ ವಿರುದ್ಧ ಹೋರಾಟ ನಡೆಸಿದ ಶಕ್ತಿಗಳು ಅಧಿಕಾರ ಪಡೆದಿವೆ. ಭಾರತವೂ ಸೇರಿದಂತೆ ಬೇರೆ ದೇಶಗಳಲ್ಲೂ ಪ್ರತಿರೋಧ ಬೆಳೆಯುತ್ತಿದೆ. ಮುಂದುವರೆದ ಬಂಡವಾಳಶಾಹಿ ದೇಶ ಗಳಲ್ಲಿ ಕಾರ್ಮಿಕ ವರ್ಗದ ದೊಡ್ಡ ಹೋರಾಟಗಳು ನಡೆಯುತ್ತಿವೆ. ಅಮೇರಿಕಾದಲ್ಲೂ ಕೂಡಾ ದೊಡ್ಡ ಯುದ್ಧ ವಿರೋಧಿ ಹೋರಟಗಳೂ ನಡೆಯುತ್ತಿವೆ.

ಈ ಪ್ರತಿರೋಧದ ಇನ್ನೊಂದು ಭಾಗವಾಗಿ ಸಮಾಜವಾದಿ ದೇಶಗಳು ಮುನ್ನಡೆ ಸಾಧಿಸುತ್ತಿವೆ. ಚೀನಾ ದೇಶವಂತೂ ಇತರೆಲ್ಲ ದೇಶಗಳನ್ನು ಹಿಂದಿಕ್ಕಿ ಹಾಕಿದೆ. ಕ್ಯೂಬಾವೂ ಮುನ್ನಡೆಯುತ್ತಿದೆ. ವಿಯೆಟ್ನಾಂ ಕೂಡಾ ಉತ್ತರ ಕೊರಿಯಾವು ತನ್ನ ಪ್ರಗತಿಯನ್ನು ಕಾಪಾಡಿಕೊಂಡಿದೆ ಎಂದು ಹೇಳಿದ ಕಾಂ. ಎಸ್.ಆರ್.ಪಿ.ಅತ್ತ ಹಿಂದಿನ ಸಮಾಜವಾದಿ ದೇಶಗಳಲ್ಲಿ ಏನಾಗುತ್ತಿದೆ ಎಂದು ಪ್ರಶ್ನಿಸಿದರು. 'ಬಂಡವಾಳಶಾಹಿಯೇ ಪರಿಹಾರ, ಬಂಡವಾಳಶಾಹಿಯೆ ನಾಗರೀಕತೆಯ ಅಂತಿಮ ಘಟ್ಟ, ಸಮಾಜವಾದ ಒಂದು ಚ್ಯುತಿ' ಎಂದು ಈ ಹಿಂದೆ ಕೆಲವರು ಹೇಳಿರುವುದನ್ನು ನೆನಪಿಸುತ್ತಾ ನೇರವಾಗಿ ಈಗಿನ ಬೆಳವಣಿಗೆಗಳು ಸಮಾಜವಾದವೇ ಸರಿಯಾದ ದಾರಿ, ಬಂಡವಾಳಶಾಹಿ ಬಡತನ, ನಿರುದ್ಯೋಗದ ಪ್ರಶ್ನೆಗಳನ್ನು ಪರಿಹರಿಸುವುದಿಲ್ಲ ಎಂದು ಸಾಬೀತಾಗಿದೆ ಎಂದರು. ಸಿಪಿಐ(ಎಂ) ಈ ವಿಶ್ವವ್ಯಾಪಿ ಪ್ರತಿರೋಧದ ಭಾಗವಾಗಿ ಸಾಮ್ರಾಜ್ಯಶಾಹಿಯ ವಿರುದ್ಧ ಹಾಗೂ ಪ್ರಜಾಪ್ರಭುತ್ವವನ್ನು ಬಲಪಡಿಸಲು ಮತ್ತು ಸಮಾಜವಾದಕ್ಕಾಗಿ ಹೋರಾಡುತ್ತಿದೆ ಎಂದು ಅವರು ಹೇಳಿದರು.

ಮಹತ್ವದ ಪಾತ್ರ

ರಾಷ್ಟ್ರೀಯ ಮಟ್ಟದಲ್ಲಿನ ಅತಿ ಮಹತ್ವದ ಘಟನೆಯೆಂದರೆ ಚುನಾವಣೆಗಳಲ್ಲಿ ಎನ್.ಡಿ.ಎ. ಸೋಲು ಎಂದು ಕಾಂ. ಎಸ್.ರಾಮಚಮದ್ರನ್ ಪಿಳ್ಳೈ ಹೇಲಿದರು. ಎನ್‌ಡಿಎ ಸರಕಾರ ಸ್ವತಂತ್ರ್ಯ ಭಾರತದ ಇತಿಹಾಸದಲ್ಲೇ ಅತ್ಯಂತ ಪ್ರತಿಗಾಮಿ ಸರಕಾರ ಎಂದು ಅವರು ಬಣ್ಣಿಸಿದರು. ಸಮಾಜವನ್ನೂ, ರಾಜಕೀಯವನ್ನು ಮಾತ್ರವಲ್ಲ ಶೈಕ್ಷಣಿಕ ರಂಗವನ್ನೂ ಕೋಮುಗ್ರಸ್ತಗೊಳಿಸಿದ ಬಿಜೆಪಿ ನೇತೃತ್ವದ ಈ ಸರಕಾರ ಅಮೆರಿಕಾದೊಡನೆ ಹೊಸ ರೀತಿಯ ಮಿತ್ರತ್ವವನ್ನು ಬೆಳೆಸಿತು. ಅದು ಸಾಮರಿಕ ಮಿತ್ರತ್ವವಂತೆ. ಈ ಮೂಲಕ ಅದು ದೇಶದ ರಕ್ಷಣಾ ರಹಸ್ಯಗಳನ್ನು ಬಿಟ್ಟು ಕೊಟ್ಟಿತ್ತು. ಅಮೇರಿಕನ್ ಬೇಹುಗಾರಿಕಾ ಸಂಸ್ಥೆ ಎಫ್‌ಬಿಐಗೆ ಭಾರತದಲ್ಲಿ ಕಛೇರಿ ತೆರೆಯಲು ಅವಕಾಶ ನೀಡಿತ್ತು. ಅಮೇರಿಕನ್ ಪ್ರಭಾವ ನಮ್ಮ ದೇಶದಲ್ಲಿ ವಿಸ್ತರಿಸುವಂತೆ ಮಾಡಿದ್ದ ಸರಕಾರ ಇದು ಎಂದವರು ಟೀಕಿಸಿದರು.

ಕಳೆದ ಲೋಕಸಭಾ ಚುನಾವಣೆಗಳಲ್ಲಿ, ಸಿಪಿಐ(ಎಂ) ಮೂರು ಗುರಿಗಳನ್ನು ಇಟ್ಟುಕೊಂಡಿತು - ಎನ್‌ಡಿಎಯನ್ನು ಸೋಲಿಸುವುದು ಎಡಪಕ್ಷಗಳ ಬಲ ಹೆಚ್ಚಿಸುವುದು ಹಾಗೂ ಕೇಂದ್ರದಲ್ಲಿ ಜಾತ್ಯತೀತ



ಸರಕಾರದ ಸ್ಥಾಪನೆ ಈ ಮೂರೂ ಈಡೇರಿವೆ ಎಂದ ಕಾಂ. ಎಸ್.ಆರ್.ಪಿ. ಎನ್‌ಡಿಎ ಸೋಲಿನಲ್ಲಿ ಸಿಪಿಐ(ಎಂ) ಒಂದು ಮಹತ್ತರ ಪಾತ್ರ ವಹಿಸಿದೆ ಎಂದರು. ಯು.ಪಿ.ಎ. ಸರಕಾರದ ರಚನೆ, ಸಿಪಿಐ(ಎಂ) ಅದನ್ನೇಕೆ ಬೆಂಬಲಿಸುತ್ತಿದೆ, ಆ ಸರಕಾರದಲ್ಲಿ ಏಕೆ ಸೇರಲಿಲ್ಲ ಎಂಬ ಪ್ರಶ್ನೆಗಳಿಗೂ ಕಾಂ. ಎಸ್.ಆರ್.ಪಿ. ಉತ್ತರ ನೀಡಿದರು. ಬಿಜೆಪಿಯನ್ನು ಅಧಿಕಾರದಿಂದ ಹೊರಗಿಡಲಷ್ಟೇ ಬೆಂಬಲ, ಕಾಂಗ್ರೇಸ್ ಅವೇ ವರ್ಗಗಳ ಪಕ್ಷ, ಅಂತಹದೇ ನೀತಿಗಳನ್ನು ಅನುಸರಿಸುತ್ತದೆಯಾದ್ದರಿಂದ ಅದರ ನೇತೃತ್ವದ ಸರಕಾರದಲ್ಲಿ ಸೇರಿಕೊಳ್ಳಲು ಸಾಧ್ಯವಿಲ್ಲ ಎಂದ ಅವರು ನಮ್ಮ ಬೆಂಬಲ ಬೇಷರತ್ ಅಲ್ಲ, ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಆಧಾರ ದಲ್ಲಿ, ಈ ಕಾರ್ಯಕ್ರಮದಲ್ಲಿ ಹಲವು ಸಕಾರಾತ್ಮಕ ಅಂಶಗಳಿವೆ ಎಂದು ಅವರು ಹೇಳಿದರು.

ಯುಪಿಎ ಸರಕಾರ ಕೆಲವು ಸಕಾರಾತ್ಮಕ ಕ್ರಮಗಳನ್ನು ಕೈಗೊಂಡಿದೆಯಾದರೂ ಅದರಿಂದ ಜನತೆ ಹಲವು ಕ್ರಮಗಳನ್ನು ನಿರೀಕ್ಷಿಸಿದ್ದರು. ಉದಾಹರಣೆಗೆ ಒಂದು ಧೀರ ಸ್ವತಂತ್ರ ಸಾಮ್ರಾಜ್ಯಶಾಹಿ ವಿರೋಧಿ ನೀತಿಯನ್ನು ನಾವು ನಿರೀಕ್ಷಿಸಿದ್ದೆವು. ಆರ್ಥಿಕ ನೀತಿಗಳಲ್ಲಿಯೂ ಅದು ಎನ್.ಡಿ.ಎ. ಅನುಸರಿಸಿದ ನೀತಿಗಳನ್ನೇ ಮುಂದೊಯ್ಯುತ್ತಿದೆ ಟೆಲಿಕಾಂ, ವಿಮಾನಯಾನ ಹಾಗೂ ವಿಮಾ ರಂಗದಲ್ಲಿ ವಿದೇಶೀ ನೇರ ಹೂಡಿಕೆಯನ್ನು ಹೆಚ್ಚಿಸಬೇಕೆಂದು ಅದು ಹೇಳುತ್ತಿದೆ. ಟೆಲಿಕಾಂನಲ್ಲಿ ವಿದೇಶೀ ಹೂಡಿಕೆ ನಮ್ಮ ಭದ್ರತೆಗೆ ತೊಂದರೆ ಉಂಟುಮಾಡಬಹುದು ಎಂಬ ಎರಡು ವರದಿಗಳಿದ್ದರೂ ಅದು ಮುಂದೊತ್ತ ಬಯಸುತ್ತಿದೆ. ಖಾಸಗೀ ಬ್ಯಾಂಕುಗಳಲ್ಲಿ ವಿದೇಶೀ ಹೂಡಿಕೆಗೆ ಹೆಚ್ಚಿನ ಅವಕಾಶ ನೀಡಲಾಗಿದೆ. ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿಯೂ ಕೇವಲ ಶೇರುಗಳನ್ನು ಮಾರುತ್ತಿದ್ದೇವೆ, ಖಾಸಗೀಕರಣ ಮಾಡುತ್ತಿಲ್ಲ ಎಂದು ನೆಪ ಹೂಡುತ್ತಿದ್ದಾರೆ. ನಾವಿದನ್ನು ಒಪ್ಪುವುದಿಲ್ಲ. ಇದು ಸಾಮಾನ್ಯ ಕನಿಷ್ಟ ಕಾರ್ಯಕ್ರಮಕ್ಕೆ ವಿರುದ್ಧವಾಗಿದೆ. ಕಾರ್ಮಿಕರ ಭವಿಷ್ಯ ನಿಧಿಯ ಮೇಲೆ ಬಡ್ಡಿದರವನ್ನು ಇಳಿಸಲಾಗಿದೆ. ಬಹುರಾಷ್ಟ್ರೀಯ ಕಂಪನಿಗಳಿಗಾಗಿ ಪ್ರೆಸ್‌ನೋಟ್ 18ನ್ನು ಬದಲಿಸಲಾಗಿದೆ. ಪೇಟೆಂಟ್ ಕಾನೂನನ್ನು ತಿದ್ದುಪಡಿಮಾಡಿ ಸುಗ್ರೀವಾಜ್ಞೆ ಹೊರಡಿಸಲಾಗಿದೆ.

ನಾವು ಈ ಎಲ್ಲಾ ವಿಷಯಗಳನ್ನು ಯುಪಿಎಯೊಂದಿಗೆ ಖಂಡಿತಾ ಚರ್ಚಿಸುತ್ತೇವೆ, ಆದರೆ ಅದಷ್ಟೇ ಸಾಲದು ಎಂದ ಅವರು ಈ ನೀತಿಗಳಿಂದ ಬಾಧಿತರಾಗುವ ಜನ ವಿಭಾಗಗಳ ಅಣಿನೆರೆಸಿ ಸರಕಾರ ಜನಪರ ನೀತಿಗಳನ್ನು ಜಾರಿಗೆ ತರುವಂತೆ ಒತ್ತಡ ಒತ್ತಾಯ ತರಬೇಕು, ಪರ್ಯಾಯ ನೀತಿಗಳನ್ನು ಜನಗಳ ಮುಂದಿಡಬೇಕು ಎಂದು ಹೇಳಿದರು. ಸಿಪಿಐ(ಎಂ) ಮತ್ತು ಇತರ ಎಡಶಕ್ತಿಗಳನ್ನು ಬಲಪಡಿಸದೆ ಜನಗಳ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ ಎಂದು ಅವರು ಒತ್ತಿ ಹೇಳಿದರು.

ಮೂರನೇ ರಂಗ

ಈಗ ಕೇಳ ಬರುತ್ತಿರುವ ಮೂರನೇ ರಂಗದ ಮಾತುಗಳ ಬಗ್ಗೆ ಹೇಳುತ್ತಾ ರಾಮಚಂದ್ರನ್ ಪಿಳ್ಳೈಯವರು, ದೇಶದ ರಾಜಕೀಯವನ್ನು ಎರಡು ಗುಂಪುಗಳ ನಡುವೆ ಧ್ರುವೀಕರಿಸುವ ಪ್ರಯತ್ನ ನಡೆದಿದೆ, ಇದನ್ನು ನಾವು ವಿರೋಧಿಸುತ್ತೇವೆ ಎಂದರು. ಒಂದೆಡೆ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು, ಇನ್ನೊಂದೆಡೆ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ಇವೆರಡೂ ಬಂಡವಾಳಶಾಹಿ - ಭೂಮಾಲಕ ಗುಂಪುಗಳು, ಇವುಗಳದ್ದು ಆಳುವ ವರ್ಗಗಳ ಪರವಾದ ವರ್ಗನೀತಿಗಳು, ಅವು ಜನಸಾಮಾನ್ಯರ ಸಂಕಟಗಳನ್ನು ಪರಿಹರಿಸಲಾರವು. ಈ ಹಿನ್ನೆಲೆಯಲ್ಲಿ ಕೇವಲ ಚುನಾವಣಾ ಲಾಭಕ್ಕಾಗಿ ಮೂರನೇ ರಂಗದ ಮಾತಿನಿಂದ ಏನೂ ಪ್ರಯೋಜನವಿಲ್ಲ. ಮೂರನೇ ರಂಗದ ಬಗ್ಗೆ ಮಾತಾಡುವವರು ತಮ್ಮ ನೀತಿಗಳನ್ನು ಸ್ಪಷ್ಟಪಡಿಸಬೇಕಾಗಿದೆ. ಭೂಸುಧಾರಣೆಗಳ ಬಗ್ಗೆ ಅವರ ನಿಲುವೇನು? ಸಾರ್ವಜನಿಕ ವಲಯದ ಬಗ್ಗೆ ಅವರ ನಿಲುವೇನು? ಕಾರ್ಮಿಕ ವರ್ಗ ಮತ್ತು ಇತರ ಜನವಿಭಾಗಗಳ ಹೋರಾಟಗಳ ಮೂಲಕವೇ ಒಂದು ರಾಜಕೀಯ ಒಮ್ಮತಕ್ಕೆ ಬಂದು ಮೂರನೇ ರಂಗ ಮೂಡಿಬರಬೇಕು, ಆಗ ಮಾತ್ರವೇ ಬದಲಾವಣೆ ಸಾಧ್ಯ. ಈ ರೀತಿಯಲ್ಲಿ ಮೂಡಿ ಬರುವ ಮೂರನೇ ರಂಗ ಮುಂದೆ ನಮ್ಮನ್ನು ಎಡ ಪ್ರಜಾಪ್ರಭುತ್ವ ರಂಗದತ್ತ ಒಯ್ಯಬೇಕು, ಮುಂದುವರೆದು ಜನತಾ ಪ್ರಜಾಪ್ರಭುತ್ವ ರಂಗ ಕಟ್ಟಿ ಜನತಾ ಪ್ರಜಾಪ್ರಭುತ್ವ ಕ್ರಾಂತಿ ನಡೆಸಲು ಸಾಧ್ಯವಾಗುತ್ತದೆ ಎಂದು ಕಾಂ. ರಾಮಚಂದ್ರನ್ ಪಿಳ್ಳೈ ಹೇಳಿದರು.

ಸಿಪಿಐ(ಎಂ) ಪಕ್ಷದ 18ನೇ ಕರ್ನಾಟಕ ರಾಜ್ಯ ಸಮ್ಮೇಳನವು ನೂತನ ರಾಜ್ಯಸಮಿತಿಯನ್ನು ಆಯ್ಕೆ ಮಾಡಿತು. 36 ಸದಸ್ಯರಿರುವ ರಾಜ್ಯಸಮಿತಿ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿ ಮಂಡಳಿಯನ್ನು ಆರಿಸಿತು. ಕಾರ್ಯದರ್ಶಿಯಾಗಿ ಜಿ.ಎನ್.ನಾಗರಾಜ್‌ರವರು ಪುನರಾಯ್ಕೆಯಾಗಿದ್ದಾರೆ.

ಕಾರ್ಯದರ್ಶಿ ಮಂಡಳಿ ಸದಸ್ಯರು


ಜಿ.ಎನ್.ನಾಗರಾಜ್


ವಿ.ಜೆ.ಕೆ ನಾಯರ್


ಕೆ.ಆರ್.ಶ್ರಿಯಾನ್


ಬಿ.ಮಾಧವ


ನಿತ್ಯಾನಂದಸ್ವಾಮಿ


ಜಿ.ಸಿ ಬಯ್ಯಾರೆಡ್ಡಿ


ಎಸ್.ವೈ.ಗುರುಶಾಂತ್


ಕೆ.ನೀಲಾ


ಜಿ.ವಿ.ಶ್ರಿರಾಮರೆಡ್ಡಿ


ಕೆ.ಶಂಕರ್


ಮಾರುತಿ ಮಾನ್ಪಡೆ


ಎಸ್.ಪ್ರಸನ್ನಕುಮಾರ್

ಡೇವಿಡ್ ಕರ್ಕಡರ ಸ್ವಾಗತ ಭಾಷಣದ ಆಯ್ದ ಭಾಗಗಳು

ನಿಸರ್ಗ ಸೌಂದರ್ಯದ ನೆಲೆಬೀಡು ಸಮರಧೀರ ಹೋರಾಟಗಳ ಜಾಡು

......ಉಡುಪಿ ಸಮೀಪದ ಬಾರ್ಕೂರಿನಲ್ಲಿ ಟಿಪ್ಪು ಸುಲ್ತಾನರ ಕೋಟೆ ಕುರುಹುಗಳು ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಆತ ನಡೆಸಿದ ಹೋರಾಟದ ಸಾಂಕೇತವಾಗಿ ಈಗಲೂ ಉಳಿದುಕೊಂಡಿವೆ. ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಉಡುಪಿ ಜಿಲ್ಲೆಯ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆ, ಬೆನಗಲ್ ಶಿವರಾವ್, ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್, ಯೋಗೀಶ್ವರ ಹೊಳ್ಳ, ಉಪೇಂದ್ರ ಶ್ರೀನಿವಾಸ ನಾಯಕ್, ಮುಂತಾದವರ ಮನೆತನಗಳು ಮಾಡಿದ ತ್ಯಾಗ ಬಲಿದಾನಗಳು ಅವಿಸ್ಮರಣೀಯವೆನಿಸಿವೆ.

ಆರು ದಶಕಗಳ ಹಿಂದೆ, ಮಂಗಳೂರಿನಲ್ಲಿ ಕಾರ್ಮಿಕ ಚಳುವಳಿ ಪ್ರಾರಂಭವಾದ ಕೆಲವೇ ವರ್ಷಗಳಲ್ಲಿ ಅದು ಉಡುಪಿಗೂ ವಿಸ್ತರಿಸಲ್ಪಟ್ಟು, 1944ರಲ್ಲಿ ಮೊತ್ತಮೊದಲ ಬಾರಿಗೆ ಮೇ ದಿನಾಚರಣೆಯನ್ನು ಆಚರಿಸಲಾಯಿತು. ಇಲ್ಲಿನ ಕಾರ್ಮಿಕ ಚಳುವಳಿ ಮೊದಲು ಬ್ರಿಟಿಷ್ ಆ ಬಳಿಕ ಕಾಂಗ್ರೆಸ್ ಸರಕಾರದ ಕ್ರೂರ ದಬ್ಬಾಳಿಕೆಯನ್ನು ಎದುರಿಸಿಯೇ ಬೆಳೆದಿದೆ. ಬೀಡಿ ಕಾರ್ಮಿಕರು ಹಂಚಿನ ಕಾರ್ಖಾನೆಯ ಮಜೂರರು, ಕೈಮಗ್ಗದ ನೇಕಾರರು, ಗೋಡಂಬಿ ಕಾರ್ಖಾನೆ ಕಾರ್ಮಿಕರು, ಮೋಟಾರು ಕಾರ್ಮಿಕರು ಮುಂತಾದವರೇ ಪ್ರಬಲವಾಗಿದ್ದ ಇಲ್ಲಿನ ಕಾರ್ಮಿಕರ ಹೋರಾಟದ ಪ್ರಮುಖ ನಾಯಕರಾಗಿದ್ದು ಈ ಜಿಲ್ಲೆಯ ಸಂಗಾತಿಗಳಾದ ಕೆ.ರಾಘವನ್, ಯು.ದಾಸ ಸೇರಿಗಾರ, ಪಿ.ಶೀನನಾಯಕ್, ಕೆ.ಅನಂತ ಕೃಷ್ಣ, ಐತಾಳ ಮುಂತಾದವರನ್ನು 1948ರಲ್ಲಿ ಬಂಧಿಸಿ ಸೆರೆಮನೆಗೆ ಅಟ್ಟಲಾಯಿತು. 1948ರಲ್ಲಿ ವಿಶೇಷ ನ್ಯಾಯಾಲಯವೊಂದರಲ್ಲಿ ಇಲ್ಲಿನ ಸಂಗಾತಿಗಳ ವಿಚಾರಣೆ ನಡೆಸಲಾಗಿತ್ತು. ದಬ್ಬಾಳಿಕೆ, ಲಾಠಿಯೇಟು, ಬಂಧನ, ಬೂಟುಗಾಲಿನ ಒದೆತ ಇವು ಯಾವುದಕ್ಕೂ ಕಾರ್ಮಿಕ ಚಳುವಳಿ ಮಣಿಯದ ಕಾರಣ 1952ರಲ್ಲಿ ಕಮ್ಯುನಿಸ್ಟ್ ಪಕ್ಷ ಇಲ್ಲಿನ ಪ್ರಮುಖ ರಾಜಕೀಯ ಸಂಘಟನೆಯಾಗಿ ಮೂಡಿಬರುವಂತಾಯಿತು. 1954ರಲ್ಲಿ ಕುಂದಾಪುರಕ್ಕೂ ವಿಸ್ತರಿಸಿದ ಕಾರ್ಮಿಕ ಚಳುವಳಿ ಬಹುಬೇಗನೆ ಪ್ರಬಲ ಶಕ್ತಿಯಾಗಿ ಬೆಳೆದು ಬಂದಿತು. 1995ರಲ್ಲಿ ನಮ್ಮ ಪಕ್ಷವೇ ಕುಂದಾಪುರ ನಗರಸಭೆಯಲ್ಲಿ ಆಡಳಿತ ನಡೆಸುವಂತಾಯಿತು. ಜಿಲ್ಲೆಯಾದ್ಯಂತ ಕಾರ್ಮಿಕರ ನಡುವೆ ಸಮರಶೀಲ ಹೋರಾಟಗಳೂ ಬೆಳೆದು ಬಂದವು.




ಭೂಮಾಲಕ ಪದ್ಧತಿಯ ವಿರುದ್ಧ, ಭೂಸುಧಾರಣೆಯ ಜ್ಯಾರಿಗಾಗಿ ಇಲ್ಲಿ ಕಾರ್ಮಿಕರ ನೇತೃತ್ವದಲ್ಲಿ ಆನಗಳ್ಳಿ, ಬಸರೂರು, ಉಪ್ಪೂರು, ಬನ್ನಾಡಿ ಮೊದಲಾದೆಡೆ ರೈತರ ಹಾಗೂ ಗೇಣಿ ಒಕ್ಕಲುಗಳ ತೀವ್ರ ಹೋರಾಟ ನಡೆದು ರೈತರನ್ನು ಬೇಕಾಬಿಟ್ಟಿ ಒಕ್ಕಲೆಬ್ಬಿಸುವುದನ್ನು ಅಲ್ಪ ಪ್ರಮಾಣದಲ್ಲಾದರೂ ತಡೆಯಲು ಸಾಧ್ಯವಾಯಿತು.

ಸಂಗಾತಿಗಳೇ, ಯಾವುದೇ ಬೃಹತ್ ಕೈಗಾರಿಕೆಗಳನ್ನು ಹೊಂದಿಲ್ಲದ ಈ ಪ್ರದೇಶದಲ್ಲಿ ಇದೀಗ ಇರುವ ಸಣ್ಣ ಕೈಗಾರಿಕೆಗಳೂ, ಗುಡಿಕೈಗಾರಿಕೆಗಳು ನಾಶವಾಗುತ್ತಿವೆ. ಬಡಗಿ, ಕಮ್ಮಾರ, ಕುಂಬಾರರು ನಿರುದ್ಯೋಗಿಗಳಾಗುತ್ತಿದ್ದಾರೆ. ಹಂಚಿನ ಕಾರ್ಖಾನೆಗಳು ಮುಚ್ಚಲ್ಪಡುತ್ತಿವೆ. ಒಂದು ಕಾಲದಲ್ಲಿ ಇಲ್ಲಿನ ಪದ್ಮಶಾಲಿ ಸಮುದಾಯದವರು ಮತ್ತು ಪ್ರೊಟೆಸ್ಟೆಂಟ್ ಕ್ರೈಸ್ತರ ಮನೆಗಳಲ್ಲಿ ಕೇಳಿ ಬರುತ್ತಿದ್ದ ಕೈಮಗ್ಗದ ಲಟಪಟ ಸದ್ದು ನಿಂತುಹೋಗಿ ದಶಕಗಳೇ ಕಳೆದಿವೆ. ಬೀಡಿ ಕಾರ್ಮಿಕರಿಗೆ ವಾರಕ್ಕೆ ಎರಡು ದಿನ ಕೆಲಸ ದೊರೆಯುವುದೂ ದುಸ್ತರವಾಗಿದೆ. ಬ್ರೆಟ್ಟನ್‌ವುಡ್ಸ್ ಸಂಸ್ಥೆಗಳಾದ ಐ.ಎಂ.ಎಫ್., ವಿಶ್ವ ಬ್ಯಾಂಕ್ ಹಾಗೂ ವಿಶ್ವವ್ಯಾಪಾರ ಸಂಸ್ಥೆ ಹೇರುತ್ತಿರುವ ನವ ಉದಾರೀಕರಣ ಮತ್ತು ಜಾಗತೀಕರಣದ ನೀತಿಗಳು ಇಲ್ಲಿನ ರೈತರು, ಕಸಬುದಾರರು, ಮೀನುಗಾರರು ಮತ್ತು ಕಾರ್ಮಿಕರ ಬದುಕನ್ನು ನೇರವಾಗಿ ಗಂಡಾಂತರಕ್ಕೆ ತಳ್ಳುತ್ತಿವೆ. ಕಳೆದೆರಡು ದಶಕಗಳಲ್ಲಿ ಅದ್ಭುತವಾಗಿ ಬೆಳೆದಿರುವ ತಂತ್ರಜ್ಞಾನವು ಸಾಮ್ರಾಜ್ಯಶಾಹಿಗಳ ಕೈಯಲ್ಲಿನ ಅಸ್ತ್ರವಾಗುತ್ತಿದ್ದು ಸಾಮಾನ್ಯ ಜನತೆಯ ಬದುಕನ್ನು ಹಸನುಗೊಳಿಸುವ ಬದಲು ಅವರ ಸರ್ವನಾಶಕ್ಕೆ ಬಳಕೆಯಾಗುತ್ತಿದೆ.

ಹಿಂದುಳಿದ ವರ್ಗ ಮತ್ತು ದುಡಿಯುವ ಜನರಲ್ಲಿ ಕೋಮುಭಾವನೆಯನ್ನು ಕೆರಳಿಸಿ ಅವರನ್ನು ಪುರೋಗಾಮಿ ಶಕ್ತಿಗಳ ವಿರುದ್ಧ 'ಛೂ' ಬಿಡುವ ಕೆಲಸ ಇಲ್ಲಿ ವಿಶೇಷವಾಗಿ ನಡೆಯುತ್ತಿದೆ. ಜಿಲ್ಲೆಯಲ್ಲಿ ತೀವ್ರವಾಗಿರುವ ನಿರುದ್ಯೋಗ ಸಮಸ್ಯೆ, ಉದ್ಯೋಗಾವಕಾಶಗಳ ಕೊರತೆ, ರೈತರ ಸಮಸ್ಯೆಗಳು ಇತ್ಯಾದಿಗಳಿಂದ ಅವರ ಗಮನವನ್ನು ಬೇರೆಡೆಗೆ ಸೆಳೆಯಲು ಕೋಮುವಾದವನ್ನು ಅಸ್ತ್ರವಾಗಿ ಬಳಸಿಕೊಳ್ಳಲಾಗುತ್ತಿದೆ. ಎಲ್ಲಾ ಬಗೆಯ ಔದ್ಯೋಗಿಕರಣವನ್ನು ಪರಿಸರವಾದದ ಹೆಸರಿನಲ್ಲಿ ವಿರೋಧಿಸುವ ಒಂದು ಜನವಿಭಾಗವೂ ಪರೋಕ್ಷವಾಗಿ ಈ ಕೋಮುವಾದಿಗಳ ಅವುಟಗಳಿಗೆ ನೆರವಾಗುತ್ತಿದೆ.

ಈ ಎಲ್ಲಾ ಸಮಸ್ಯೆಗಳೂ ನಮ್ಮ ದೇಶದ ಮತ್ತು ರಾಜ್ಯದ ಸಮಸ್ಯೆಗಳೇ ಆಗಿರುವ ಕಾರಣ ಈ ಸಮ್ಮೇಳನವು ಇವುಗಳ ಕುರಿತು ಚರ್ಚಿಸಿ ಸೂಕ್ತ ನಿರ್ಧಾರವನ್ನು ಕೈಗೊಳ್ಳಲೆಂದು ಹಾರೈಸಿದರು.



ಹಿರಿಯ ಹೋರಾಟಗಾರರಿಗೆ ಸನ್ಮಾನ

ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ಜೀವನದ ಆರಂಭದಲ್ಲೇ ಧುಮುಕಿ, ನಂತರ ಈ ಧ್ಯೇಯೋದ್ದೇಶಗಳ ಸಾಧನೆಗಾಗಿ ಕಮ್ಯುನಿಸ್ಟ್ ಆಂದೋಲನವನ್ನು ಸೇರಿ ದಶಕಗಳ ಕಾಲ ದುಡಿದ ಆರು ಸಂಗಾತಿಗಳಿಗೆ ಹೃತ್ಪೂರ್ವಕ ಸನ್ಮಾನ ಉದ್ಘಾಟನಾ ಅಧಿವೇಶನದ ಒಂದು ವಿಶಿಷ್ಟ ಸಂದರ್ಭ.

ರಾಜ್ಯದಲ್ಲಿ ಕಮ್ಯುನಿಸ್ಟ್ ಆಂದೋಲನದ ಆರು ಮಂದಿ ಹಿರಿಯರಿಗೆ ಸನ್ಮಾನ ಈ ಉದ್ಘಾಟನಾ ಸಮಾರಂಭದ ಒಂದು ವಿಶಿಷ್ಟತೆಯಾಗಿತ್ತು. ಸ್ವಾತಂತ್ರ್ಯ ಹೋರಾಟಗಾರರಾಗಿ ಆರಂಭಿಸಿ, ಈ ಚಳುವಳಿಯ ಧ್ಯೇಯೋದ್ದೇಶಗಳ ಸಾಧನೆಗಾಗಿ ಕಮ್ಯುನಿಸ್ಟ್ ಆಂದೋಲನವನ್ನು ಸೇರಿ ದಶಕಗಳ ಕಾಲ ದುಡಿದ ಉಡುಪಿಯ ಕಾಂ. ಡೇವಿಡ್ ಕರ್ಕಡ, ದ.ಕ. ಜಿಲ್ಲೆಯ ಕಾಂ. ಕೆ.ವೀರಪ್ಪ ಹಾಗೂ ಕಾಂ. ಪೂವಪ್ಪ ಸಾಲ್ಯಾನ್ ಮತ್ತು ಬಾಗಲಕೋಟೆಯ ಕಾಂ. ಬಿ.ಎಂ. ಕಲಾಸಿಯವರನ್ನು ಕಾಂ. ಎಸ್.ಆರ್.ಪಿ. ಶಾಲು ಹೊದಿಸಿ ಸನ್ಮಾನಿಸಿದರು. ಬೆಂಗಳೂರಿನ ಕಾಂ. ಮುಗುವಾಳಪ್ಪ ಹಾಗೂ ಬೆಳಗಾವಿಯ ಕಾಂ. ಎಸ್.ಹೆಚ್. ಕಪ್ಪಣ್ಣನವರ್ ಅನಾರೋಗ್ಯದಿಂದ ಹಾಜರಾಗಲಿಲ್ಲ. ಅವರನ್ನು ಅವರ ಮನೆಗಳಲ್ಲೇ ಸನ್ಮಾನಿಸಲು ನಿರ್ಧರಿಸಲಾಯಿತು.

ಬೆಂಗಳೂರಿನ **ಕಾಂ। ಮುಗುವಾಳಪ್ಪ** ಸ್ವಾತಂತ್ರ್ಯ ಚಳುವಳಿಯನ್ನು ಸೇರಿ ನಂತರ ಜೋಡಿದಾರರ ವಿರುದ್ಧ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದವರು. ನಂತರ ಆ ಭಾಗದ ರೈತ ಚಳುವಳಿಗೆ ಅಪಾರ ಕಾಣಿಕೆ ನೀಡಿದ ಹಿರಿಯರು. ಈಗಲೂ ಐಕ್ಯರಂಗ ಪತ್ರಿಕೆಯ ಪ್ರಸಾರಕ್ಕಾಗಿ ದುಡಿಯುತ್ತಿರುವವರು.

ಬೆಳಗಾವಿಯ **ಎಸ್.ಹೆಚ್.ಕಪ್ಪಣ್ಣನವರೂ** ಸವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ನಂತರ ತಮ್ಮ ಭಾಗದಲ್ಲಿ ರೈತ ಚಳುವಳಿಯನ್ನು ಬೆಳೆಸಿದವರು. ಈಗಲೂ ಈ ಚಳುವಳಿಗೆ ತಮ್ಮ ಕಾಣಿಕೆ ನೀಡುತ್ತಿದ್ದಾರೆ.

ಉಡುಪಿಯ **ಕಾಂ. ಡೇವಿಡ್ ಕರ್ಕಡ** ಈ ಭಾಗದಲ್ಲಿ 40ರ ದಶಕದಲ್ಲೇ ಕೆಂಪು ಬಾವುಟವನ್ನು ಎತ್ತಿ ಹಿಡಿದವರು. ನೇಯ್ಗೆ, ಬೀಡಿ, ಸಾರಿಗೆ ಕಾರ್ಮಿಕರನ್ನು ಸಂಘಟಿಸಿದವರು. ರೈತ ಚಳುವಳಿಗೂ ನೆರವು ನೀಡಿದ ಇವರು ಭೂಮಾಲಿಕರ, ಪೋಲೀಸರ ದೌರ್ಜನ್ಯವನ್ನು ಎದುರಿಸಿ ನಿಂತವರು. ಸಿಪಿಐ(ಎಂ) ರಾಜ್ಯ ಸಮಿತಿಯ ಸದಸ್ಯರೂ ಆಗಿದ್ದವರು.

ದಕ್ಷಿಣ ಕನ್ನಡ ಜಿಲ್ಲೆಯ 70 ವರ್ಷದ **ಪೂವಪ್ಪ ಸಾಲಿಯಾನ್** ಬಾಲ್ಯದಲ್ಲೇ ನೇಕಾರರ ಚಳುವಳಿಯಿಂದ ಆಕರ್ಷಿತರಾಗಿ ಪಕ್ಷ ಸೇರಿದವರು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದವರು. ಸ್ವಾತಂತ್ರ್ಯಪೂರ್ವ ವರ್ಷಗಳಲ್ಲಿ ಪ್ರತಿವರ್ಷವೂ ಬ್ರಿಟಿಷರ ನಿರ್ಬಂಧವನ್ನು ಉಲ್ಲಂಘಿಸಿ ಜನವರಿ 26 ರಂದು ಸ್ವಾತಂತ್ರ್ಯ ದಿನವನ್ನು ಆಚರಿಸುತ್ತಿದ್ದವರು ಈಗಲೂ ಕ್ರಿಯಾಶೀಲ ಮುಂದಾಳುಗಳಾಗಿದ್ದಾರೆ.

ಇದೇ ಜಿಲ್ಲೆಯ 75 ವರ್ಷದ ಕಾಂ. **ಜೆ.ವೀರಪ್ಪ** ಮೂರ್ತೆದಾರ ಹೋರಾಟದಿಂದ ಬಂದವರು ಹಂಚು, ಪ್ರೆಸ್ ಕಾರ್ಮಿಕರ ಬಂದರು ಕೆಲಸಗಾರರ ಹಾಗೂ ಇತರ ಉದ್ದಿಮೆಗಳ ಕಾರ್ಮಿಕರ ಹೋರಾಟಗಳಲ್ಲಿ ಕರಿಗಾಲುಗಳ, (ಮಾಲಿಸಿಕರಚೇಲಾಗಾಳು) ಗೂಂಡಾಗಳ ಹಾವಳಿಯನ್ನು ಕೆಚ್ಚಿನಿಂದ ಎದುರಿಸಿ ನೆರವಾದವರು, ಯುವ ಪೀಳಿಗೆಗೆ ಆದರ್ಶಪ್ರಾಯರಾಗಿ ಈಗಲೂ ಜೀವನ ನಡೆಸುತ್ತಿರುವವರು.

ಬಾಗಲಕೋಟೆಯ 76 ವರ್ಷದ **ಕಾಂ. ಡಿ.ಎಂ. ಕಲಾಸಿ** ಈ ಭಾಗದಲ್ಲಿ ಕಾಂ. ಎನ್.ಕೆ. ಉಪಾಧ್ಯಾಯರ ನೇತೃತ್ವದ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದವರು. ಅಂಚೆ-ತಂತಿ ನೌಕರರಾಗಿ ಅವರ ಇತಿಹಾಸ ಪ್ರಸಿದ್ಧ ಮುಷ್ಕರದಲ್ಲಿ ಭಾಗವಹಿಸಿ ಜೈಲುವಾಸವನ್ನು ಅನುಭವಿಸಿದರು. 1955 ರಲ್ಲಿ ಗೋವಾ ವಿಮೋಚನೆಯ ಹೋರಾಟದಲ್ಲಿ ಕಾಂ. ಎನ್.ಕೆ.ಯವರ ನೇತೃತ್ವದ ಸತ್ಯಾಗ್ರಹಿ ತಂಡದಲ್ಲಿ ಇವರೂ ಇದ್ದರು. ಈಗಲೂ ಬಿಜಾಪುರ ಜಿಲ್ಲಾ ಸಮಿತಿಯ ಸದಸ್ಯರಾಗಿ ದುಡಿಯುತ್ತಿದ್ದಾರೆ.

ಡೇವಿಡ್ ಕರ್ಕಡ



ಪೂವಪ್ಪ ಸಾಲ್ಯಾನ್



ಜೆ.ವೀರಪ್ಪ



ಡಿ.ಎಂ.ಕಲಾಸಿ



ರಾಜ್ಯಸಮಿತಿಯ ಸದಸ್ಯರು

13. ಟಿ.ಎಸ್.ಮಣಿ, ಕೋಲಾರ
14. ಕೆ.ಎಂ.ವೆಂಕಟೇಶ್, ಕೋಲಾರ
15. ರಾಮಚಂದ್ರ ಉಚ್ಚಿಲ್, ದಕ್ಷಿಣ ಕನ್ನಡ
16. ಜೆ.ಬಾಲಕೃಷ್ಣ ಶೆಟ್ಟಿ, ದಕ್ಷಿಣ ಕನ್ನಡ
17. ಆರ್.ಶ್ರೀನಿವಾಸ್, ಬೆಂಗಳೂರು(ಕಾರಾಗೃಹದಲ್ಲಿದ್ದಾರೆ)
18. ಪ್ರಕಾಶ್ ಕೆ -ಬೆಂಗಳೂರು
19. ಮೀನಾಕ್ಷಿ ಸುಂದರಂ- ಬೆಂಗಳೂರು
20. ಇ.ಕೆ.ಎನ್ ರಾಜನ್ - ಬೆಂಗಳೂರು
21. ಭೀಮಸಿ ಕಲಾದಗಿ - ವಿಜಾಪುರ
22. ಯು.ಬಸವರಾಜ್ - ಬಳ್ಳಾರಿ
23. ಶಾಂತಾರಾಮ ನಾಯಕ್ -ಉತ್ತರ ಕನ್ನಡ
24. ವಿ.ಪಿ.ಕುಲಕರ್ಣಿ - ಬೆಳಗಾಂ
25. ಮುಜೀಬ್ - ತುಮಕೂರು
26. ವಿ.ಸುಕುಮಾರ್ - ಚಿಕ್ಕಮಗಳೂರು
27. ಕೆ.ಎಸ್.ವಿಮಲ - ಬೆಂಗಳೂರು
28. ಎಸ್.ವರಲಕ್ಷ್ಮಿ - ಬೆಂಗಳೂರು
29. ಬಾಲಕೃಷ್ಣ ಶೆಟ್ಟಿ (ಕಟೀರಿ) -ಬೆಂಗಳೂರು
30. ಕೆ.ಎನ್.ಉಮೇಶ್ -ಬೆಂಗಳೂರು
31. ಅಮಾನುಲ್ಲಾ ಖಾನ್ -ಬೆಂಗಳೂರು
32. ವೆಂಕಟಸ್ವಾಮಿ ರೆಡ್ಡಿ - ಕೋಲಾರ
33. ಗಾಂಧಿನಗರ ನಾರಾಯಣ ಸ್ವಾಮಿ - ಕೋಲಾರ
34. ಅಣ್ಣಾರಾಯ ಈಳಿಗೇರ-ವಿಜಾಪುರ
35. ಮಲ್ಲಯ್ಯ ಜಾಲಹಳ್ಳಿ -ರಾಯಚೂರು
36. ಪುಟ್ಟಮಾದು -ಮಂಡ್ಯ

ಪಕ್ಷದ ಜಿಲ್ಲಾ ಕಾರ್ಯದರ್ಶಿಗಳ ಪಟ್ಟಿ

ದಕ್ಷಿಣ ಕನ್ನಡ	-	ಕೆ.ಆರ್.ಶ್ರೀಯಾನ್
ಉಡುಪಿ	-	ಕೆ.ಶಂಕರ್
ಕೋಲಾರ	-	ಜಿ.ವಿ.ಶ್ರೀರಾಮರೆಡ್ಡಿ
ಗುಲ್ಬರ್ಗ	-	ಮಾರುತಿ ಮಾನ್ಪಡೆ
ಬೆಂಗಳೂರು	-	ಪ್ರಕಾಶ್.ಕೆ
ಬಳ್ಳಾರಿ	-	ಯು.ಬಸವರಾಜು
ರಾಯಚೂರು	-	ಮಲ್ಲಯ್ಯ ಜಾಲಹಳ್ಳಿ
ಕೊಪ್ಪಳ	-	ಆರ್.ಕೆ.ದೇಸಾಯಿ
ಬಿಜಾಪುರ	-	ಅಣ್ಣಾರಾಯ ಈಳಿಗೇರ
ಉತ್ತರಕನ್ನಡ	-	ಶಾಂತಾರಾಮ ನಾಯಕ
ಧಾರವಾಡ	-	ಆರ್.ಹೆಚ್.ಅಯಿ
ತುಮಕೂರು	-	ಸಯ್ಯದ್ ಮುಜೀಬ್
ಮೈಸೂರು	-	ಎನ್.ಎಸ್.ಪ್ರಭಾಕರ್
ಹಾಸನ/ಚಿ.ಮಗಳೂರು	-	ವಿ.ಸುಕುಮಾರ್
ಮಂಡ್ಯ	-	ಪುಟ್ಟಮಾದು
ಶಿವಮೊಗ್ಗ	-	ಎಸ್.ಬಿ.ಶಿವಶಂಕರ್
ಕೊಡಗು	-	ಪೀಟರ್‌ಲೋಬೊ

ಸಮ್ಮೇಳನದ ಎಲ್ಲಾ ಕಲಾಪಗಳಿಗೆ ಮೆರಗು ನೀಡುವಂತೆ ನಡೆಯಿತು. ಕೊನೆ ದಿನದ ಕೆಂಪು ಸಮವಸ್ತ್ರಧಾರಿ ಸ್ವಯಂಸೇವಕರುಳ್ಳ ಶಿಸ್ತು ಬದ್ಧ ಬೃಹತ್ ಮೆರವಣಿಗೆ, ಬಹಿರಂಗ ಸಭೆಯು ಕಮ್ಯುನಿಸ್ಟ್ ಪಕ್ಷದ ಪಾತ್ರಕ್ಕೆ ಸಾಕ್ಷಿಯಾಯಿತು. ಇಂತಹ ಸಭೆಯಲ್ಲಿ ಸೀತಾರಾಂ ಮತ್ತಿತರ ಸಂಗಾತಿಗಳ ಮಾತುಗಳು ಹೋರಾಟದ ಹುಮ್ಮಸ್ಸನ್ನು ತುಂಬಿದವು

ಉಡುಪಿಯಲ್ಲಿ ಸಿಪಿಐ(ಎಂ) 18ನೇ ಕರ್ನಾಟಕ ರಾಜ್ಯ ಸಮ್ಮೇಳನದ ಸಮಾರೋಪದ ನಂತರ ಸಾವಿರಾರು ಜನ ಭಾಗವಹಿಸಿದ ಆಕರ್ಷಕ ವರ್ಣರಂಜಿತ ಮೆರವಣಿಗೆ ನಗರದ ಮುಖ್ಯ ಬೀದಿಗಳನ್ನು ಹಾದು ಅಜ್ಜರಕಾಡು ಮೈದಾನ ಸೇರಿತು. ಆಮೇಲೆ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಪಕ್ಷದ ನಾಯಕರು ಮಾತನಾಡಿದರು. ಬದಲಿ ಆರ್ಥಿಕ ನೀತಿಗಳಿಗೆ ಹೋರಾಡಲು ಪೊಲಿಟ್ ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ಕರೆಯಿತ್ತರು. ಕರ್ನಾಟಕದ ರಾಜಕೀಯ ಪರಿಸ್ಥಿತಿ, ಜನರನ್ನು ಕಾಡುತ್ತಿರುವ ಸಮಸ್ಯೆಗಳು ಇವುಗಳ ಬಗ್ಗೆ 18ನೇ ರಾಜ್ಯ ಸಮ್ಮೇಳನದ ತಿಳುವಳಿಕೆ ನಿರ್ಧಾರಗಳನ್ನು ವಿವರಿಸಿ ರಾಜ್ಯದ ಹಿರಿಯ ನಾಯಕರುಗಳಾದ ಜಿ.ವಿ.ಶ್ರೀರಾಮರೆಡ್ಡಿ, ನೀಲಾ, ಕೆ.ಆರ್.ಶ್ರೀಯಾನ್ ಮತ್ತು ಜಿ.ಎನ್.ನಾಗರಾಜ್ ಮಾತನಾಡಿದರು. ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರ ಸಮಿತಿ ಸದಸ್ಯರಾದ ಕೆ.ವರದರಾಜನ್ ಮತ್ತು ಇತರ ಹಿರಿಯ ನಾಯಕರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದೇಶದ ಜನತೆಯ ಬಾಳು ಹಿತವಾಗಿಸಲು ಯಾವ ನೀತಿಗಳನ್ನು ಅನುಸರಿಸಬೇಕು? ಜನ ಎದುರಿಸುತ್ತಿರುವ ಸಮಸ್ಯೆಗಳೇನು? ಅದರ ಪರಿಹಾರಕ್ಕೆ ಇರುವ ಮಾರ್ಗಗಳು ಯಾವುವು? - ಈ ಪ್ರಶ್ನೆಗಳಿಗೆ ಉತ್ತರ ಹುಡುಕಲು ಸಿಪಿಐ(ಎಂ) 18ನೇ ಮಹಾಧಿವೇಶನಕ್ಕೆ ತಯಾರಿಯಾಗಿ ಶಾಖಾ, ವಲಯ, ಪ್ರದೇಶ, ಜಿಲ್ಲಾ, ರಾಜ್ಯ ಮಟ್ಟಗಳಲ್ಲಿ ಸಿಪಿಐ(ಎಂ)ನ ಸಮ್ಮೇಳನಗಳು ನಡೆಯುತ್ತಿವೆ.

ಈ ಪ್ರಕ್ರಿಯೆಯ ಭಾಗವಾಗಿ ಉಡುಪಿಯಲ್ಲಿ ಕರ್ನಾಟಕದ ರಾಜ್ಯ ಸಮ್ಮೇಳನ ಈಗಷ್ಟೇ ಮುಗಿದಿದೆ. ಆದರೆ ಕಮ್ಯುನಿಸ್ಟ್ - ವಿರೋಧಿಗಳು 'ಸಮಾಜವಾದವೇ ಮನುಕುಲದ ಭವಿಷ್ಯ' ಎಂದು ಹೇಳುವ ಕಮ್ಯುನಿಸ್ಟರಿಗೇ ಭವಿಷ್ಯವಿಲ್ಲ ಎಂದು ಮೂದಲಿಸುತ್ತಿದ್ದಾರೆ. ತಾಯಿಯ ಗರ್ಭದಿಂದ ಆಚೆಗೆ ಬಂದ ಮಗು, ಎಷ್ಟೇ ಸಮಸ್ಯೆಗಳು ಇದ್ದರೂ ತಾಯಿಯ ಗರ್ಭದ ಒಳಗೆ ಹೋಗಲು ಸಾಧ್ಯವಿಲ್ಲವೋ, ಹಾಗೆ ಬಂಡವಾಳಶಾಹಿಯ ಗರ್ಭದಿಂದ ಹುಟ್ಟಿದ ಸಮಾಜವಾದಿ ಮಗು ಬೆಳೆಯುತ್ತದೆ. ಬಂಡವಾಳಶಾಹಿಯ ಗರ್ಭಕ್ಕೆ ಪುನಃ ಹೋಗಲು ಸಾಧ್ಯವಿಲ್ಲ. ಬಂಡವಾಳಶಾಹಿ ವ್ಯವಸ್ಥೆ ಜಗತ್ತಿನ ಜನತೆಯ ಸಮಸ್ಯೆಗಳಿಗೆ ಪರಿಹಾರ ಕೊಡಲು ಸಾಧ್ಯವಿಲ್ಲ ಎಂದು ಈಗಾಗಲೇ ರುಜುವಾತಾಗಿದೆ. ಭಾರತದಲ್ಲಿ ಇತ್ತೀಚಿನ ಚುನಾವಣೆಗಳಲ್ಲಿ ಎಡಪಕ್ಷಗಳಲ್ಲಿ ಸ್ವಾತಂತ್ರ್ಯದ ನಂತರದ ಅವಧಿಯಲ್ಲೇ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಸಂಸತ್ ಸದಸ್ಯರು ಆರಿಸಿದ್ದಾರೆ. ದೇಶದ ಐಕ್ಯತೆ, ಸಾರ್ವಭೌಮತೆ ಮತ್ತು ರಾಜಕೀಯದಲ್ಲಿ ನೈತಿಕತೆ ಎತ್ತಿ ಹಿಡಿಯುವ ಎಡಪಕ್ಷಗಳನ್ನು ಜನ ಮೆಚ್ಚಿದ್ದಾರೆ. ಕಳೆದ ಚುನಾವಣೆಯಲ್ಲಿ ನಾವು ಕೊಟ್ಟ ಮೂರು ಘೋಷಣೆಗಳೂ - (ಬಿಜೆಪಿ ನಾಯಕತ್ವದ ಎನ್‌ಡಿಎ ಸೋಲಿಸಿ, ಬದಲಿ ಜಾತ್ಯತೀತ ಸರ್ಕಾರ ರಚನೆ ಆಗಲಿ, ಎಡಪಕ್ಷಗಳನ್ನು ಬಲಪಡಿಸಿ) ಪೂರ್ಣವಾಗಿ ಕಾರ್ಯಗತವಾಗಿದೆ ಎಂಬುದು ಕಮ್ಯುನಿಸ್ಟ್ - ವಿರೋಧಿಗಳಿಗೆ ಜನತೆ ಕೊಟ್ಟ ಉತ್ತರ.

'ಸಾಕು ನಾಯಿಯಲ್ಲ, ಕಾವಲು ನಾಯಿ'

ಕೇಂದ್ರ ಸರ್ಕಾರ ಎಡಪಕ್ಷಗಳ ಬೆಂಬಲವಿಲ್ಲದೆ ರಚನೆಯಾಗುವ ಸಾಧ್ಯತೆ ಇಲ್ಲದ ರಾಜಕೀಯ ಪರಿಸ್ಥಿತಿ ನಿರ್ಮಾಣವಾಗಿದ್ದು, ಎಡಪಕ್ಷಗಳ ಮೇಲೆ ಗುರುತರ ಜವಾಬ್ದಾರಿ ಬಿದ್ದಿದೆ. ಕನಿಷ್ಟ ಸಾಮಾನ್ಯ ಕಾರ್ಯಕ್ರಮಕ್ಕೆ ಯುಪಿಎ ಸರ್ಕಾರವನ್ನು ಬದ್ಧವಾಗಿಸುವ ಮೂಲಕ ನಾವು ನಮ್ಮ ಜವಾಬ್ದಾರಿ ನೆರವೇರಿಸುತ್ತಿದ್ದೇವೆ. ಯುಪಿಎ ಸರ್ಕಾರ ಕನಿಷ್ಟ ಕಾರ್ಯಕ್ರಮದಿಂದ ದೂರ ಹೋಗದಂತೆ ಸತತ ಒತ್ತಡ ಹೇರುತ್ತಿದ್ದೇವೆ. ಇದು ಬೂರ್ಜ್ವ ಮಾಧ್ಯಮಗಳಿಗೆ ಇಷ್ಟವಾಗಿಲ್ಲ. ಎಡಪಕ್ಷಗಳು ಕಾಂಗ್ರೆಸ್‌ನ ಸಾಕು ನಾಯಿ, ಜವಾಬ್ದಾರಿ ಇಲ್ಲದ ಅಧಿಕಾರ ಚಲಾಯಿಸುತ್ತಿವೆ ಎಂದೆಲ್ಲಾ ಮೂದಲಿಸುತ್ತಿದ್ದಾರೆ. ಅದಕ್ಕೆ ನಮ್ಮ ಉತ್ತರ ಅವರದ್ದೇ 'ನಾಯಿಗಳ' ಭಾಷೆಯಲ್ಲಿ - ನಾವು ಜನರ ಹಿತಾಸಕ್ತಿಗಳ ಕಾವಲು ನಾಯಿ. ಸಾಕು ನಾಯಿಯಲ್ಲ, ನಿಜವಾಗಿಯೂ ನಾವು ಅಧಿಕಾರದಿಂದ ಹೊರಗಿದ್ದು, ಜನತೆಗೆ ನಮ್ಮ ಗುರುತರ ಜವಾಬ್ದಾರಿ ನಿರ್ವಹಿಸುತ್ತಿದ್ದೇವೆ ಎಂದು ಯೆಚೂರಿ ಖಾರವಾಗಿ ಹೇಳಿದರು. ಉದ್ಯೋಗ ಖಾತರಿ ಕಾನೂನು (ಪ್ರತಿ ಕುಟುಂಬಕ್ಕೆ ಕನಿಷ್ಟ 100 ದಿನದ ಉದ್ಯೋಗ ಖಾತರಿ ಒದಗಿಸಬೇಕು) ಬಗ್ಗೆ ದೇಶವ್ಯಾಪಿ ಚಳುವಳಿ ಇದಕ್ಕೆ ಉದಾಹರಣೆ. ಇದಕ್ಕೆ ಪಾರ್ಲಿಮೆಂಟಿನಲ್ಲಿ ಬರಿಯ ಎಡಪಕ್ಷಗಳ 60ಕ್ಕೂ ಹೆಚ್ಚು. ಸದಸ್ಯರ ಒತ್ತಡ ಸಾಲದು. ಜನತಾ ಚಳುವಳಿಗಳ ಜನಾಭಿಪ್ರಾಯದ ಭಾರಿ ಒತ್ತಡ ಬೇಕಾಗಿದೆ.

'ವಿರೋಧಿ ಬೆಂಚಿನಲ್ಲಿ ಕೂರಲು ಆಗದಿದ್ದರೆ ಮನೆಗೆ ಹೋಗಿ'

ವಿರೋಧ ಪಕ್ಷದ ನಾಯಕ ಶ್ರೀ ವಾಜಪೇಯಿಯವರು 'ವಿರೋಧ ಪಕ್ಷದ ಬೆಂಚುಗಳಲ್ಲಿ ಐದು ವರ್ಷಗಳು ಕೂರಲು ತಯಾರಿಲ್ಲ. ಅದು ಅಗತ್ಯವೂ ಇಲ್ಲ' ಎಂದು ಕನಸು ಕಾಣುತ್ತಿದ್ದಾರೆ. ಆದರೆ ಅವರ ಕನಸು ನನಸಾಗುವುದಿಲ್ಲ. ಯುಪಿಎ ಸರ್ಕಾರ ಕನಿಷ್ಟ ಸಮಾನ ಕಾರ್ಯಕ್ರಮದ ಜವಾಬ್ದಾರಿ ಪೂರೈಸುತ್ತದೆ. ಆ ಮೂಲಕ ಐದು ವರ್ಷಗಳ ಅವಧಿಗೆ ಸರ್ಕಾರ ಕೊಡುತ್ತದೆ. ಮುಂಬರುವ ಮೂರು ರಾಜ್ಯಗಳ ಚುನಾವಣೆಗಳಲ್ಲಿ (ಬಿಹಾರ, ಜಾರ್ಖಂಡ್, ಹರಿಯಾಣ) ಕೂಡಾ ಬಿಜೆಪಿ ಮುಖಭಂಗವಾಗುವ ಸೋಲು ಅನುಭವಿಸುತ್ತದೆ. 2007 ರವರೆಗೆ ಯಾವುದೇ ರಾಜ್ಯದಲ್ಲೂ ಬಿಜೆಪಿಗೆ ಅಧಿಕಾರ ಸಾಧ್ಯತೆ ಇಲ್ಲ. ಆದ್ದರಿಂದ ವಾಜಪೇಯಿ ವಿರೋಧಿ ಬೆಂಚುಗಳಲ್ಲಿ ಕೂರಲು ಕಷ್ಟವಾದರೆ ಮನೆಗೆ ಹೋಗಬಹುದು ಎಂದು ಬಿಜೆಪಿಗೆ ಮೂದಲಿಸಿದರು ಯೆಚೂರಿ. ಇದರಿಂದ ಹತಾಶರಾದ ಬಿಜೆಪಿಯವರು ಜನರ ಸಮಸ್ಯೆಗಳಿಂದ ಅವರ ಗಮನ ಬೇರೆಡೆ ಸೆಳೆಯಲು ತಮ್ಮದೇ ಅಜೆಂಡಾ ಹೇರುತ್ತಿದ್ದಾರೆ. ಶಂಕರಾಚಾರ್ಯರಂತಹ ಧಾರ್ಮಿಕ ನಾಯಕರಿಗೆ ಬೇರೆ ಕಾನೂನು ಸಂಹಿತೆ ಇರಬೇಕು ಎನ್ನುತ್ತಿದ್ದಾರೆ. ಬಾಬಾ ಬುಡನ್‌ಗಿರಿ, ಅಫ಼ಝುಲಖಾನ್ ಕೋಟೆ ಮುಂತಾದವು ಎತ್ತಲು ನೋಡುತ್ತಿದ್ದಾರೆ. ಆದರೆ ಜನ ಅದಕ್ಕೆ ಸ್ಪಂದಿಸುತ್ತಿಲ್ಲ. ಈ ಪರಿಸ್ಥಿತಿ ಬಳಸಿ ನಾವು ಧರ್ಮನಿರಪೇಕ್ಷ - ರಾಜಕಾರಣ ಬಲಪಡಿಸಬೇಕಾಗಿದೆ. ಜಾತ್ಯತೀತ ಸರ್ಕಾರ ಕಾಪಾಡಿಕೊಳ್ಳುತ್ತಾ, ಬದಲಿ ಆರ್ಥಿಕ ನೀತಿಗಳಿಗೆ ಹೋರಾಟ ತೀವ್ರಗೊಳಿಸಬೇಕಾಗಿದೆ ಎಂದರು. 'ಜೀವನದುದ್ದಕ್ಕೂ ಉಡುಪಿ ಊಟ ಹೊಡೆಯುತ್ತಿದ್ದರೂ, ಉಡುಪಿಗೆ ಬರುವ ಛಾನ್ಸು ಸಿಕ್ಕಿರಲಿಲ್ಲ' ಎಂದು ಹಾಸ್ಯಮಯವಾಗಿ ಯೆಚೂರಿ ತಮ್ಮ ಭಾಷಣ ಆರಂಭಿಸಿದ್ದರು.

ಸಮಾನ ಕನಿಷ್ಟ ಕಾರ್ಯಕ್ರಮದ ಜಾರಿಯೇ ಬೆಂಬಲದ ಆಧಾರ

- ಸೀತಾರಾಂ ಯೆಚೂರಿ



'ಬೆನ್ನಿ ಹಿನ್ ದಾಂಧಲೆಯ ನಷ್ಟ ಸಂಘ ಪರಿವಾರದಿಂದ ವಸೂಲಿ ಮಾಡಿ'

ಮೊದಲಿಗೆ ಮಾತನಾಡಿದ ಸಿಪಿಐ(ಎಂ) ಶಾಸಕ ಜಿ.ವಿ.ಶ್ರೀರಾಮರೆಡ್ಡಿ ರಾಜ್ಯದಲ್ಲಿ ಧರಂಸಿಂಗ್ ಸರ್ಕಾರದ ನಿಷ್ಕ್ರಿಯತೆ ಮತ್ತು ಬಿಜೆಪಿ ನಾಯಕರುಗಳ ರಾಜಕೀಯವನ್ನು ಖಂಡಿಸಿ, ಜನರ ಸಮಸ್ಯೆಗಳ ಬಗ್ಗೆ 18ನೇ ಸಿಪಿಐ(ಎಂ) ರಾಜ್ಯ ಸಮ್ಮೇಳನದ ತೀರ್ಮಾನವನ್ನು ವಿವರಿಸಿದರು. ಅದಕ್ಕೆ ಹೋರಾಡಲು ಕರೆಯಿತ್ತರು. ಬೆನ್ನಿ ಹಿನ್ ಧಾರ್ಮಿಕ ಸಭೆಗಳ ಬಗ್ಗೆ ದಾಂಧಲೆ, ಎಬ್ಬಿಸಿದ ಬಿಜೆಪಿ ರಾಜಕೀಯವನ್ನು ಬಲವಾಗಿ ಖಂಡಿಸಿ ಮೂದಲಿಸಿದ ರೆಡ್ಡಿಯವರು, ಧರಂ ಸಿಂಗ್ ಸರ್ಕಾರ ಬಿಜೆಪಿ ಮತ್ತು ಸಂಘ ಪರಿವಾರದ ದಾಂಧಲೆಯಲ್ಲಿ ನಷ್ಟವಾದ ಆಸ್ತಿ-ಪಾಸ್ತಿಯ ಹಣ ಅವರಿಂದ ವಸೂಲು ಮಾಡಬೇಕು ಎಂದು ಒತ್ತಾಯಿಸಿದ ಅವರು ಸಾಯಿ ಬಾಬಾನಿಂದ ಹಿಡಿದು ಎಲ್ಲಾ ಮೋಸದ ಬಾಬಾಗಳ ಕಾಲಿಗೆ ಬಿದ್ದ ಮಾಜಿ ಪ್ರಧಾನಿ ವಾಜಪೇಯಿ ಹಿಡಿದು ಎಲ್ಲಾ ಬಿಜೆಪಿ ನಾಯಕರಿಗೆ, ಬೆನ್ನಿ ಹಿನ್ ಪವಾಡಗಳ ಬಗ್ಗೆ ಟೀಕಿಸುವ ಹಕ್ಕಿಲ್ಲ ಎಂದು ಕಟುವಾಗಿ ಟೀಕಿಸಿದರು. ವಿವೇಕಾನಂದರು ಹಿಂದೂ ಧರ್ಮ ಪ್ರಚಾರಕ್ಕೆ ಅಮೇರಿಕಕ್ಕೆ ಹೋಗಿಲ್ಲವೆ? ಹಾಗಿದ್ದರೆ ಬೆನ್ನಿ ಹಿನ್ ಧರ್ಮ ಪ್ರಚಾರಕ್ಕೆ ಭಾರತಕ್ಕೆ ಬರುವುದರಲ್ಲಿ ದಾಂಧಲೆ ಎಬ್ಬಿಸುವುದು ಏನಿದೆ' ಎಂದು ರೆಡ್ಡಿಯವರು ಪ್ರಶ್ನಿಸಿದರು. ಜನರ ಸಮಸ್ಯೆಗಳನ್ನು ಉಲ್ಬಣಿಸಿದ ನೀತಿಗಳನ್ನು (ಹಿಂದೆ ಕೇಂದ್ರ ಸರ್ಕಾರ ನಡೆಸುತ್ತಿದ್ದಾಗ) ಜಾರಿಗೆ ತಂದ ಬಿಜೆಪಿಗೆ, ಜನರ ಸಮಸ್ಯೆ ಬಗ್ಗೆ ಮಾತನಾಡಲು ಮುಖವಿಲ್ಲ, ಅದಕ್ಕೆ ಶಂಕರಾಚಾರ್ಯ, ಬೆನ್ನಿ ಹಿನ್, ಬಾಬಾ ಬುಡನ್‌ಗಿರಿ, ಈದ್ಗಾ ಮೈದಾನ್, ತಿರಂಗಾ ಮುಂತಾದವುಗಳ ಬಗ್ಗೆ ಅಸಗತ್ಯ ದಾಂಧಲೆ ನಡೆಸುತ್ತಿದ್ದಾರೆ. ಇದು ಜನರ ಗಮನ ಬೇರೆಡೆಗೆ ತಿರುಗಿಸುವ ಯತ್ನವಲ್ಲದೆ ಬೇರೆ ಏನಿಲ್ಲ, ನಿರುದ್ಯೋಗಿ ರಾಜಕಾರಣಿಗಳು ಬೆನ್ನಿ ಹಿನ್, ಕನಕ ಗೋಪುರ ದಂತಹ ವಿಷಯಗಳನ್ನು ದೊಡ್ಡದು ಮಾಡುತ್ತಿದ್ದಾರೆ. ಧರಂ ಸಿಂಗ್ ಸರ್ಕಾರ ಮುಂದುವರೆಸಿರುವ ಜನ-ವಿರೋಧಿ ನೀತಿಗಳನ್ನು ವಿರೋಧಿಸಲು ತಯಾರಿಲ್ಲ ಅವರಿಗೆ ಅಗತ್ಯವೂ ಇಲ್ಲ. ಸಿಪಿಐ(ಎಂ)ನ 18ನೇ ರಾಜ್ಯ ಸಮ್ಮೇಳನ ಜನರ ನಿಜವಾದ ಸಮಸ್ಯೆಗಳ ಬಗ್ಗೆ ಪರಿಹಾರಗಳ ಬಗ್ಗೆ ಚರ್ಚೆ ನಡೆಸಿದೆ. ಅದರ ಆಧಾರದ ಮೇಲೆ ಬದಲಿ ನೀತಿಗಳಿಗೆ, ಬದಲಿ ರಾಜಕೀಯಕ್ಕೆ ಹೋರಾಡೋಣ, ಬನ್ನಿ ಎಂದು ರೆಡ್ಡಿಯವರು ಕರೆಯಿತ್ತರು.

ಕರಾವಳಿ ಜಿಲ್ಲೆಗಳ ಜನರ ಸಮಸ್ಯೆಗಳು

ಕರಾವಳಿ ಜಿಲ್ಲೆಗಳ ಜನರ ಸಮಸ್ಯೆಗಳ ಬಗ್ಗೆ ವಿವರವಾಗಿ ಹಿರಿಯ ನಾಯಕ ಕೆ.ಆರ್.ಶ್ರೀಯಾನ್ ಮಾತನಾಡಿದರು. ಕರಾವಳಿ ಪ್ರದೇಶದಲ್ಲಿ ವ್ಯಾಪಕವಾಗಿದ್ದು ಜಿಲ್ಲೆಯ ಆರ್ಥಿಕದಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದ ಹಂಚು, ಬೀಡಿ ಕೈಗಾರಿಕೆಗಳು ಮತ್ತು ತೆಂಗು- ಅಡಿಕೆ ಮುಂತಾದ ಆರ್ಥಿಕ ಬೆಳೆಗಳು - ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರವಾಗಿ ತಿಳಿಸಿದರು. ಈ ಕ್ಷೇತ್ರಗಳಲ್ಲಿ ಬಿಕ್ಕಟ್ಟಿನಿಂದ ಸಾವಿರಾರು ಕಾರ್ಮಿಕರು, ರೈತರು ಕಂಗಾಲಾಗಿದ್ದಾರೆ. ಈ ಸಮಸ್ಯೆಗಳ ಪರಿಹಾರಕ್ಕೆ ಸಿಪಿಐ(ಎಂ) 18ನೇ ರಾಜ್ಯ ಸಮ್ಮೇಳನ ರೂಪಿಸಿದ ಪ್ರಸ್ತಾವಗಳನ್ನು ವಿವರಿಸಿದರು.

ಕೋಮುವಾದಿ ಹುನ್ನಾರಕ್ಕೆ ಸವಾಲು

ಕರಾವಳಿ ಜಿಲ್ಲೆಗಳನ್ನು ತೀವ್ರವಾಗಿ ಕಾಡುತ್ತಿರುವ ಕೋಮುವಾದಿ ಅಪಾಯದ ಬಗ್ಗೆ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಮತ್ತು ಕೆ.ನೀಲಾರವರು ದೀರ್ಘವಾಗಿ ಮಾತನಾಡಿದರು. ಇತ್ತೀಚೆಗೆ ವಿವಾದಾಸ್ಪದವಾಗಿರುವ ಕನಕ ಗೋಪುರದ ಧ್ವಂಸದ ಸಂದರ್ಭದಲ್ಲಿ, ಉಡುಪಿಯ ಮಠಗಳಲ್ಲಿ ತಾಂಡವವಾಡುತ್ತಿರುವ ಜಾತೀಯತೆ, ಕನಕನ ಕಿಂಡಿಯ ಐತಿಹ್ಯ, ಅವನ್ನು ಎರಡೂ ವಿರುದ್ಧ ರೀತಿಯಲ್ಲಿ ಬಳಸುತ್ತಿರುವ ಪುರೋಹಿತಶಾಹಿ, ಕೋಮುವಾದದ ಪ್ರಮುಖ ವಕ್ತಾರರಾಗಿರುವ ಪೇಜಾವರ ಮಠಾಧೀಶರನ್ನು ಇಬ್ಬರೂ ಬಯಲಿಗೆಳೆದರು. ಕನಕ ಬಸವ ಆದಿ ವಚನ - ಕೀರ್ತನಕಾರರು, ಸೂಫಿ ಸಂತರು ನಮ್ಮ ರಾಜ್ಯದಲ್ಲಿ ನೀಡಿದ ಕೋಮು ಸೌಹಾರ್ದತೆ, ದರ್ಗಾ ಮಂದಿರಗಳು ಅಕ್ಕ- ಪಕ್ಕದಲ್ಲೇ ಇರುವ ಶ್ರೀಮಂತ ಪರಂಪರೆಯ ಮೇಲೆ ಸಂಘ ಪರಿವಾರ ಬೆಂಕಿ ಹಚ್ಚಿ ದಾಳಿ ಮಾಡುತ್ತಿರುವುದನ್ನು ಖಂಡಿಸಿದರು. ಜನರ ಸಮಸ್ಯೆಗಳಿಂದ ಗಮನ ಬೇರೆಡೆಗೆ ಸೆಳೆಯುವ ಈ ಹುನ್ನಾರಗಳನ್ನು ಸಫಲವಾಗಲು ಬಿಡುವುದಿಲ್ಲ. ಜನರ ಸಮಸ್ಯೆಗಳಿಗೆ ಹೋರಾಡುವ ಮೂಲಕ ಸಂಘಪರಿವಾರದ ಸವಾಲವನ್ನು ಸಿಪಿಐ(ಎಂ) ರಾಜಕೀಯವಾಗಿ ಹಿಮ್ಮೆಟ್ಟಿಸುತ್ತದೆ ಎಂದು ಧೃಢವಾಗಿ ಹೇಳಿದರು.

ವರದಿ ಶರತ್

'ಜನಾಂದೋಲನವಿಲ್ಲದೇ ಅದು ಜಾರಿಯಾಗದು'



ಮಂಡಿಯ ನೋವು ಎದೆಗೆ ಬರಲಿ....!


ವಾಜಪೇಯಿಜೀ,
ಆಪಕೀ ಘುಟನೇ ಕಾ ಜೋ ದರ್ದ್ ಹೈ!
ಥೋಡಾ ಸಾ ದಿಲ್ ಮೇ ಲಾಯಾ ಕರೋ
ತಬ್ ಹಮಾರಾ ದಿಲ್ ಕಾ ದರ್ದ್ ಸಮಝ್
ಸಕೋಗೇ!

(ವಾಜಪೇಯಿಜಿ,
ನಿಮ್ಮ ಮಂಡಿಗಳಲ್ಲಿರುವ ನೋವನ್ನು
ಸ್ವಲ್ಪವಾದರೂ ಎದೆಗೆ ತಂದುಕೊಳ್ಳಿ
ಆಗಲಾದರೂ ನಮ್ಮೆದೆಯ ನೋವು ನಿಮಗೆ
ಅರ್ಥವಾದೀತು)

-ಗುಲ್ಬರ್ಗದಲ್ಲಿ ನಡೆದ ಉರ್ದು ಕವಿ ಸಮ್ಮೇಳನದ ಕಿರುಗವನ್ನು ಬಹಿರಂಗ ಸಭೆಯಲ್ಲಿ ನೀಲಾ ನೆನಪಿಸಿಕೊಂಡದ್ದು

ಸಿಪಿಐ(ಎಂ) 18ನೇ ಕರ್ನಾಟಕ ರಾಜ್ಯ ಸಮ್ಮೇಳನದ ಹೆಗ್ಗುರುತುಗಳು

'ಎಲ್ಲಿದ್ದರೋ ಅವರು ಹೇಗಿದ್ದರೋ....'



'ಎಲ್ಲಿದ್ದರೋ ಅವರು ಹೇಗಿದ್ದರೋ......' ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಾಗಿರುವಾಗ ಮತ್ತು ನಂತರದಲ್ಲಿ ವಿಭಜಿತ ಜಿಲ್ಲೆಯಾದ ಮೇಲೆ, ಉಡುಪಿಯಲ್ಲಿ ಪ್ರಥಮ ಬಾರಿಗೆ ನಡೆದ ಸಿಪಿಐ(ಎಂ) ರಾಜ್ಯ ಸಮ್ಮೇಳನ.

●●●

ಉಡುಪಿ, ಕೋಮುವಾದಿಗಳ ಭದ್ರಕೋಟೆ. ವಿಶ್ವ ಹಿಂದೂ ಪರಿಷತ್‌ನ ರಾಷ್ಟ್ರೀಯ ಮುಖಂಡರಾದ ಪೇಜಾವರ ತೀರ್ಥರ ಕಾರ್ಯಕ್ಷೇತ್ರ. ಒಟ್ಟಿನಲ್ಲಿ ರಾಜ್ಯದಲ್ಲಿ ಪ್ರತಿಗಾಮಿಗಳಿಗೆ ಉಡುಪಿ ಕೇಂದ್ರ. ಇಲ್ಲಿನ ಮುಖ್ಯ ರಸ್ತೆಯಲ್ಲಿ 400ಕ್ಕೂ ಮಿಕ್ಕಿ ಕೆಂಪು ಷರ್ಟ್, ಖಾಕಿ ಪ್ಯಾಂಟ್ ಧರಿಸಿದ ಕಮ್ಯೂನಿಸ್ಟ್ ಪಕ್ಷದ ಸ್ವಯಂ ಸೇವಕರ ಮಾರ್ಚ್‌ಫಾಸ್ಟ್, ಕೇಸರಿಯಿಂದ ಬೇಸತ್ತಿದ್ದ ಜನಕ್ಕೆ ಕೆಂಪಿನ ತಂಪೆರೆಯುವಂತಿತ್ತು. ಕೋಮುವಾದಿಗಳ ಎದೆಯ ಮೇಲೆಯೇ ಹೆಜ್ಜೆ ಹಾಕಿದಂತಿತ್ತು. ಕೆಂಬಾವುಟಗಳ ಮಹಾಪೂರವೇ ಉಡುಪಿ ಮುಖ್ಯರಸ್ತೆಯಲ್ಲಿ ಹರಿಯುತ್ತಿದ್ದುದು ನೋಡುಗರನ್ನು ನಿಬ್ಬೆರಗಾಗಿಸಿತು. ಈ ಮಧ್ಯೆ ಕೆಲವರ ಕುಹಕದ ನುಡಿ ಹೀಗಿತ್ತು. "ಕೆಂಪು ಸಮವಸ್ತ್ರಧಾರಿಗಳು ಕೇರಳದಿಂದ ಕರೆಸಲ್ಪಟ್ಟವರು. ಅವರು ಇಲ್ಲಿಯವರಲ್ಲ. ಎಲ್ಲರಿಗೂ ಎಷ್ಟು ಹಣ ಕೊಟ್ಟು ಕರೆತಂದಿರಿ" ಇವೆಲ್ಲ ಕಮ್ಯೂನಿಷ್ಟರ ಪ್ರಾಮಾಣಿಕ ಪ್ರಯತ್ನಕ್ಕೆ ಕನ್ನಡಿಯಂತಿತ್ತು. ಇಡೀ ಉಡುಪಿಯೇ ಮೂಕ ವಿಸ್ಮಿತರಾಗಿ ಮೆರವಣಿಗೆಗೆ ಸಾಕ್ಷಿಯಾಯಿತು.

●●●

ಸಂಘಟನಾತ್ಮಕ್ಕವಾಗಿ ಬಲಹೀನವಾಗಿರುವ ಉಡುಪಿಯಲ್ಲಿ ಸಮ್ಮೇಳನ ನಡೆದರೂ ಆ ಕೊರತೆ ಎಲ್ಲಿಯೂ ಕಂಡುಬಂದಂತಿರಲಿಲ್ಲ. ಉಡುಪಿಯ ಬೀದಿಬೀದಿಗಳಲ್ಲಿ ಮೈಲುದ್ದಕ್ಕೂ ಕಟ್ಟಲ್ಪಟ್ಟ ಬಂಟಿಂಗ್ಸ್‌ಗಳು ನಗರವನ್ನೆಲ್ಲ ಶೃಂಗರಿಸಿಬಿಟ್ಟವು. ಎಲ್‌ಐಸಿ ಯೂನಿಯನ್ ಸಂಗಾತಿಗಳು ವಿಶೇಷ ಆಸಕ್ತಿಯಿಂದ ನಗರ ಶೃಂಗಾರ ಕಾರ್ಯ ಪೂರೈಸಿದ್ದರು. ಹಗಲಲ್ಲಿ ಕಛೇರಿಗಳಲ್ಲಿ ಕಾಣಿಸಿಕೊಳ್ಳುವ ಸಂಗಾತಿಗಳು ರಾತ್ರಿ ಹೊತ್ತು ಶಿಸ್ತಿನ ಸಿಪಾಯಿಗಳಾಗಿ ಅನೇಕ ಮರ, ಟೆಲಿಫೋನ್ ಕಂಬ, ವಿದ್ಯುತ್ ಕಂಬಗಳನ್ನೇರಿ ಬಂಟಿಂಗ್ಸ್ ಕಟ್ಟಿದ್ದು ಪಕ್ಷದ ಹಿರಿಮೆ. ಅಷ್ಟೇ ಅಲ್ಲದೆ ಪೇಟೆ ಒಳಗೂ ಹೊರಗೂ ಸುಮಾರು 500 ಕ್ಕೂ ಮಿಕ್ಕಿ ಪೋಸ್ಟರ್ಸ್ ಕೂಡ ಎಲ್‌ಐಸಿ ಸಂಗಾತಿಗಳು ಅಂಟಿಸಿರುತ್ತಾರೆ.

●●●

ಸಮ್ಮೇಳನದ ಯಶಸ್ವಿಗೆ ಅಪಾರ ಕೊಡುಗೆ ಇತ್ತ ಹಂಚು ಕಾರ್ಮಿಕರು ಇತಿಹಾಸ ಬರೆದರು. 2004 ರ ಇಸವಿ ಒಂದರಲ್ಲೇ ಚುನಾವಣಾ ನಿಧಿ ತಲಾ -50 ರೂ., ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಕಟ್ಟಡಕ್ಕಾಗಿ (ಅಂದಾಜು 135 [illegible] ಕಟ್ಟಡ) ತಲಾ 250 ರೂ., ಸಮ್ಮೇ[illegible]ದ ನಿಧಿಗಾಗಿ ತಲಾ 50 ರೂ. ಇಷ್ಟಲ್ಲದೆ ಸ್ವಂತ ಯೂನಿಫಾರ್ಮ್‌ಗಾಗಿ ಸ್ವಂತ ಖರ್ಚು.

ರ್‍ಯಾಲಿಗಾಗಿ ಕುಂದಾಪುರದಿಂದ ಉಡುಪಿಗೆ 15 ಕ್ಕೂ ಮಿಕ್ಕಿ ಬಸ್‌ಗಳನ್ನು ಕಾದಿರಿಸಿ ಸ್ವಂತ ಖರ್ಚಿನಿಂದ ರ್‍ಯಾಲಿಯಲ್ಲಿ ಭಾಗವಹಿಸಿ ಪಕ್ಷಕ್ಕಾಗಿ ಯಾವುದೇ ತ್ಯಾಗಕ್ಕೂ ಸಿದ್ದ ಎಂಬ ಮಾತನ್ನು ಶ್ರುತಪಡಿಸಿದರು. ಇಷ್ಟಲ್ಲದೆ ಉಡುಪಿಯಲ್ಲಿ ಪ್ರಚಾರ ಕಾರ್ಯಕ್ಕೆ ಸುಮಾರು 8 ದಿನ ಪ್ರತಿರಾತ್ರಿ ಕಾರ್ಯಕರ್ತರ ತಂಡ, ಸಮ್ಮೇಳನದ ಸಭಾಂಗಣದಲ್ಲಿ ಸ್ವಯಂಸೇವಕರ ತಂಡದಲ್ಲೂ ಹಂಚು ಕಾರ್ಮಿಕರದ್ದೇ ಮೇಲುಗೈ.

●●●

ಉಡುಪಿ ಜಿಲ್ಲೆಯಲ್ಲಿ ಊಟ ಬಡಿಸುವ ವಿಧಾನ ವಿಭಿನ್ನವಾದದ್ದು. ಈ ವಿಧಾನ ರಾಜ್ಯದ ಇತರ ಜಿಲ್ಲೆಗಳ ಸಂಗಾತಿಗಳಿಗೆ ಸರಿಹೊಂದದಾದಾಗ ಮುಖಂಡರನ್ನು ಸೇರಿದಂತೆ ಹಲವಾರು ಸಂಗಾತಿಗಳು ಸಿಟ್ಟಾಗಿದ್ದು ಈಗ ಮನರಂಜನೆ ಕೊಡುವ ಇತಿಹಾಸವಾಗಿದೆ.

●●●

ಸಮ್ಮೇಳನದ ಅವಧಿಯಲ್ಲಿ ಪ್ರದರ್ಶನಗೊಂಡ ಯಕ್ಷಗಾನ 'ಸೂರ್ಯ ಶಿಕಾರಿ' ಪ್ರತಿನಿಧಿಗಳನ್ನು ಗಾಢವಾಗಿ ಪ್ರಭಾವಿಸಿತು. ಕರಾವಳಿ ಜಿಲ್ಲೆಯ ಪ್ರಬಲ ಕಲಾಪ್ರಕಾರ ಯಕ್ಷಗಾನ. ಆದರೆ ಕರಾವಳಿ ಜಿಲ್ಲೆಯಲ್ಲಿ ಪ್ರತಿಗಾಮಿಗಳ ಬಲ ಹೆಚ್ಚಿದಂತೆ ಯಕ್ಷಗಾನವೂ ಶಕ್ತಿಗಳ ತುತ್ತೂರಿಯಾದದ್ದು ವಿಶೇಷವೇನಲ್ಲ. ಆದರೆ ಸಿಪಿಐ(ಎಂ) ಸಮ್ಮೇಳನದ ಸಂದರ್ಭದಲ್ಲಿ ರವಿರಾಜ ಹೊಳ್ಳ ಸಾಲಿಗ್ರಾಮ ಇವರ ಹವ್ಯಾಸಿ ಕಲಾವಿದರ ಬಳಗ, ಬಂಗಾಳಿ ಮೂಲದ ಉತ್ಪಲದತ್ತರ ನಾಟಕ 'ಸೂರ್ಯಶಿಕಾರಿ' (ಕನ್ನಡಕ್ಕೆ ಎಂ.ಪಿ.ಪ್ರಕಾಶ್) ಯನ್ನು ಯಕ್ಷಗಾನಕ್ಕೆ ರೂಪಾಂತರಗೊಳಿಸಿ ಸಮ್ಮೇಳನಕ್ಕಾಗಿಯೇ ತಯಾರಿಸಿ ಪ್ರದರ್ಶಿಸಿದ್ದು ಮೆಚ್ಚುಗೆ ಗಳಿಸಿತು. ಮೂಲತಃ ಬೌದ್ಧ ಸನ್ಯಾಸಿ ಕಲ್ಲಣ ಪ್ರತಿಪಾದಿಸಿದ ಭೂಮಿ ಗುಂಡಗಿದೆ, ಚಪ್ಪಟೆಯಲ್ಲ, ಹಾಗೂ ಗುಲಾಮರೂ ಮನುಷ್ಯರು, ಗುಲಾಮಗಿರಿ ತೊಲಗಬೇಕು ಎಂಬ ವಿಚಾರಧಾರೆ ಒಳಗೊಂಡ ನಾಟಕದ ಆಶಯ ಯಕ್ಷಗಾನದಲ್ಲಿ ಶಕ್ತಿಶಾಲಿಯಾಗಿ ಅಭಿವ್ಯಕ್ತಿಗೊಂಡಿತು. ಈ ಕಲಾಪ್ರಕಾರದ ಬಗ್ಗೆ ಅಪರಿಚಿತರಾಗಿದ್ದ ಪ್ರೇಕ್ಷಕರನ್ನು 2 ಗಂಟೆಗಳ ಕಾಲ ಸೂಜಿಗಲ್ಲಿನಂತೆ ಹಿಡಿದಿಟ್ಟಿತ್ತು.

ಸಂಘಟನಾತ್ಮಕವಾಗಿ ಉಡುಪಿಯಲ್ಲಿ ಅಷ್ಟೇನು ಕಾರ್ಯಕರ್ತರಿಲ್ಲದಿದ್ದರೂ ಇರುವಷ್ಟೇ ಕಾರ್ಯಕರ್ತರು ಹಗಲಿಡೀ ಪ್ರದೇಶವಾರು ನಿಧಿಸಂಗ್ರಹಕ್ಕೆ ಮನೆ-ಮನೆಗೆ ತಿರುಗುವುದು, ರಾತ್ರಿಯಾಗುತ್ತಿದ್ದಂತೆ ಪ್ರಚಾರದ ಕೆಲಸಕ್ಕೆ ತೊಡಗಿಸಿಕೊಳ್ಳುತ್ತಿದ್ದರು. ಹಲವು ದಿನಗಳ ಕಾಲ ಕೆಲವು ಗಂಟೆಗಳ ನಿದ್ರೆಗೂ ತತ್ವಾರ ಅನುಭವಿಸಿದ ಸಂಗಾತಿಗಳು ಸಮ್ಮೇಳನವನ್ನು ಯಶಸ್ವಿಗೊಳಿಸಿದರು.

- ಪ್ರಭಾಕರ ನೇರಳಕಟ್ಟೆ
ಚಂದ್ರಶೇಖರ್. ವಿ



ಈವರೆಗೆ ಬಂದ ಸುನಾಮಿ ಸಂತ್ರಸ್ತ ನಿಧಿ

ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ	1,11,89100
ಬಳ್ಳಾರಿ ಜಿಲ್ಲಾ ಸಮ್ಮೇಳನದಲ್ಲಿ	680.00
ರಾಜ್ಯಸಮಿತಿ ಸಭೆಯಲ್ಲಿ	2,290.00
ಕಾಂ.ಎಸ್.ಎನ್.ಪಾಲ್	100.00
ಬಿಜಾಪುರ ಜಿಲ್ಲಾ ಸಮ್ಮೇಳನದಲ್ಲಿ	381.00
ಕೋಲಾರ ಜಿಲ್ಲಾ ಸಮಿತಿ	17976.00
ಗುಲ್ಬರ್ಗಾ ಜಿಲ್ಲಾ ಸಮಿತಿ	1375.00
ಗುಲ್ಬರ್ಗಾ ಜಿಲ್ಲೆ ಕಾಂ.ಮೇಘರಾಜ್ ಮೂಲಕ	1031.00
ಗುಲ್ಬರ್ಗಾ ಜಿಲ್ಲೆ ಕಾಂ. ವಿರೂಪಾಕ್ಷಪ್ಪ ಮೂಲಕ	400.00
ದಕ್ಷಿಣ ಕನ್ನಡ ಜಿಲ್ಲಾ ಸಮ್ಮೇಳನದಲ್ಲಿ ಸಂಗ್ರಹ	2548.00
ಮೈಸೂರು ಜಿಲ್ಲಾ ಸಂ.ಸಮಿತಿ	2450.00
	ರೂ. 141122.00

ನಿರ್ಣಯಗಳು

ಸಾರ್ವಜನಿಕ ವಲಯದ ಉದ್ದಿಮೆಗಳ ಮೇಲೆ ಮುಂದುವರೆಯುತ್ತಿರುವ ದಾಳಿ ವಿರೋಧಿಸಿ

ಹಿಂದಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಅನುಸರಿಸಿದ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳನ್ನೇ ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಸರಕಾರ ಅನುಸರಿಸುತ್ತಿರುವ ಪರಿಣಾಮದಿಂದಾಗಿ ಸಾರ್ವಜನಿಕ ಉದ್ದಿಮೆಗಳು ಇನ್ನೂ ಸಹ ಗಂಡಾಂತರದ ಪರಿಸ್ಥಿತಿಯಿಂದ ಪಾರಾಗಿಲ್ಲ. ಯು.ಪಿ.ಎ. ಸರಕಾರ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸಲು ತೀವ್ರ ಆಸಕ್ತಿಯನ್ನು ತೋರಿಸುತ್ತಿದೆ.

ನಾಗರಿಕ ವಿಮಾನಯಾನ, ಟೆಲಿಕಾಂ, ವಿಮಾ, ಬ್ಯಾಂಕ್ ಮುಂತಾದ ಕ್ಷೇತ್ರಗಳಲ್ಲಿ ಎಫ್.ಡಿ.ಐ. ಯನ್ನು ಗರಿಷ್ಠಮಟ್ಟಕ್ಕೇರಿಸಲು ಸರಕಾರ ಹಾತೊರೆಯುತ್ತಿದೆ. ಲಾಭದಯಕವಾಗಿ ನಡೆಸಲಾಗುತ್ತಿರುವ ಸಾರ್ವಜನಿಕ ಉದ್ದಿಮೆಗಳಲ್ಲಿರುವ ತನ್ನ ಬಂಡವಾಳವನ್ನು ಹಿಂತೆಗೆಯಲು ಸರಕಾರ ಹುನ್ನಾರ ನಡೆಸುತ್ತಿದೆ. ಟೆಲಿಕಾಂ ವಲಯದಲ್ಲಂತೂ ಸರಕಾರದ ನೀತಿ ಅತ್ಯಂತ ತಾರತಮ್ಯತೆಯಿಂದ ಕೂಡಿದೆ.

ಹೆಚ್.ಎ.ಎಲ್, ಬಿಇಎಲ್, ಬಿಇಎಂಎಲ್, ಐಟಿಐ, ಹೆಚ್‌ಎಂಟಿ, ಬಿಹೆಚ್‌ಇಎಲ್, ಮುಂತಾದ ಕೇಂದ್ರ ಸಾವರಜನಿಕ ಉದ್ದಿಮೆಗಳನ್ನು ಬೆಂಗಳೂರು ಹೊಂದಿದ್ದು, ಕರ್ನಾಟಕವು ದೇಶದ 4ನೇ ಕೈಗಾರಿಕಾ ರಾಜ್ಯವಾಗಿದೆ. ಈ ಬೃಹತ್ ಸಂಸ್ಥೆಗಳ ನೆರಳಿನಲ್ಲಿಯೇ ಸಾವಿರಾರು ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಬೆಳೆದು ಮಿಲಿಯಾಂತರ ಜನರಿಗೆ ಜೀವನೋಪಾಯ ಒದಗಿಸಿವೆ. ಇದರಿಂದಾಗಿ ರಾಜ್ಯ ಸಾರ್ವಜನಿಕ ವಲಯದ ಉದ್ದಿಮೆಗಳಾದ ಎನ್.ಜಿ.ಇ.ಎಫ್., ಕರ್ನಾಟಕ ಟೆಲಿಕಾಂ, ಮೈಸೂರ್ ಲ್ಯಾಂಪ್ಸ್, ಮೈಸೂರ್ ಸೋಪ್ಸ್ ಅಂಡ್ ಡಿಟೆರ್‌ಜೆಂಟ್ಸ್, ವಿಕ್ರಾಂತ್ ಟೈಯರ್ಸ್ ಮುಂತಾದವು ಉದಯವಾದವು.

ಈಗಾಗಲೇ ಹೆಚ್.ಎಂ.ಟಿ. ಮತ್ತು ಐಟಿಐ ತೀವ್ರ ಬಿಕ್ಕಟ್ಟಿನಲ್ಲಿವೆ. ಹೆಚ್‌ಎಎಲ್, ಬಿಇಎಲ್, ಬಿಇಎಂಎಲ್, ಬಿಹೆಚ್‌ಇಎಲ್, ಲಾಭದಾಯಕವಾಗಿ ನಡೆಯುತ್ತಿದ್ದರೂ ಈ ಉದ್ದಿಮೆಗಳಲ್ಲಿ ಖಾಯಂ ಕಾರ್ಮಿಕರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಾ ಬಂದಿದೆ. ಬದಲಿಗೆ ಕಾಂಟ್ರ್ಯಾಕ್ಟ್ ಕಾಮಿರಕರು ಮತ್ತು ಅಲ್ಪಕಾಲಿಕ ಸೇವೆಯ ಕಾರ್ಮಿಕರು ಹೆಚ್ಚಾಗುತ್ತಿದ್ದಾರೆ.

ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳನ್ನು ಖಾಸಗೀಕರಣಗೊಳಿಸುವ ನಿರ್ಧಾರವನ್ನು ಕೇಂದ್ರ ಸರಕಾರ ಕೈಬಿಡಬೇಕು ಹಾಗೂ ಈ ಉದ್ದಿಮೆಗಳಲ್ಲಿ ಹೊಸ ಕಾರ್ಮಿಕರಿಗೆ ಉದ್ಯೋಗಾವಕಾಶ ಒದಗಿಸಬೇಕೆಂದು ಸಿಪಿಐ(ಎಂ)ನ 18ನೇ ಕರ್ನಾಟಕ ರಾಜ್ಯ ಸಮ್ಮೇಳನ ಒತ್ತಾಯಿಸುತ್ತದೆ.

ನಿರ್ಣಯಗಳು

ಕೋಮುವಾದದ ಎಲ್ಲಾ ಸ್ವರೂಪಗಳೆದುರು ದೃಢ ಹೋರಾಟಕ್ಕೆ ನಿರ್ಧಾರ

ದೇಶದಲ್ಲಿ ಹಾಗೂ ಕರ್ನಾಟಕದಲ್ಲಿ ಕೋಮುಸೌಹಾರ್ದತೆ, ಶಾಂತಿ, ಧರ್ಮನಿರಪೇಕ್ಷತೆ, ಪ್ರಜಾಪ್ರಭುತ್ವದ ಮೌಲ್ಯಗಳ ಮೇಲೆ ಧಾಳಿ ನಡೆಸುತ್ತಾ, ಕೋಮುವಿಭಜನೆಯ ದ್ವೇಷ ಹುಟ್ಟಿಸುತ್ತಾ ಗಂಡಾಂತರಕಾರಿ ಬೆದರಿಕೆಯನ್ನು ಒಡ್ಡುತ್ತಿರುವ ಕೋಮುವಾದಿ ಶಕ್ತಿಗಳ ಅಪಾಯವನ್ನು ಉಡುಪಿಯಲ್ಲಿ ಸೇರಿರುವ ಸಿಪಿಐ(ಎಂ)ನ 18ನೇ ಕರ್ನಾಟಕ ರಾಜ್ಯ ಸಮ್ಮೇಳನವು ಗಂಭೀರವಾಗಿ ಪರಿಗಣಿಸುತ್ತದೆ.

ಕೇಂದ್ರದಲ್ಲಿ ಅಧಿಕಾರ ಹಿಡಿದಿದ್ದ ಫ್ಯಾಸಿಸ್ಟ್ ಮಾದರಿ ಅಜೆಂಡಾ ಇರಿಸಿ ಅಧಿಕಾರ ನಡೆಸಿದ ಬಿಜೆಪಿ ಕೂಟವನ್ನು ಈಚೆಗಿನ ಸಾರ್ವತ್ರಿಕ ಚುನಾವಣೆಯಲ್ಲಿ ದೇಶದ ಮಹಾನ್ ಜನತೆ ತಮ್ಮ ಅನುಭವಗಳ ಆಧಾರದಲ್ಲಿ ತಿರಸ್ಕರಿಸಿದರು. ಅಧಿಕಾರ ಕಳೆದುಕೊಂಡ ಕೋಮುವಾದಿ ಬಿಜೆಪಿ ಜನಾದೇಶದಿಂದ ಪಾಠ ಕಲಿಯಲು ತಿರಸ್ಕರಿಸಿತಲ್ಲದೆ ಅತ್ಯಂತ ಹತಾಶೆಯಿಂದ ವರ್ತಿಸಿ, ಪಾರ್ಲಿಮೆಂಟ್ ಕಲಾಪಕ್ಕೆ ಸತತ ಅಡ್ಡಿ ಮಾಡಿ ದೇಶದ ಜನತೆಯ ಅಭಿಪ್ರಾಯಕ್ಕೆ ಪ್ರಜಾಸತ್ತಾತ್ಮಕ ಕಾರ್ಯವಿಧಾನವನ್ನು ಗೌರವಿಸುವುದನ್ನು ಕಡೆಗಣಿಸಿತು.

ಕರ್ನಾಟಕದಲ್ಲಿ ಅಧಿಕಾರ ಹಿಡಿದೇ ಬರುವ ಅದರ ಹವಣಿಕೆಯನ್ನು ರಾಜ್ಯದ ಜನತೆ ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ. ಆದಾಗ್ಯೂ ಅದು ಹೊಂದಿರುವ ಶಾಸಕರ, ಸಂಸದರ ಬಲವನ್ನು ಬಳಸಿ, ಇನ್ನೂ ಹೆಚ್ಚಿನ ರೀತಿಯಲ್ಲಿ ರಾಜ್ಯವನ್ನು ಕೋಮುಗ್ರಸ್ತಗೊಳಿಸಲು ಮುಂದಾಗಿದೆ. ಈ ರಾಜಕೀಯ ಬಲವನ್ನೇ ಬಳಸಿ ಅಧಿಕಾರ ಹಿಡಿಯುವ ಹವಣಿಕೆಯಲ್ಲಿ ತೊಡಗಿದೆ ಎಂದು ಸಮ್ಮೇಳನ ಗುರುತಿಸುತ್ತದೆ.

ಈ ಹುನ್ನಾರಗಳ ಹಿಂದೆ ಮೂಲಭೂತವಾಗಿ ಇರುವುದು ಫ್ಯಾಸಿಸ್ಟ್ ಮನೋಭಾವದ ಆರ್ ಎಸ್ ಎಸ್ ಎಂಬುದು ಮುಖ್ಯ ಅಂಶವಾಗಿದೆಯೆಂದು ಅಭಿಪ್ರಾಯ ಪಡುವ ರಾಜ್ಯ ಸಮ್ಮೇಳನವು ಕಳೆದ ಹಲವಾರು ವರುಷಗಳಲ್ಲಿ ಅತ್ಯಂತ ಯೋಜಿತವಾದ ರೀತಿಯಲ್ಲಿ ಅದು ಕಾರ್ಯಾಚರಣೆಗೆ ತೊಡಗಿರುವುದನ್ನು ಪ್ರಸ್ತಾಪಿಸಬಯಸುತ್ತದೆ. ಈ ಅವಧಿಯಲ್ಲಿ ಕೋಮುವಾದಿ ಸಂಘ ಪರಿವಾರವು ತನ್ನ ಮುನ್ನಡೆಗಾಗಿ ಮೂರು ಮುಳ್ಳಿನ 'ತ್ರಿಶೂಲ' ಕಾರ್ಯಕ್ರಮ ರೂಪಿಸಿ ಅದರ ಜಾರಿಗೆ ತೊಡಗಿದೆ.

ಒಂದೆಡೆ ವಿದ್ಯುತ್, ಬರ, ಸಾಲ, ಬೆಳೆ, ನೀರಾವರಿಯಂತಹ ಆರ್ಥಿಕ ಪ್ರಶ್ನೆಗಳನ್ನೆತ್ತಿ ಚಳುವಳಿ ನಡೆಸುವ ನಾಟಕವಾಡುತ್ತಿದ್ದರೆ, ಇನ್ನೊಂದೆಡೆ ಆಯ್ದ ಪ್ರದೇಶಗಳಲ್ಲಿ ಸ್ಥಳೀಯವಾಗಿ ಕೋಮುಗಲಭೆಗಳನ್ನು ಎಬ್ಬಿಸಿದೆ.

ಈಗ ಕೋಮುವಾದಿ ಶಕ್ತಿಗಳನ್ನು ಅಧಿಕಾರಕ್ಕೆ ಬರದಂತೆ ತಡೆಯಲೆಂದು ಸರ್ಕಾರ ರಚಿಸಿರುವ ಕಾಂಗ್ರೆಸ್-ಜೆಡಿ(ಎಸ್)ನ ಮೈತ್ರಿಕೂಟದ ಸರ್ಕಾರವು ಕೋಮುವಾದಿ ಆಕ್ರಮಣ ತಡೆಯುವಲ್ಲಿ ಹಿಂದಿನ ಸರ್ಕಾರಕ್ಕಿಂತ ಭಿನ್ನವಾದ ರೀತಿಯಲ್ಲಿ ಕಾರ್ಯವೆಸಗುತ್ತಿರುವುದನ್ನು ಸಮ್ಮೇಳನವು ಗಮನಿಸುತ್ತದೆ.

ಇನ್ನು ಮುಂದೆಯೂ ಸರ್ಕಾರವು ದೃಢತೆಯಿಂದ ಕೋಮುವಾದಿ ಸವಾಲನ್ನು ಎದುರಿಸಬೇಕೆಂದು ಈ ಸಮ್ಮೇಳನವು ಆಗ್ರಹಿಸುತ್ತದೆ. ಹಾಗೆಯೇ ಜನದ್ರೋಹಿ ಉದಾರೀಕರಣದ ಆರ್ಥಿಕ ನೀತಿಗಳ ಜಾರಿ ಕೈಬಿಟ್ಟು ಹಾಗೆಯೇ ಭಾದಿತವಾದ ಜನಸಮೂಹಗಳ ಸಮಸ್ಯೆಗಳನ್ನು ಇತ್ಯರ್ಥಗೊಳಿಸಿ ಅವರ ವಿಶ್ವಾಸ ಗಳಿಸುವ ಧರ್ಮನಿರಪೇಕ್ಷತೆಯ ನಿಲುವಿಗೆ ಸೆಳೆಯಲು ಮುಂದಾಗಬೇಕು. ಆ ಮೂಲಕ ಅತೃಪ್ತ ಜನತೆಯನ್ನು ಹಾದಿ ತಪ್ಪಿಸುವ ಕೋಮುವಾದಿಗಳ ಕುತಂತ್ರಗಳನ್ನು ಸೋಲಿಸಬೇಕೆಂದು ಸಮ್ಮೇಳನವು ಆಗ್ರಹಿಸುತ್ತದೆ.

ಇದೇ ಸಂದರ್ಭದಲ್ಲಿ ಕೋಮುವಾದಿಗಳನ್ನು ಎದರಿಸಲು ಕೇವಲ ಆಡಳಿತಾತ್ಮಕವಾಗಿ ಮಾತ್ರ ಕ್ರಮವಹಿಸದೇ ರಾಜಕೀಯವಾಗಿಯೂ ಜನತೆಯನ್ನು ಜಾಗ್ರತಗೊಳಿಸಲು ಮುಂದಾಗಬೇಕೆಂದು ಜಾತ್ಯತೀತ ಪಕ್ಷಗಳನ್ನು ಸಮ್ಮೇಳನವು ಆಗ್ರಹಿಸುತ್ತದೆ. ಇಲ್ಲವಾದಲ್ಲಿ ಅಂತಹ ಪಕ್ಷಗಳು ಕಾರ್ಯಕರ್ತರು, ಬೆಂಬಲಿಗರೂ ಸಹ ಕೋಮುವಾದಿಗಳ ಸೈದ್ಧಾಂತಿಕ-ರಾಜಕೀಯ ಪ್ರಚಾರದ ಧಾಳಿಗೆ ಸುಳ್ಳಿನ ಸೆಳವಿಗೆ ಸೆಳೆಯಲ್ಪಡಬಹುದು ಎಂದು ಎಚ್ಚರಿಸುತ್ತದೆ.

ಬಹುಸಂಖ್ಯಾತ ಕೋಮುವಾದ ದೊಟ್ಟಿಗೆ ಅಲ್ಪಸಂಖ್ಯಾತ ಮೂಲಭೂತವಾದವೂ ಬೆಳೆಯುತ್ತಿರುವುದು ಅಪಾಯಕಾರಿಯಾದುದು. ಬಹುಸಂಖ್ಯಾತ ಕೋಮುವಾದ ಮತ್ತು ಅಲ್ಪಸಂಖ್ಯಾತ ಮೂಲಭೂತವಾದಗಳು ಒಂದು ಇನ್ನೊಂದನ್ನು ಬೆಳೆಸುವಂತಹವ ಗಳಾಗಿವೆ. ಎಲ್ಲಾ ಬಣ್ಣಗಳ ಕೋಮುವಾದವನ್ನು ಸಮ್ಮೇಳನವು ಉಗ್ರವಾಗಿ ವಿರೋಧಿಸುತ್ತದೆ.

ಇಂತಹ ಕೋಮುವಾದಿ ಹುನ್ನಾರಗಳ ವಿರುದ್ಧ ಸಿಪಿಐ(ಎಂ) ಪಕ್ಷವು ನಿರಂತರವಾಗಿ, ಅತ್ಯಂತ ದೃಢತೆಯಿಂದ ಹೋರಾಡುತ್ತಿದ್ದು, ಅದನ್ನು ತೀವ್ರಗೊಳಿಸಲು ಸಮ್ಮೇಳನವು ನಿರ್ಧರಿಸುತ್ತದೆ.

ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳ ಹುನ್ನಾರವನ್ನು, ಅದರ ಕುತಂತ್ರಗಳನ್ನು ಆಳವಾಗಿ, ನಿರ್ದಿಷ್ಟವಾಗಿ ಅಧ್ಯಯನ ನಡೆಸಿ ವಿವಿಧ ಪ್ರದೇಶಗಳಲ್ಲಿಯೂ ಅದರ ಬಲಾಬಲಗಳನ್ನು ಅಂದಾಜಿಸಿ ಎಲ್ಲಾ ಹಂತಗಳಲ್ಲಿಯೂ, ರಂಗಗಳಲ್ಲಿಯೂ ಪ್ರತಿರೋಧ ಒಡ್ಡಲು, ಕೋಮುವಾದದ ವಿರುದ್ಧ ರಾಜಕೀಯ-ಸೈದ್ಧಾಂತಿಕವಾಗಿ, ಪ್ರಾಯೋಗಿಕವಾಗಿ ಹೋರಾಡಲು ವಿಶಾಲವಾದ ಐಕ್ಯ ಆಂದೋಲನವನ್ನು ಕಟ್ಟಲು ಸಿಪಿಐ(ಎಂ)ನ 18ನೇ ರಾಜ್ಯ ಸಮ್ಮೇಳನವು ನಿರ್ಧರಿಸುತ್ತದೆ.

ಎಲ್ಲಾ ಪ್ರಗತಿಪರ, ಧರ್ಮನಿರಪೇಕ್ಷ ಶಕ್ತಿಗಳು, ಜನತೆ ಭಾಗವಹಿಸಬೇಕೆಂದು ಕರೆ ನೀಡುತ್ತದೆ. ಶಿಕ್ಷಣ ರಂಗದಲ್ಲಿ, ವಿಷಬೀಜವನ್ನು ಬಿತ್ತುವ ಪಾಠಗಳನ್ನು ಪಠ್ಯ ಪುಸ್ತಕಗಳಲ್ಲಿ ಸೇರುವಂತೆ ವ್ಯವಸ್ಥಿತ ಪ್ರಯತ್ನ ಮಾಡಿದ ಸಂಘಪರಿವಾರವು, ಸರಕಾರಿ ಕಛೇರಿಗಳಲ್ಲಿ ಪೂಜೆ ಪುನಸ್ಕಾರಗಳನ್ನು ನಡೆಸಲು ಉತ್ತೇಜಿಸುತ್ತಿದೆ. ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ ನೀಡುವ ಹೆಸರಿನಲ್ಲಿ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದಿಯಾಲಯದ ಕಾರ್ಯಕರ್ತರ ಮೂಲಕ ಕೋಮುಭಾವನೆಗಳನ್ನು ಪ್ರಚೋದಿಸುವ ಕ್ಲಾಸುಗಳನ್ನು ನೀಡಲಾಗುತ್ತಿದೆ.

ಇವುಗಳನ್ನು ತೊಡೆದುಹಾಕುವ ದಿಸೆಯಲ್ಲಿ ಹಾಗೂ ಧರ್ಮನಿರಪೇಕ್ಷತೆಯ ತಪ್ಪುಗಳನ್ನು ಕಾಪಾಡುವಲ್ಲಿ ಸರಕಾರ ಕಾರ್ಯಪ್ರವೃತ್ತವಾಗಬೇಕು.

ಸಂಘ ಪರಿವಾರವು ಕೋಮುವಾದದ ವಿರುದ್ಧ ಧ್ವನಿ ಎತ್ತಿದ ಪ್ರಗತಿರ, ಸಂಘಟನೆಗಳ ಕಾರ್ಯಕರ್ತರು, ಬುದ್ಧಿಜೀವಿ ನಾಗರಿಕರ ಮೇಲೆ ಧಾಳಿ ನಡೆಸುತ್ತಿರುವುದನ್ನು ಸಿಪಿಐ(ಎಂ) ಸಮ್ಮೇಳನವು ಉಗ್ರವಾಗಿ ಖಂಡಿಸುತ್ತದೆ. ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಆರ್‌ಎಸ್‌ಎಸ್ ತರಬೇತಿ, ಕವಾಯತುಗಳಿಗೆ ಅವಕಾಶ ಕೊಡಬಾರದೆಂದು ಸಮ್ಮೇಳನ ಆಗ್ರಹಿಸುತ್ತದೆ. ಹಾಗೇ ಕೇಂದ್ರ-ರಾಜ್ಯ ಸರ್ಕಾರಗಳ ವಿವಿಧ ತರಬೇತಿ ಸಂದರ್ಭದಲ್ಲಿ ಆರ್‌ಎಸ್‌ಎಸ್ ಹಾಡು, ವಿಚಾರ ಹೇಳಲು ಅನುವು ಮಾಡಿದ್ದನ್ನು ವಿರೋಧಿಸುತ್ತದೆ.

ರಾಜ್ಯ ಸರಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಹೋರಾಟ ನಡೆಸಲು ಕರೆ

ರಾಜ್ಯ ಸರಕಾರದ ಅಧಿಕಾರ ಬದಲಾಗಿ ಸಮ್ಮಿಶ್ರ ಸರಕಾರ ಅಧಿಕಾರಕ್ಕೆ ಬಂದಿದೆ. ಆದರೆ ಕಾರ್ಮಿಕರ ಕುರಿತ ಸರಕಾರದ ನೀತಿಯಲ್ಲಿ ಬದಲಾವಣೆಯಾಗಿಲ್ಲ. ಕಾರ್ಮಿಕ ಚಳುವಳಿ, ಹೋರಾಟಗಳ ಸಂದರ್ಭದಲ್ಲಿ ಮಾಲಿಕರ ಪರವಾಗಿ, ಪೋಲೀಸರ ಮಧ್ಯ ಪ್ರವೇಶ, ಕಿರುಕುಳ ಯಥೇಚ್ಛ ಮುಂದುವರಿದಿದೆ. ವಿಶ್ವ ಬ್ಯಾಂಕ್ ನಿರ್ದೇಶಿತ ಆರ್ಥಿಕ ನೀತಿಗಳ ಭಾಗವಾಗಿ ಸರಕಾರಿ ಇಲಾಖೆಗಳಲ್ಲಿ ನೌಕರರ ಸಂಖ್ಯೆಯಲ್ಲಿ ಕಡಿತ, ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಖಾಸಗೀಕರಣ, ಎನ್.ಜಿ.ಇ.ಎಫ್., ಮೈಸೂರ್ ಲ್ಯಾಂಪ್ಸ್, ವಿದ್ಯುತ್‌ರಂಗಗಳನ್ನು ಕಂಪನೀಕರಣ ಮಾಡಲಾಗುತ್ತಿದೆ. ಸಾರ್ವಜನಿಕ ಕ್ಷೇತ್ರ ಹಾಗೂ ಸರಕಾರಿ ಇಲಾಖೆಗಳಲ್ಲಿ ನಗರ ಪುರಸಭೆಗಳಲ್ಲಿ ಕಾಂಟ್ರಾಕ್ಟ್, ಕ್ಯಾಜುವಲ್ ಆಧಾರದಲ್ಲಿ ದುಡಿಸಿಕೊಳ್ಳುವುದು ಸಾಮಾನ್ಯವಾಗಿದೆ. ಕಾರ್ಮಿಕ ಕಾಯಿದೆಗಳಾದ ಕನಿಷ್ಟ ವೇತನ, ಭವಿಷ್ಯ ನಿಧಿ, ವೇತನ ಪಾವತಿ, ಹಾಜರಿ ನಿರ್ವಹಣೆ ಮುಂತಾದ ಕನಿಷ್ಟ ದಾಖಲೆಗಳನ್ನು ನಿರ್ವಹಿಸದೆ ಕಾರ್ಮಿಕರನ್ನು ಅತ್ಯಂತ ಕಡಿಮೆ ಕೂಲಿಯಲ್ಲಿ ದುಡಿಸಿಕೊಂಡು ತೀವ್ರ ದಾಳಿ ನಡೆಯುತ್ತಿದೆ. ಕಾರ್ಮಿಕರ ಸಂಘಗಳಿಗೆ ಮಾನ್ಯತೆ ನೀಡದೆ ಆಕ್ರಮಣ ನಡೆಸಲಾಗುತ್ತಿದೆ. ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸಲು ಕಾರ್ಮಿಕರು ಚಳುವಳಿಗೆ ಇಳಿದರೂ ಕಾರ್ಮಿಕ ಮಂತ್ರಿಗಳನ್ನೂ ಒಳಗೊಂಡು ಕಾನೂನುಗಳ ಕನಿಷ್ಟ ಅನುಷ್ಠಾನ ಮಾಡಲು ಧೃಡತೆ ತೋರದೆ ಮಾಲೀಕರ ಪರವಾದ ನಿಲುಮೆಗಳನ್ನೇ ವಹಿಸಲಾಗುತ್ತಿದೆ. ಗ್ರಾಮ ಪಂಚಾಯತ್ ನೌಕರರಿಗೆ ತಿಂಗಳಾನುಗಟ್ಟಳೆ ವೇತನ ನೀಡದೆ ವಿದ್ಯುತ್ ಬಿಲ್ ಪಾವತಿ ಮಾಡಲಾಗಿದೆ ಮತ್ತು ಪಂಚಾಯತಿ ಕೆಲಸಗಳನ್ನು, ಬಿಸಿಯೂಟ ಕೆಲಸಗಳನ್ನು, ಸ್ತ್ರೀಶಕ್ತಿ ಗುಂಪುಗಳಿಗೆ ವಹಿಸುವ, ಗ್ರಾಮಗಳಲ್ಲಿ ವಿದ್ಯುತ್ ಪ್ರತಿನಿಧಿಗಳನ್ನು ಕಮಿಷನ್ ಆಧಾರದಲ್ಲಿ ನೇಮಕ, ಅಂಗನವಾಡಿ ಮತ್ತಿತರ ಇಲಾಖೆಗಳನ್ನು ಗ್ರಾಮ ಪಂಚಾಯತುಗಳಿಗೆ ವಹಿಸಿ ಸರಕಾರ ತನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ವಿಶ್ವ ಬ್ಯಾಂಕ್ ಸೂತ್ರಗಳನ್ನು ಚಾಚೂ ತಪ್ಪದೆ ಜ್ಯಾರಿಗೊಳಿಸಲು ಆತುರದಲ್ಲಿದೆ. ಹಿಂದಿನ ಸರಕಾರ ನೇಮಿಸಿದ ಆಡಳಿತ ಸುಧಾರಣಾ ಆಯೋಗ ಮತ್ತು ವಿಕೇಂದ್ರೀಕರಣ, ಸಕ್ಕರೆ ಕಾರ್ಮಿಕರ ವೇತನ ಪರಿಷ್ಕರಣೆ, ಮುಚ್ಚಿದ ಹೆಂಚು ಮತ್ತಿತರ ಕಾರ್ಖಾನೆಗಳನ್ನು ಪುನರಾರಂಭಿಸಲು ಗಮನ ನೀಡುತ್ತಿಲ್ಲ. ಬೀಡಿ ಕಾರ್ಮಿಕರಿಗೆ ಕನಿಷ್ಟ ವೇತನ ವಾರಕ್ಕೆ ಆರು ದಿನ ಕೆಲಸ ದೊರಕಬೇಕು. ಕಾರ್ಯಪಡೆ ವರದಿಗಳಲ್ಲಿರುವ ಕಾರ್ಮಿಕ ವಿರೋಧಿ ಅಂಶಗಳನ್ನು ಜಾರಿಗೊಳಿಸುತ್ತಿದೆ. ಕಾರ್ಮಿಕ ಇಲಾಖೆ ಬಹುತೇಕ ಮಾಲೀಕರ ಸೇವಾ ಕೇಂದ್ರದಂತೆ ಮಾತ್ರ ಕಾರ್ಯನಿರ್ವಹಿಸುತ್ತಿದೆ.

ಅಷ್ಟೇ ಅಲ್ಲ ಕಾರ್ಮಿಕರ ಹೋರಾಟಗಳಲ್ಲಿ ಪೋಲೀಸರು ನಿರಂತರವಾಗಿ ಮಾಲಿಕರ ಪರವಾಗಿ ಅನಗತ್ಯವಾಗಿ ಮಧ್ಯಪ್ರವೇಶ ನಡೆಸುತ್ತಿದ್ದಾರೆ. ಮೈಸೂರು ಜಿಲ್ಲೆ ನಂಜನಗೂಡಿನಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಒಳಗೊಂಡು ಸಿಐಟಿಯು ಜಿಲ್ಲಾ ಮುಖಂಡರ ಮೇಲೆ ಪೋಲೀಸರ ದಾಳಿ ಹಾಗೂ ಬೆಂಗಳೂರಲ್ಲಿ ಮೆಟಲ್ ಕ್ಲೋಶರ್ ಕಾರ್ಮಿಕರ ಹೋರಾಟದ ಮೇಲೆ ಹಾಗೂ ಇತರ ಕಾರ್ಮಿಕ ಹೋರಾಟದ ಮೇಲೆ ದಾಳಿಗಳು ಈ ಕಾಲಾವಧಿಯಲ್ಲಿ ನಡೆದಿದೆ. ಬಿಪಿಎಲ್ ಕಾರ್ಮಿಕರ ಚಳುವಳಿಯ ವಿರುದ್ಧ ಮಾಲೀಕರು ಪೋಲೀಸರೊಂದಿಗೆ ಶಾಮೀಲಾಗಿ ಕಾರ್ಮಿಕರನ್ನು ಜೀವಾವಧಿ ಕಠಿಣ ಕಾರಾಗೃಹ ಶಿಕ್ಷೆಗೆ ಒಳಗಾಗುವಂತೆ ಮಾಡಿರುವುದಲ್ಲದೆ ಮೇಲ್ಮನವಿಯ ಮೂಲಕ ಮತ್ತಷ್ಟು ಕಠಿಣ ಕ್ರಮಕ್ಕೆ ಪ್ರಯತ್ನಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರಕಾರದ ಕಾರ್ಮಿಕ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಹಾಗೂ ಪೋಲೀಸರು ಮಾಲಿಕರ ಪರವಾಗಿ ಕಾರ್ಮಿಕ ಚಳುವಳಿಗಳಲ್ಲಿ ಮಧ್ಯೆ ಪ್ರವೇಶಿಸುವ ನೀತಿಯನ್ನು ಬದಲಾಯಿಸಲು ಉಡುಪಿಯಲ್ಲಿ ದಿನಾಂಕ 21ರಿಂದ 24 ಜನವರಿ ವರೆಗೆ ಸೇರಿರುವ ಸಿಪಿಐ(ಎಂ) 18ನೇ ರಾಜ್ಯ ಸಮ್ಮೇಳನವು ಹೋರಾಟವನ್ನು ತೀವ್ರಗೊಳಿಸಲು ಕರೆ ನೀಡುತ್ತದೆ.

ಅಖಿಲ ಭಾರತ ಮಹಾಧಿವೇಶನಕ್ಕೆ ಪ್ರತಿನಿಧಿಗಳು

1. ಜಿ.ಎನ್.ನಾಗರಾಜ್
2. ಬಿ.ಮಾಧವ
3. ಎಸ್.ವೈ.ಗುರುಶಾಂತ್
4. ಪ್ರಸನ್ನ ಕುಮಾರ್
5. ಮಾರುತಿ ಮಾನ್ಪಡೆ
6. ಜಿ.ವಿ.ಶ್ರೀರಾಮರೆಡ್ಡಿ
7. ಕೆ.ಎನ್.ಉಮೇಶ್
8. ಮೀನಾಕ್ಷಿ ಸುಂದರಂ
9. ಎಸ್.ವರಲಕ್ಷ್ಮಿ

ವೀಕ್ಷಕರು

1. ವೆಂಕಟಸ್ವಾಮಿರೆಡ್ಡಿ
2. ಬಾಲಕೃಷ್ಣಶೆಟ್ಟಿ (ಕಛೇರಿ)

ಕೂಲಿಕಾರನ ಕೊಲೆ ಖಂಡಿಸಿ - ಭೂಮಾಲಕ ಬಂಧಿಸಿ, ಭೂಮಾಲಕ ಏಜೆಂಟರಾಗಿ ವರ್ತಿಸಿದ ಪೊಲೀಸ್ ಇಲಾಖೆಯ ಕಾರ್ಯಕ್ಕೆ ಖಂಡನೆ

ಗಂಗಾವತಿ ತಾಲ್ಲೂಕು ಗೂನಾಳ ಗ್ರಾಮದ ಕೃಷಿ ಕೂಲಿಕಾರರ ಸಂಘದ ಕಾರ್ಯಕರ್ತ, ದಲಿತ ಬಸವರಾಜನ ಕೊಲೆ ಖಂಡಿಸಿ ಮತ್ತು ಕೊಲೆ ಮಾಡಿದ ಭೂಮಾಲಿಕರನ್ನು ಬಂಧಿಸಬೇಕು, ಭೂಮಾಲಿಕರ ಏಜೆಂಟರಾಗಿ ಕೆಲಸ ಮಾಡಿದ ಪೊಲೀಸ್ ಇಲಾಖೆಯ ಕಾರ್ಯವನ್ನು ಖಂಡಿಸುವುದು.

ಗಂಗಾವತಿ ತಾಲ್ಲೂಕು ಗೊನಾಳ ಗ್ರಾಮದ ಕೃಷಿ ಕೂಲಿಕಾರರ ಸಂಘದ ಕಾರ್ಯಕರ್ತ ಬಸವರಾಜ ಇವರನ್ನು ಭೂಮಾಲಿಕರು ದಿನಾಂಕ 20.12.2004 ರಂದು ಕೊಲೆ ಮಾಡಿದ್ದು, ಭೂಮಾಲಿಕರ ಏಜೆಂಟರಂತೆ ಪೊಲೀಸ್ ಇಲಾಖೆ ವರ್ತಿಸಿ, ಫಿರ್ಯಾದಿ ನೀಡಿದರೂ ಕೊಲೆ ಮೊಕದ್ದಮೆ ದಾಖಲಿಸಿಕೊಳ್ಳದೆ ಸಹಜ ಸಾವು ಎಂದು ದಾಖಲಿಸಿ ಕೊಲೆ ಮುಚ್ಚಿಹಾಕುವ ಹುನ್ನಾರ ನಡೆಸಿದ್ದು, ಪೊಲೀಸ್ ಇಲಾಖೆ ರಾಜಕಾರಣಿಗಳಂತೆ ವರ್ತನೆ ಮಾಡಿದ್ದು, ಈ ಸಮ್ಮೇಳನ ಖಂಡಿಸುತ್ತದೆ.

ಸರ್ಕಾರ ಈ ಕೂಡಲೇ ಕ್ರಮ ಕೈಗೊಂಡು ಕೊಲೆ ಮೊಕದ್ದಮೆ ದಾಖಲಿಸಿ, ಕೊಲೆ ಮಾಡಿದ ಭೂಮಾಲೀಕರನ್ನು ಬಂಧಿಸಬೇಕು. ಮತ್ತು ಭೂಮಾಲಿಕರ ದಬ್ಬಾಳಿಕೆ ನಿಲ್ಲಿಸಲು ಕ್ರಮ ಕೈಗೊಂಡು, ಕೃಷಿ ಕೂಲಿಕಾರ ಸಂಘದ ಕಾರ್ಯಕರ್ತರಿಗೆ ಸೂಕ್ತ ಪೊಲೀಸ್ ರಕ್ಷಣೆ ಒದಗಿಸಲು, ಭೂಮಾಲೀಕ ಏಜೆಂಟರಂತೆ, ರಾಜಕಾರಣಿಗಳಂತೆ ವರ್ತಿಸುವ ಪೊಲೀಸ್ ಇಲಾಖೆ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಈ ಸಮ್ಮೇಳನ ಒತ್ತಾಯಿಸುತ್ತದೆ.

ಸಿಪಿಐ(ಎಂ) 18ನೇ ಕರ್ನಾಟಕ ರಾಜ್ಯ ಸಮ್ಮೇಳನ



ಯಕ್ಷಗಾನ ರೂಪದಲ್ಲಿ ಮೆರೆದ 'ಸೂರ್ಯಶಿಕಾರಿ'

ಉಡುಪಿಯಲ್ಲಿ ನಡೆದ ಸಿಪಿಐ(ಎಂ) 18ನೇ ರಾಜ್ಯ ಸಮ್ಮೇಳನದ ಕಲಾಪಗಳ ನಡುವೆ, ರಾತ್ರಿಯ ವೇಳೆ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಕ್ರಾಂತಿ ಹಾಡುಗಳು, ನಾಟಕ, ಯಕ್ಷಗಾನ ಇದರಲ್ಲಿ 'ಸೂರ್ಯಶಿಕಾರಿ' ಎಂಬ ನಾಟಕವನ್ನು ಯಕ್ಷಗಾನ ರೂಪದಲ್ಲಿ ಪ್ರದರ್ಶಿಸಿದ್ದು ಅತ್ಯಂತ ಆಕರ್ಷಕ ಸಫಲ ಪ್ರಯೋಗವಾಗಿತ್ತು. ಅತ್ಯಂತ ಪ್ರಸ್ತುತವಾದ ಪ್ರಗತಿಪರ ವಿಷಯ-ತಿರುಳು, ಹೊಸತನವಿದ್ದ ಯಕ್ಷಗಾನ ರೂಪ, ಸಫಲ ಪ್ರಯೋಗ- ಎಲ್ಲವೂ ಮೇಳವಿಸಿ ಮೆರೆಯಿತು. ಉಡುಪಿ ಜಿಲ್ಲೆಯ ಸಾಲಿಗ್ರಾಮದ ಪ್ರಯೋಗಶೀಲ ತಂಡ ಪ್ರಸ್ತುತಪಡಿಸಿದ ಈ ಕಾರ್ಯಕ್ರಮ, 18ನೇ ಸಮ್ಮೇಳನದ ಸದಾಕಾಲ ನೆನಪಿನಲ್ಲಿಡಬಹುದಾದ ಅಂಶಗಳಲ್ಲಿ ಒಂದು. ಇದನ್ನು ಸಾಧ್ಯ ಮಾಡಿದ ಸ್ವಾಗತ ಸಮಿತಿ ಅಭಿನಂದನಾರ್ಹರು.

'ಸೂರ್ಯಶಿಕಾರಿ' ಒಂದು ಬಂಗಾಳಿ ನಾಟಕ. ಬರ್ಟೋಲ್ಟ್ ಬ್ರೆಕ್ಟ್‌ನ ಜರ್ಮನ್ ನಾಟಕ. ಗೆಲಿಲಿಯೋದ ಭಾರತೀಯ ರೂಪಾಂತರ. ಕನ್ನಡದಲ್ಲಿ ಅನುವಾದವಾಗಿ ಹಿಂದೆ ಸಫಲ ಪ್ರದರ್ಶನ ಕಂಡ ನಾಟಕ. ಅದನ್ನು ಯಕ್ಷಗಾನ ರೂಪದಲ್ಲಿ ಪಸ್ತುತಪಡಿಸಿ ಸಾಲಿಗ್ರಾಮದ ತಂಡ ಸೃಜನಶೀಲತೆ, ಎದೆಗಾರಿಕೆ ತೋರಿಸಿದೆ. ಪ್ರಸ್ತುತ ಆಳುವವರು ಶೋಷಕರು ಹೊರಿಸುವ ಅವೈಜ್ಞಾನಿಕ - ತಿಳುವಳಿಕೆ, ಮೂಢನಂಬಿಕೆ ವಿರುದ್ಧ, ವೈಜ್ಞಾನಿಕ ತಿಳುವಳಿಕೆ, ಹೊಸ ಜ್ಞಾನದ ಅವಿರತ ಹೋರಾಟ ಕಥೆ ನಾಟಕದ ತಿರುಳು. 'ಗೆಲಿಲಿಯೋ' ನಾಟಕ ಗೆಲಿಲಿಯೋನ ದೂರದರ್ಶಕ ಭೂಮಿ ಚಪ್ಪಟೆಯಲ್ಲ ಗುಂಡಗಿದೆ, ಭೂಮಿ ಸೂರ್ಯನ ಸುತ್ತ ತಿರುಗುತ್ತದೆ ಎಂಬುದಕ್ಕೆ ನೇರ ಪುರಾವೆ ಒದಗಿಸಿ, ಕ್ಯಾಥೋಲಿಕ್ ಚರ್ಚ್ ಮತ್ತು ಪೋಪರ ಅಧಿಪತ್ಯಕ್ಕೆ ನೇರ ಸವಾಲು ಹಾಕಿತು. ಇದನ್ನೇ ಭಾರತದ ನೆಲಕ್ಕೆ ರೂಪಾಂತರಿಸಿದೆ. 'ಸೂರ್ಯಶಿಕಾರಿ' ಗೆಲಿಲಿಯೋ ಸ್ಥಾನದಲ್ಲಿ ಕಲ್ಹಣ ಮತ್ತು ಆತನ ಶಿಷ್ಯಗಣ ಇದೆ. ಚರ್ಚಿನ ಸ್ಥಾನದಲ್ಲಿ ಸಾಮ್ರಾಟ ಸಮುದ್ರಗುಪ್ತ ಮತ್ತು ಪುರೋಹಿತ ಶಾಹಿ ಇದೆ. ಸಾಮ್ರಾಟನ ಸಾಮಂತ, ಮಾರಾಟವಾಗುವ ಗುಲಾಮ, ಗುಲಾಮನ ಗೆಳತಿ, ರಾಣಿ-ಬರುವ ಇತರ ಪಾತ್ರಗಳು

ಮನುಷ್ಯರನ್ನೇ ಮಾರಾಟ ಮಾಡುವ, ಪ್ರಾಣಿಗಳಿಗಿಂತ ಹೀನಾಯವಾಗಿ ನಡೆಸಿಕೊಳ್ಳುವ ಗುಲಾಮ ವ್ಯವಸ್ಥೆಯ ಚಿತ್ರಣದೊಂದಿಗೆ ಯಕ್ಷಗಾನ ಆರಂಭವಾಗುತ್ತದೆ. ಗುಲಾಮನನ್ನು ಉಳಿಸಲು ಅವನ ಗೆಳತಿ ತನ್ನನ್ನೇ ಸಾಮಂತನಿಗೆ ಅರ್ಪಿಸಿಕೊಳ್ಳುತ್ತಾಳೆ. ಮೊದ-ಮೊದಲು ಅವಳನ್ನು ಸರಕಾಗಿ ಕಂಡರೂ, ಮುಂದೆ ಅವಳಲ್ಲಿ ಅನುರಕ್ತನಾಗುತ್ತಾನೆ. ಆದರೆ ಬಿಡುಗಡೆಯಾದ ಗುಲಾಮ ಮತ್ತು ಆತನ ಗೆಳತಿ ಪುರೋಹಿತಶಾಹಿ ವ್ಯವಸ್ಥೆಯನ್ನೇ ಅಲುಗಾಡಿಸುವ ವಿಚಾರಗಳನ್ನು ಪ್ರಚಾರ ಮಾಡುತ್ತಿರುವ ಕಲ್ಹಣನ ಶಿಷ್ಯರು ಎಂದು ಅರಿತು, ಅವರ ವಿರುದ್ಧ ಸಾಮ್ರಾಟನಿಗೆ ಕಿವಿ ತುಂಬುತ್ತಾನೆ. ಕಲ್ಹಣನ ಶಿಷ್ಯೆಯನ್ನು ಸೆರೆಮನೆಗಟ್ಟುತ್ತಾನೆ. ಕಲ್ಹಣನ ಆಶ್ರಮದ ಮೇಲೆ ಧಾಳಿ ಮಾಡಿ ಎಲ್ಲಾ ಪುಸ್ತಕಗಳ ನಾಶ ಮಾಡಿ, ಕಲ್ಹಣನನ್ನು ಬಂಧಿಸುತ್ತಾನೆ. ಕಲ್ಹಣನ ಶಿಷ್ಯೆಯನ್ನು ಕೊಲ್ಲಿಸಲು ಬೆದರಿಕೆ ಒಡ್ಡಿ, ಆತ ಸಾರ್ವಜನಿಕವಾಗಿ ತನ್ನ ವಿಜ್ಞಾನ ಸುಳ್ಳು, ಪುರೋಹಿತಶಾಹಿ ಹೇಳಿದ್ದು ಸತ್ಯ ಎಂದು ಸಾರಬೇಕು ಎಂದು ಒತ್ತಡ ಹೇರುತ್ತಾನೆ. ಅದಕ್ಕೆ ಆತ ಒಪ್ಪದಿದ್ದಾಗ ಕಲ್ಹಣನ ನಾಲಿಗೆ ಕತ್ತರಿಸುತ್ತಾನೆ. ಸಾರ್ವಜನಿಕವಾಗಿ ಕಲ್ಹಣ 'ಮೌನವ್ರತ' ವಹಿಸಿದ್ದಾನೆ, ತನ್ನ ತಪ್ಪು ಒಪ್ಪಿಕೊಂಡಿದ್ದಾನೆ ಎಂದು ಘೋಷಿಸುತ್ತಾನೆ. ಈ ನಡುವೆ ಗುಲಾಮರು ದಂಗೆ ಏಳುತ್ತಾರೆ.

ನಾಟಕವನ್ನು ಅತ್ಯಂತ ಸಮರ್ಥವಾಗಿ, ಸೃಜನಾತ್ಮಕವಾಗಿ ಯಕ್ಷಗಾನ ರೂಪಕ್ಕೆ ಅಳವಡಿಸಲಾಗಿದೆ. ನಾಟಕದ ತಿರುಳಿಗೂ, ಯಕ್ಷಗಾನದ ಮೂಲಭೂತ ಸ್ವರೂಪ-ಎರಡಕ್ಕೂ ಧಕ್ಕೆ ಆಗದಂತೆ ನೋಡಿಕೊಳ್ಳಲಾಗಿದೆ. ಲವಲವಿಕೆ ತುಂಬಿದ ಅರ್ಥಪೂರ್ವ ಹಾಡುಗಳು, ಯಕ್ಷಗಾನದ ಕುಣಿತ, ಚುರುಕಿನ ಸಂಭಾಷಣೆ, ಉತ್ತಮ ನಟನೆ - ಎಲ್ಲವೂ ಸೇರಿ ಇದು ಒಂದು ಉತ್ತಮ ಪ್ರಯೋಗವಾಗಿತ್ತು. ಸಾಮ್ರಾಟ ಮತ್ತು ಕಲ್ಹಣನ ಪಾತ್ರ ವಿಶೇಷವಾಗಿ ಮಿಂಚಿತು. 'ಭೂಮಿ ದುಂಡಗಿದೆ' ಮುಂತಾದ ಉತ್ತಮ ಹಾಡುಗಳನ್ನು ಯಕ್ಷಗಾನದಲ್ಲಿ ಅಳವಡಿಸಿದ್ದು ಗಮನ ಸೆಳೆಯಿತು.

ಆಧುನಿಕ ವಿಷಯ, ನಾಟಕಗಳನ್ನು, ಯಕ್ಷಗಾನ ರೂಪಕ್ಕೆ ಹೇಗೆ ಅಳವಡಿಸಬಹುದು ಎಂಬುದಕ್ಕೆ 'ಸೂರ್ಯಶಿಕಾರಿ' ಉತ್ತಮ ಮಾದರಿ. 'ಸೂರ್ಯಶಿಕಾರಿ' ನ ಈ ಪ್ರಯೋಗ ರಾಜ್ಯದೆಲ್ಲೆಡೆ ಪ್ರದರ್ಶಿಸಲು ದುಡಿಯುವ ಜನರ ಸಂಘಟನೆಗಳು ಪ್ರಯತ್ನಿಸುವುದು ಒಳ್ಳೆಯದು.

ನಿರ್ಣಯಗಳು

ಕನಕ ಗೋಪುರ ವಿವಾದ ಕುರಿತು

ಉಡುಪಿ ಶ್ರೀ ಕೃಷ್ಣ ದೇವಸ್ಥಾನದ ಭಾಗವಾದ ಕನಕ ಗೋಪುರವನ್ನು ಕೆಡವಿದ ಕುರಿತು ರಾಜ್ಯಾದ್ಯಂತ ನಡೆಯುತ್ತಿರುವ ವಾದ ವಿವಾದಗಳನ್ನು, ಪ್ರತಿಭಟನೆಗಳನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮ್ಮೇಳನವು ಗಂಭೀರವಾಗಿ ಪರಿಗಣಿಸುತ್ತದೆ. ಕೃಷ್ಣ ದೇವಾಲಯವು ಇಡೀ ಸಮಾಜದ ಸ್ವತ್ತಾಗಿದ್ದು, ಅದರ ಭಾಗವಾದ ಕನಕ ಗೋಪುರವನ್ನು ಸಮಾಜದ ಅನುಮತಿಯಿಲ್ಲದೆ ಪರ್ಯಾಯ ಮಠಾಧೀಶರು ಕೆಡವಿದ್ದು ಅಕ್ರಮವೆಂದು ಈ ಸಮ್ಮೇಳನವು ಪರಿಗಣಿಸುತ್ತದೆ. ಈ ದೇವಸ್ಥಾನದಲ್ಲಿ ಆಚರಣೆಯಲ್ಲಿರುವ ಜಾತಿಬೇಧ, ಪಂಕ್ತಿಭೇದ ಇತ್ಯಾದಿ ಅನಿಷ್ಟಗಳನ್ನು ಕೊನೆಗೊಳಿಸಿ ಸದ್ರಿ ದೇವಸ್ಥಾನವನ್ನು ಸಾರ್ವಜನಿಕರ ಬಳಿಗೆಮುಕ್ತಗೊಳಿಸುವ ಮೂಲಕ ಮಾತ್ರವೇ ಜಾತಿ ಜಾತಿಗಳ ನಡುವಿನ ವೈಷಮ್ಯವನ್ನು ಕೊನೆಗೊಳಿಸಲು ಸಾಧ್ಯವೆಂದು ಈ ಸಮ್ಮೇಳನವು ಪರಿಗಣಿಸುತ್ತದೆ. ರಾಜ್ಯ ಸರ್ಕಾರವು ಶ್ರೀ ಕೃಷ್ಣ ದೇವಾಲಯಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ ಈ ದೇವಾಲಯದಲ್ಲಿ ಸಾರ್ವಜನಿಕರಿಗೆ ಸಮಾನ ಅವಕಾಶಗಳನ್ನು ಖಾತ್ರಿಗೊಳಿಸಬೇಕೆಂದು ಈ ಸಮ್ಮೇಳನವು ಒತ್ತಾಯಿಸುತ್ತದೆ.

ಕನಕಗೋಪುರ ಧ್ವಂಸವು ಸಾರ್ವಜನಿಕ ಆಸ್ತಿಯ ಮೇಲಿನ ಅಕ್ರಮ ಕೃತ್ಯವಾಗಿದ್ದು, ಇದರಿಂದಾಗಿ ಹಿಂದುಳಿದ ವರ್ಗದ ಜನತೆಯ ಮನಸ್ಸಿಗೆ ನೋವುಂಟಾಗಿರುವ ಅಂಶವನ್ನು ಸಮ್ಮೇಳನವು ಗಂಭೀರವಾಗಿ ಪರಿಗಣಿಸಿದೆ. ಇಡೀ ಸಮಾಜದ ಆಸ್ತಿಯಾದ ಭಕ್ತಿಯ ಕೇಂದ್ರವನ್ನು ಸಮಾಜದ ಅನುಮತಿ ಪಡೆಯದೆ ಧ್ವಂಸಗೊಳಿರುವ ಅಂಶವು ಸಮಾಜದ ಸಾಮರಸ್ಯ ಕದಡುವ ಕ್ರಮವಾಗಿದೆ.

ಪರಂಪರೆಯಲ್ಲಿನ ವೈವಿಧ್ಯತೆ ವಿಭಿನ್ನತೆಯನ್ನು ಹಾಳುಗೆಡವಿ ಹಿಂದುತ್ವವಾದ ಪ್ರತಿಪಾದನೆ ನಡೆಸಿರುವ ಕೋಮುವಾದಿ ಶಕ್ತಿಗಳ ವ್ಯವಸ್ಥಿತ ಪಿತೂರಿಯ ಭಾಗವಾಗಿರುವ ಈ ಕ್ರಮವನ್ನು ಸಮ್ಮೇಳನ ಖಂಡಿಸುತ್ತದೆ. ಈ ಪ್ರಶ್ನೆಯಲ್ಲಿ ಭಾವೋದ್ವೇಗಗಳಿಗೆ ಒಳಗಾಗದೆ ಸಾಮಾಜಿಕ ಸಾಮರಸ್ಯ ಕಾಪಾಡಬೇಕೆಂದು ಸಮ್ಮೇಳನ ರಾಜ್ಯದ ಜನತೆಯಲ್ಲಿ ಮನವಿ ಮಾಡುತ್ತದೆ.

ಕಂದಕೇಳು

ಕಂದಕೇಳ್ ಹಿಂದೊಮ್ಮೆ ಗಾಂಧೀಜಿ ಎಂಬ
ಮಾನವನು ದೇಶಕ್ಕೆ ಆಗಿದ್ದ ಕಂಬ
ಗುಂಡಿಗಾಹುತಿಯಾದ ಆದೇಶ ಭಕ್ತ
ಆಮೇಲೆ ಒಂದೆ ಸಮ ಹರಿಯುತಿದೆ ರಕ್ತ

\- ವಿಡಂಬಾರಿ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12. 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH